# ಅಖಿಲ ಭಾರತ ಪತ್ರಿಕೆ

## ನವೆಂಬರ್ 2017



# ದೈವೀ ಪ್ರಭುವಿನ ನಿವಾಸ

ಬೆಲೆ : 15/-



*One must do things*
*with all the ardour of one's soul,*
*with all the strength of one's will...*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ದೈವೀ ಪ್ರಭುವಿನ ನಿವಾಸ"

**ಅನು: ಡಾ. ಕೆ.ಎಸ್. ಆಮೂರ**

ಭಗವಂತನ ಒಂದು ದೈವೀ ಕನಸು 3

**ಅನು: ಡಾ. ಬಿ.ಆರ್. ಭೀಡ**

ಆಧಾರಗಳು 12

**ಅನು: ಶ್ರೀ ಪುರುಷೋತ್ತಮ ಗಲಗಲಿ**

ಪ್ರಸರಿಸುವ ಕೇಂದ್ರ 22

**ಅನು: ಡಾ. ಕೆ.ಎಸ್. ಆಮೂರ**

ವಿಶಿಷ್ಟ ಆಧ್ಯಾತ್ಮಿಕ ಸಮುದಾಯದಲ್ಲಿ ಜೀವಿಸುವುದು 30

ದೈವೀ ಅಪ್ಪುಗೆಯ ವೃತ್ತವನ್ನು ವಿಸ್ತರಿಸುವುದು 56

**ಸಂಪಾದಕೀಯ:** ನಾವು ಈಗ ಶ್ರೀ ಅರವಿಂದಾಶ್ರಮ ಎಂದು ತಿಳಿದುಕೊಂಡಿರುವುದಕ್ಕೆ ತೊಂಬತ್ತೊಂದು ವರ್ಷಗಳು ಮುಗಿದಿವೆ, ಈ ಸಂಚಿಕೆ ಅದರ ಸ್ಮಾರಕೋತ್ಸವವನ್ನು ಆಚರಿಸುವಾಗ ಪ್ರಕಟವಾಗುತ್ತಿದೆ. ನವ್ಹೆಂಬರ 24, 1926ರ ಶ್ರೇಷ್ಠ ಘಟನೆಯ ನಂತರ ಈ ಆಶ್ರಮ ರೂಪ ತಾಳಿದೆ. ಅಲ್ಲಿ ನಡೆಯುತ್ತ ಬಂದಿರುವ ಯೋಗಾಚರಣೆ ಈಗ ಬಹಳ ದೂರದವರೆಗೆ ಹಾಗೂ ವಿಸ್ತಾರವಾಗಿ ಹರಡಿಕೊಂಡಿದೆ. ಎಲ್ಲಿ ಬೇಕಾದಲ್ಲಿ ಆಚರಿಸಬಹುದಾದ ಯೋಗದ ಹೊರತಾಗಿ ಈ ಆಶ್ರಮ ಯಾವ ಸಂಶಯವಿಲ್ಲದೆ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ತಮ್ಮ ತಪಸ್ಸಿನಿಂದ ಪೃಥ್ವಿ ಹಾಗೂ ಮನುಷ್ಯನ ಮೇಲೆ ಕೆಳಗಿಳಿಸಿ ತಂದ ಹೊಸ ದೈವೀ ಪ್ರಜ್ಞೆಯನ್ನು ಪ್ರಸರಿಸುವ ಕೇಂದ್ರ ಪ್ರಭಾವದೊಂದಿಗೆ ಉಳಿದುಕೊಂಡಿದೆ. ಹೆಚ್ಚು ವಿಶೇಷದ್ದಾಗಿ ಹಾಗಾಗಿ ನಿರಂತರ ಮಹತ್ವವುಳ್ಳದ್ದಾಗಿ ಅದು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ತಮ್ಮ ಯೋಗದ ನೆರವೇರಿಕೆಗಾಗಿ ಆಯ್ದುಕೊಂಡ ನಿವಾಸವಾಗಿದೆಯಷ್ಟೇ ಅಲ್ಲ ಆದರೆ ಅವರ ತಪಸ್ಸಿನ ಸ್ಥಾನ ಕೂಡ ಆಗಿದೆ. ಬೇರೆ ಕಾರಣಗಳಿಗಾಗಿ ಅಲ್ಲದಿದ್ದರೂ ಇದಕ್ಕಾಗಿ ಮಾತ್ರ, ಈ ಮಾರ್ಗದಲ್ಲಿ ಸಾಗಿ ಹೋಗುವುವರಿಗೆ ಶ್ರೀ ಅರವಿಂದಾಶ್ರಮ ಬಹಳ ಪ್ರೀತಿಯ ಹಾಗೂ ಪವಿತ್ರವಾದ ಸ್ಥಾನವಾಗಿ ಉಳಿದುಕೊಳ್ಳುತ್ತದೆ. ಭೌಗೋಲಿಕ ಮೇರೆಗಳಿಂದ ಈ ಯೋಗ ಸೀಮಿತಗೊಳ್ಳದೆ ಇದ್ದರೂ ಯೋಗಾಚರಣೆ ಕೈಕೊಳ್ಳುವವರು ಎಲ್ಲೆಡೆ ಇದ್ದರೂ ಆಶ್ರಮ ಕೇವಲ ಅದರ ಅಸ್ತಿತ್ವದಿಂದ ಪೃಥ್ವಿಯ ಪೋಷಣೆಗೆ ಭಗವಂತನತ್ತ ಇರುವ ಅಭೀಪ್ಸೆಯ ಬೇರುಗಳಲ್ಲಿಯೇ ದೈವೀ ಸಹಾಯವನ್ನು ಒದಗಿಸುತ್ತದೆ. ಹಾಗಾಗಿ ನಾವು ಆಶ್ರಮದ ಕೆಲವೊಂದು ಮುಖಗಳತ್ತ ಹಾಗೂ ಮೂಲಭೂತ ಮಾರ್ಗದರ್ಶನ ತತ್ವಗಳತ್ತ, ನೋಟವೊಂದನ್ನು ಕೊಡಲು ಪ್ರಯತ್ನಿಸಿದ್ದೇವೆ. ಸಹಜವಾಗಿ ಸ್ಥಳದ ಅಭಾವದಿಂದಾಗಿ ಆಶ್ರಮ ಜೀವನದ ಹಲವಾರು ಬದಿಗಳಿರುವ ಸಂಕೀರ್ಣತೆಗಳೊಡನೆ ವ್ಯವಹರಿಸಲು ಸಾಧ್ಯವಾಗಿಲ್ಲ. ಕೇವಲ ಕೆಲವೊಂದು ಮುಖಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

*

ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡವರು, ತಮ್ಮ ಆಂತರಿಕ ಸತ್ತೆಯಲ್ಲಿ ಅವರಿಗೆ ಹತ್ತಿರವಾದವರು, ಅವರ ಸಂಕಲ್ಪದೊಂದಿಗೆ ಏಕತೆಯಲ್ಲಿದ್ದವರು ಅವರಿಗೆ ಅತಿ ಹತ್ತಿರವಿರುವ ಮಕ್ಕಳಾಗಿರುತ್ತಾರೆ– ದೈಹಿಕವಾಗಿ ಅವರ ಹತ್ತಿರ ಬರುವವರಲ್ಲ.

**CWSA, 32/496** – ಶ್ರೀ ಅರವಿಂದರು

*

## ಭಗವಂತನ ಒಂದು ದೈವೀ ಕನಸು

ಪೃಥ್ವಿಯ ಮೇಲೆ ಎಲ್ಲಿಯೋ ಒಂದೆಡೆಯಲ್ಲಿ ಯಾವ ದೇಶವೂ ತನ್ನದೆಂದು ಹಕ್ಕು ಸಾಧಿಸದ ಒಂದು ಸ್ಥಳವಿರಬೇಕು, ಅಲ್ಲಿ ಸದಿಚ್ಛೆಯಿರುವ ಹಾಗೂ ನಿಷ್ಕಪಟ ಅಭೀಪ್ಸೆ ಇರುವ ಮಾನವ ಸತ್ತೆಗಳು ಮುಕ್ತವಾಗಿ ಜಗತ್ತಿನ ನಾಗರಿಕರೆಂದು ಇರಬೇಕು. ಅವರು ಕೇವಲ ಪರಮೋಚ್ಚ ಸತ್ಯದ ಅಧಿಕಾರಕ್ಕೆ ವಿಧೇಯ–ರಾಗಿರಬೇಕು. ಆ ಸ್ಥಳ ಶಾಂತಿ, ಮೈತ್ರಿ ಹಾಗೂ ಸಾಮರಸ್ಯವಿರುವಂತಹ ದಾಗಿರಬೇಕು; ಅಲ್ಲಿ ಮನುಷ್ಯನ ಎಲ್ಲ ಹೋರಾಟ ನಡೆಸುವ ಸಹಜ ಗುಣಗಳು ಪ್ರತ್ಯೇಕವಾಗಿ ಅವನ ವೇದನೆಗಳು ಹಾಗೂ ದುಃಖಗಳು ಇವುಗಳ ಮೇಲೆ ಜಯ ಸಾಧಿಸಬೇಕು, ತನ್ನ ದೌರ್ಬಲ್ಯವನ್ನು ಹಾಗೂ ಅಜ್ಞಾನವನ್ನು ಗೆಲ್ಲಬೇಕು, ಸೀಮಿತೆಗಳು ಹಾಗೂ ಕ್ಷಮತೆ ಇಲ್ಲದಿರುವಿಕೆ ಇವುಗಳ ಮೇಲೆ ಜಯ ಪಡೆಯಬೇಕು; ಆ ಸ್ಥಳದಲ್ಲಿ ಆತ್ಮದ ಆವಶ್ಯಕತೆ ಹಾಗೂ ಪ್ರಗತಿಗಾಗಿ ಕಾಳಜಿ ಇವು ಆಸೆಗಳ ಹಾಗೂ ಭಾವೋದ್ರೇಕಗಳ ತೃಪ್ತಿ, ಹರ್ಷಕ್ಕಾಗಿ ಹಾಗೂ ಪ್ರಾಪಂಚಿಕ ಸಂತೋಷಕ್ಕಾಗಿ ಶೋಧದ ಮೇಲೆ ಆದ್ಯತೆ ಪಡೆಯಬೇಕು. ಈ ಸ್ಥಳದಲ್ಲಿ ಮಕ್ಕಳು ತಮ್ಮ ಆತ್ಮಗಳೊಂದಿಗೆ ಸಂಪರ್ಕ ಕಳೆದುಕೊಳ್ಳದೆ ಬೆಳೆಯಲು ಹಾಗೂ ಸಮಗ್ರವಾಗಿ ಅಭಿವೃದ್ಧಿ ಹೊಂದಲು ಶಕ್ತರಾಗುತ್ತಾರೆ; ಪರೀಕ್ಷೆಗಳನ್ನು ಪಾಸು ಮಾಡಲು, ಇಲ್ಲವೆ ಪ್ರಮಾಣ ಪತ್ರ (certificate)ಗಳನ್ನು, ಸ್ಥಾನ ಮಾನ (position) ಗಳನ್ನು ದೊರಕಿಸಲು ಶಿಕ್ಷಣವನ್ನು ಕೊಡಲಾಗುವುದಿಲ್ಲ, ಆದರೆ ಅಸ್ತಿತ್ವದಲ್ಲಿರುವ ಕಾರ್ಯನಿರ್ವಾಹಕ ಶಕ್ತಿಯನ್ನು ಶ್ರೀಮಂತಗೊಳಿಸುವುದಕ್ಕಾಗಿ ಮತ್ತು ಹೊಸದಾದವುಗಳನ್ನು ಮುಂದೆ ತರುವುದಕ್ಕಾಗಿ ಆ ಶಿಕ್ಷಣವಿರುತ್ತದೆ. ಈ ಸ್ಥಳದಲ್ಲಿ ಬಿರುದುಗಳು ಹಾಗೂ ಸ್ಥಾನಮಾನಗಳು ಇವುಗಳ ಸ್ಥಳದಲ್ಲಿ ಸೇವೆಗಾಗಿ

ಹಾಗೂ ಸಂಘಟನೆಗಾಗಿ ಅವಕಾಶಗಳಿರುತ್ತವೆ; ಪ್ರತಿಯೊಬ್ಬನ ದೇಹದ ಆವಶ್ಯಕತೆಗಳನ್ನು ಪೂರೈಸಿ ಕೊಡಲಾಗುತ್ತದೆ. ಹಾಗೂ ಬೌದ್ಧಿಕ, ನೈತಿಕ, ಹಾಗೂ ಆಧ್ಯಾತ್ಮಿಕ ಹೆಚ್ಚುಗಾರಿಕೆಯನ್ನು, ಸರ್ವಸಾಧಾರಣ ಸಂಘಟನೆಯಲ್ಲಿ ಜೀವನದಲ್ಲಿ ಹರ್ಷಗಳನ್ನು, ಜೀವನದ ಸೌಖ್ಯಗಳನ್ನು ಹೆಚ್ಚಿಸಿಕೊಳ್ಳುವುದು ಪ್ರದರ್ಶನ ಮಾಡುವುದಕ್ಕಲ್ಲ, ಆದರೆ ಹೆಚ್ಚಾಗುತ್ತಿರುವ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿ–ಗಳನ್ನು ವಹಿಸುವುದಕ್ಕಾಗಿರುತ್ತದೆ. ಸೌಂದರ್ಯ ಅದರ ಎಲ್ಲ ಕಲಾತ್ಮಕ ರೂಪಗಳಾದ ವರ್ಣಚಿತ್ರ ಬಿಡಿಸುವಿಕೆ, ಶಿಲ್ಪಕಲೆ, ಸಂಗೀತ, ಸಾಹಿತ್ಯ ಇವೆಲ್ಲವು ಎಲ್ಲರಿಗೂ ಲಭ್ಯವಾಗುವಂತಿರುತ್ತವೆ, ಅದು ತರುವ ಸಂತೋಷದಲ್ಲಿ ಪಾಲುಗೊಳ್ಳುವಿಕೆ ಕೇವಲ ಪ್ರತಿಯೊಬ್ಬನ ಕ್ಷಮತೆಗನುಗುಣವಾಗಿ ಸೀಮಿತವಾಗಿ–ರುತ್ತದೆ, ಆದರೆ ಸಾಮಾಜಿಕ ಇಲ್ಲವೆ ಆರ್ಥಿಕ ಸ್ಥಾನಮಾನದಿಂದಲ್ಲ. ಏಕೆಂದರೆ ಈ ಆದರ್ಶ ಸ್ಥಳದಲ್ಲಿ ಧನ ಇನ್ನು ಮುಂದೆ ಸಾರ್ವಭೌಮ ಪ್ರಭುವಾಗಿರುವುದಿಲ್ಲ; ವ್ಯಕ್ತಿಗತ ಯೋಗ್ಯತೆಗೆ ಪ್ರಾಪಂಚಿಕ ಸಂಪತ್ತು ಹಾಗೂ ಸಾಮಾಜಿಕ ಸ್ಥಾನಮಾನಗಳಿಂದ ಬರುವುದಕ್ಕಿಂತ ಶ್ರೇಷ್ಠತರ ಮಹತ್ವ ಇರುತ್ತದೆ. ಅಲ್ಲಿ ಮನುಷ್ಯ ತನ್ನ ಉಪಜೀವನಕ್ಕಾಗಿ ಕಾರ್ಯ ಮಾಡುವುದಿರುವುದಿಲ್ಲ, ಆದರೆ ಇಡೀ ಸ್ವರೂಪದ ಸಮುದಾಯಕ್ಕೆ ಸೇವೆ ಸಲ್ಲಿಸುತ್ತ ತನ್ನನ್ನು ಪ್ರಕಟಿಸುವುದು ಹಾಗೂ ತನ್ನ ಕ್ಷಮತೆಗಳನ್ನು ಹಾಗೂ ಸಾಧ್ಯತೆಗಳನ್ನು ಅಭಿವೃದ್ಧಿಪಡಿಸುವುದು ಇರುತ್ತದೆ. ಆ ಸಮುದಾಯ ತನ್ನ ಭಾಗವೆಂದಾಗಿ ಪ್ರತಿಯೊಬ್ಬ ವ್ಯಕ್ತಿಗೆ ಜೀವನಾಧಾರವನ್ನು ಹಾಗೂ ಕಾರ್ಯಕ್ಷೇತ್ರವನ್ನು ಒದಗಿಸಬೇಕು. ಸ್ವಲ್ಪದರಲ್ಲಿ ಹೇಳುವುದಾದರೆ, ಆ ಸ್ಥಳದಲ್ಲಿ ಸಾಮಾನ್ಯವಾಗಿ ಬಹುಮಟ್ಟಿಗೆ ಪ್ರತ್ಯೇಕವಾಗಿ ಸ್ಪರ್ಧೆ ಹಾಗೂ ಹೋರಾಟದ ಆಧಾರ ಹೊಂದಿರುವುಗಳ ಸ್ಥಾನದಲ್ಲಿ ಮಾನವ ಸಂಬಂಧಗಳು ಒಳ್ಳೆಯದನ್ನು ಕೈಕೊಳ್ಳುವುದರಲ್ಲಿ ಉತ್ಸಾಹಪೂರ್ಣ ಅನುಕರಣವಿರುವ ಸಹಕಾರದ ಹಾಗೂ ಭ್ರಾತೃತ್ವದ ಸಂಬಂಧಗಳನ್ನು ಇರಿಸುವುದಾಗಿದೆ.

ಪೃಥ್ವಿ, ನಿಜವಾಗಿ, ಇಂತಹ ಆದರ್ಶವನ್ನು ಸಿದ್ಧಿಸಿಕೊಳ್ಳಲು ತಯಾರಾಗಿಲ್ಲ, ಏಕೆಂದರೆ ಮನುಕುಲ ಇನ್ನೂ ಅದನ್ನು ತಿಳಿದುಕೊಳ್ಳಲು ಹಾಗೂ ತೆಗೆದುಕೊಳ್ಳಲು ಸಾಕಷ್ಟು ಜ್ಞಾನ ಹೊಂದಿಲ್ಲ ಇಲ್ಲವೆ ಅದನ್ನು ಕಾರ್ಯರೂಪದಲ್ಲಿ ತರಲು ಅತ್ಯಗತ್ಯವಾದ ಪ್ರಜ್ಞಾಪೂರ್ಣ ಶಕ್ತಿ ಅದರಲ್ಲಿರುವುದಿಲ್ಲ, ಆ ಕಾರಣದಿಂದಾಗಿ ನಾನು ಅದನ್ನು ಒಂದು ಕನಸೆಂದು ಕರೆಯುತ್ತೇನೆ.

ಮತ್ತು ಆದಾಗ್ಯೂ ಈ ಕನಸು ಒಂದು ನೈಜತೆಯಾಗುವ ಪಥದಲ್ಲಿದೆ, ಒಂದು ಸಣ್ಣ ಪ್ರಮಾಣದಲ್ಲಿ, ಶ್ರೀ ಅರವಿಂದಾಶ್ರಮದಲ್ಲಿ ಅದಕ್ಕಾಗಿ ನಾವು ಹೆಣಗುತ್ತಿದ್ದೇವೆ, ಅದು ನಮ್ಮ ಸೀಮಿತ ಸಾಧನಗಳ ಪ್ರಮಾಣದಲ್ಲಿದೆ. ಸಿದ್ಧಿಸಿಕೊಂಡದ್ದು ಪರಿಪೂರ್ಣವಾಗುವುದು ಇನ್ನೂ ಬಹಳ ದೂರದಲ್ಲಿದೆ, ಆದರೆ ಅದು ಪ್ರಗತಿಪರವಾಗಿದೆ; ಸ್ವಲ್ಪ ಸ್ವಲ್ಪವಾಗಿ ನಾವು ನಮ್ಮ ಗುರಿಯತ್ತ ಮುನ್ನಡೆ ಸಾಧಿಸುತ್ತಿದ್ದೇವೆ; ಸದ್ಯದ ಅಸ್ತವ್ಯಸ್ತತೆಯಲ್ಲಿರುವ ಜಗತ್ತಿಗೆ ಒಂದು ದಿನ ನಮ್ಮ ಗುರಿ ಹೆಚ್ಚು ಸಾಮರಸ್ಯದ್ದಾದ ಹಾಗೂ ಸತ್ಯವಾದ ಹೊಸದೊಂದು ಜೀವನದಲ್ಲಿ ಜನ್ಮ ತಾಳಲು, ಆ ಅಸ್ತವ್ಯಸ್ತತೆಯಿಂದ ಹೊರಹೊಮ್ಮಲು ವ್ಯವಹಾರೋಪಯುಕ್ತವಾಗಿದೆ, ಪರಿಣಾಮಕಾರಿ ಮಾರ್ಗವಾಗಿದೆ ಎಂದು ತೋರಿಸಿಕೊಡಲು ಶಕ್ತರಾಗುತ್ತೇವೆ ಎಂಬ ಭರವಸೆ ನಮ್ಮಲ್ಲಿದೆ.

**CWM, 12/93–94** **– ಶ್ರೀಮಾತೆ**

*

**ಒಂದು ವಿಶಿಷ್ಟ ರೂಪ ತಾಳುವಿಕೆ**

ನಾನು ದೈವೀ ಧ್ವನಿಯೊಂದನ್ನು ಕೇಳಿದೆ ಹಾಗೂ ಈ ದೈವೀ ಸಾಮರ್ಥ್ಯ, ಈ ದೈವೀ ಪ್ರಕಾಶ ಹಾಗೂ ಇಲ್ಲಿ ಏಕಾಗ್ರತೆಯಲ್ಲಿರುವ ಸಿದ್ಧಿಯ ದೈವೀ ಶಕ್ತಿ ಇವುಗಳೊಂದಿಗೆ ಎಚ್ಚತ್ತುಕೊಂಡೆ ಆ ದೈವೀ ಶಕ್ತಿ ಪ್ರತಿಯೊಂದನ್ನು ಚಲನೆಯಲ್ಲಿರಿಸುತ್ತದೆ, (ಯಾವಾಗಲೂ ಆಗುವ ಹಾಗೆ ಚಲನೆಯಲ್ಲಿರುವ ದೈವೀ ಸಾಮರ್ಥ್ಯವಾಗಿರುತ್ತದೆ) ಅದು ಥಳಥಳಿಸುವ ಶುಭ್ರ ಪ್ರಕಾಶವಾಗಿತ್ತು. ಆದರೆ ಆಗ ತಮಾಷೆ ಎಂದು ನನಗೆ ಕಂಡು ಬಂದದ್ದೆಂದರೆ ಅಲ್ಲಿ ನಾನು ನನ್ನ ಸ್ವಾಭಾವಿಕ ಸ್ಥಿತಿಯಲ್ಲಿದ್ದೆ ಮತ್ತು ಈ ಆಶ್ರಮ ನನ್ನ ಒಂದು ಚಿಕ್ಕ ಭಾಗವಾಗಿತ್ತು. ಆ ಅನುಭವದಾದ್ಯಂತ ಅದು ಆ ರೀತಿ ನನ್ನ ಚಿಕ್ಕ ಭಾಗವಾಗಿ ಉಳಿದುಕೊಂಡಿತು, ಉಳಿದ ಪ್ರತಿಯೊಂದೂ ಏಕಾಗ್ರತೆಯಲ್ಲಿರಲಿಲ್ಲ ಎಂದು ಹೇಳಲಾರೆ, ಅದರೆ ಸಾಮಾನ್ಯವಾಗಿ ಪ್ರತಿ ರಾತ್ರಿಯಲ್ಲಿರುವಂತೆ ಇಡಿಯಾಗಿ, ಸರ್ವ ಸಾಧಾರಣವಾಗಿ, ಆದ್ಯಂತ ಚಟುವಟಿಕೆಯಿದ್ದಂತಹದಾಗಿ ಇದ್ದಿತು. ನಾನು ಆಶ್ರಮವನ್ನು ಸ್ಪಷ್ಟವಾಗಿ ನೋಡಿದೆ– ಅದು ವಿಶಿಷ್ಟವಾದ ಏನೋ ಒಂದಾಗಿದ್ದಿತು, ವಿಶಿಷ್ಟ ಕಾರಣಗಳಿಗಾಗಿ ತಯಾರು ಮಾಡಿದ್ದಾಗಿತ್ತು. ಆದರೆ ನಾನು ಭವ್ಯ ದೇಹ ಧರಿಸಿದ ಹಾಗಿತ್ತು, ಅದು ನನ್ನಲ್ಲಿ ಬಹಳ ಚಿಕ್ಕದಾಗಿತ್ತು.

ಆಶ್ರಮದ ಮೂಲಕ ಪ್ರತಿನಿಧಿಸುತ್ತಿದ್ದ ರೂಪತಾಳುವಿಕೆ ಇಲ್ಲಿ ನಾನಿದ್ದುದಕ್ಕೆ ಸಂಬಂಧಿಸಿದ ಹಾಗೆ ಹೊಕ್ಕಳಿರುವಷ್ಟು ಎತ್ತರದಲ್ಲಿ ಸ್ಥಾಪಿತವಾಗಿತ್ತು. ದೇಹ ಗಡಿಯಾಗಿರದೆ ಹೋಗಿದ್ದರೂ ಅದಕ್ಕೆ ಕೆಲವೊಂದು ಗುಣಲಕ್ಷಣಗಳಿದ್ದವು, ಇಲ್ಲವೆ ವ್ಯಾಖ್ಯಿಸಲಾಗದ ರೂಪಗಳಿದ್ದವು. ಅವುಗಳಲ್ಲಿ ಪ್ರತಿಯೊಂದು ಭಾಗ ಒಂದು ಇನ್ನೊಂದನ್ನು ಪ್ರತಿನಿಧಿಸುವ ದೇಹದ ಭಾಗವಾಗಿದೆಯೇನೋ ಎಂಬಂತೆ ಸ್ಥಾಪಿತವಾಗಿದ್ದಿತು. ಪ್ರತಿಯೊಂದು ಒಂದು ಚಟುವಟಿಕೆ ಇಲ್ಲವೆ ಜಗತ್ತಿನ ಒಂದು ಭಾಗ ಇಲ್ಲವೆ ಪ್ರಕಟಣೆಯ ಒಂದು ರೀತಿ ಇವುಗಳ ಸಂಕೇತವಾಗಿರುತ್ತದೆ. ಹೀಗೆ ರೂಪತಾಳುವಿಕೆ ಇಲ್ಲಿ ಹೊಕ್ಕಳಿನ ಹತ್ತಿರ ಪ್ರಾರಂಭವಾಯಿತು ಹಾಗೂ ದೊಡ್ಡ ಕರುಳು ಪ್ರಾರಂಭವಾಗುವುದರ ಬಳಿ ಅಂಟಿಕೊಂಡಿರುವ ಹುಳುವಿನಾಕಾರದ ಬಾಲದತ್ತ ಕೆಳಗಿಳಿದು ಹೋಯಿತು.

ಅದರ ರೂಪ ಉದ್ದಮಾಡಿದ್ದಾಗಿತ್ತು, ಕೆಳಗೆ ವಾಲಿಕೊಂಡಿತ್ತು ಅದಕ್ಕೆ ಯಾವಾಗಲೂ ಈ ರೂಪವಿದೆ, ಮೇಲಿನ ತುದಿಯಲ್ಲಿ ಅದು ಶಿರದ ಹಾಗಿರುವಂತೆ ಕಂಡು ಬಂದಿತು, ನಂತರ ಎಳೆಗಳು ಕೆಳಗೆ ಮಾಯವಾದವು, ಅದಕ್ಕೆ ಆರಂಭದ ಭಾಗಗಳಿರಲಿಲ್ಲ ನಂತರ ಅದು ಅನೇಕ ಕಪ್ಪಾದ ಕೋಶಗಳಿಂದ ಸುತ್ತುವರಿದಿತ್ತು, ಬಹಳ ಕಪ್ಪಾದ ನೇರಳೆ ಬಣ್ಣದ್ದಾಗಿತ್ತು, ಅದು ರಕ್ಷಣೆಯ ಬಣ್ಣವಾಗಿದೆ. ಅದರಲ್ಲಿ ಕಿಡಿಗೆದರುವ ಪ್ರಕಾಶವೊಂದು ಪ್ರವೇಶ ಮಾಡುತ್ತಿತ್ತು– ಅದು ಪ್ರವೇಶ ಮಾಡುತ್ತ ಉಳಿದುಕೊಂಡಿತು, ಆದರೆ ಯಾವುದೇ ಬಗೆಯ ರಂಧ್ರವನ್ನುಂಟು ಮಾಡಲಿಲ್ಲ. ಅದು ಸರಿಯಾಗಿ ಪ್ರತಿಯೊಂದರಾದ್ಯಂತ, ನೇರಳೆ ಬಣ್ಣದ್ದಾದುದರಾದ್ಯಂತ– ಪ್ರತಿಯೊಂದರಾದ್ಯಂತ ಸಾಗಿ ಹೋಯಿತು. ಅದು ದಾಟಿಕೊಂಡು ಹೋಗಿ ಒಳಗೆ ಪ್ರವೇಶ ಮಾಡಿತು. ಅಲ್ಲಿ ಕಿರುಜಲಪಾತವಿರುವ ಹಾಗೆ ಪ್ರತಿಯೊಂದು ಬಣ್ಣದ ಕಿಡಿಗೆದರುವಿಕೆಗಳಿದ್ದವು. ಅಲ್ಲಿ ಯಾವಾಗಲೂ ಶಕ್ತಿಯ ಈ ಕಿರುಜಲಪಾತಗಳಿರುತ್ತವೆ– ಕಿರುಜಲಪಾತಗಳಿರುವಲ್ಲಿಯ ಪ್ರವಾಹ, ಅದರ ನೀರುಗಳು ಪ್ರವಹಿಸುವುದಿಲ್ಲ, ಮಾಯವಾಗುವುದಿಲ್ಲ ಆದರೆ ಸಂಗ್ರಹವಾಗುತ್ತವೆ, ಅದು ಚೈತನ್ಯಗಳ ಒಂದು ಸಂಗ್ರಹ, ಘನೀಕರಣ. ಮತ್ತು ಅವು ಹೆಚ್ಚಿನ ಜಾಗ ತೆಗೆದುಕೊಳ್ಳದೆ, ಒಂದು ಬಗೆಯ ಸಂಕುಚನವಿರುವ ಹಾಗೆ ಸಂಗ್ರಹವಾಗುತ್ತವೆ ಮತ್ತು ಒಳಭಾಗದಲ್ಲಿ ಅದು ಚಲಿಸುತ್ತಿರುವಂತಹದು, ಕಂಪಿಸುತ್ತಿರುವಂತಹದು, ಅದು ಕಂಪಿಸುತ್ತಲೇ ಇರುವಂತಹದು– ಅದೆಲ್ಲಿಂದ ಬರುತ್ತದೆ ಎಂಬುದು ನಿಮಗೆ ತಿಳಿದಿರುವುದಿಲ್ಲ, ಆದರೆ ಅದು ಬರುತ್ತಲೇ ಇರುತ್ತದೆ, ಸಂಗ್ರಹವಾಗುತ್ತಲೇ ಇರುತ್ತದೆ.

ಅದು ಕಿಡಿಗೆದರುತ್ತಿರುವ ಶುಭ್ರ ಪ್ರಕಾಶದೊಂದಿಗಿದ್ದ ಒಂದು ಶಕ್ತಿಯಾಗಿತ್ತು, ಅದು ದೈವೀ ಮಾತೆಯ ಶಕ್ತಿ ಮತ್ತು ಅದು ಸರಿಯಾಗಿ ಕಟ್ಟಿಗೊ(pack)ಳಗಾದಾಗ ಮತ್ತು ಒಳಗೆ ಕೇಂದ್ರೀಕರಣಗೊಂಡಾಗ ಇಲ್ಲವೆ ಘನೀಕರಣವಾದಾಗ ಅದು ಎಲ್ಲ ಬಗೆಯ ಬಣ್ಣಗಳನ್ನು ತೆಗೆದುಕೊಂಡಿತು– ಪ್ರತಿಯೊಂದು ಬಣ್ಣದ ಕಂಪನವಿತ್ತು. ಭೌತ ಸ್ಥಿತಿಯಲ್ಲಿರುವ ಹಾಗಿತ್ತು. ಈ ಬಣ್ಣಗಳು ದೈವೀ ಶಕ್ತಿ ಭೌತದ್ರವ್ಯದಲ್ಲಿ ಪ್ರವೇಶಿಸುತ್ತಿರುವಾಗಿನ ಅದರ ಭೌತ ಸ್ಥಿತಿಯ ಬಣ್ಣಗಳ ಹಾಗಿದ್ದವು. (ಭೌತದ್ರವ್ಯ–ಚೈತನ್ಯ (energy)ದ ಘನೀಕರಣವಿದ್ದ ಹಾಗೆ ಇದು ದೈವೀಶಕ್ತಿಯ ಘನೀಕರಣವಿದ್ದ ಹಾಗೆ ತೋರಿಬಂದಿತು.)

ಅನುಯಾಯಿಯೊಂದಿಗೆ ಮಾತುಕತೆ, ಜುಲೈ 12, 1960 – **ಶ್ರೀಮಾತೆ**

*

**ಆಶ್ರಮದಲ್ಲಿ ವಿಷಯಗಳನ್ನು ಹೇಗೆ ಕಾರ್ಯಗತಗೊಳಿಸಲಾಗುತ್ತದೆ?**

ಅಲ್ಲಿ ಎಂದೆಂದಿಗೂ ಯಾವ ಸಮಯದಲ್ಲೂ ಮಾನಸಿಕವಾದ ಒಂದು ಯೋಜನೆ, ಸ್ಥಿರಪಡಿಸಿದ ಒಂದು ಕಾರ್ಯಕ್ರಮ, ಇಲ್ಲವೆ ಸಂಘಟನೆ, ಮೊದಲೇ ನಿರ್ಧಾರಕ್ಕೊಳಪಡಿಸಿದಂತಹದು ಇರಲಿಲ್ಲ. ಇಡೀ ವಿಷಯ ಜನ್ಮತಾಳಿದೆ, ಬೆಳೆದಿದೆ ಹಾಗೂ ಜೀವಿಸುವ ಸತ್ತೆಯ ಹಾಗೆ ಪ್ರಜ್ಞೆ (chit-tapas)ಯ ಮೂಲಕ ಸತತ ಪಾಲಿಸಿಕೊಂಡು ಬಂದಿದೆ, ಹೆಚ್ಚಿಸಿದೆ ಹಾಗೂ ಬಲಪಡಿಸಿದೆ. ಪ್ರಜ್ಞಾಶಕ್ತಿ ಭೌತದ್ರವ್ಯದಲ್ಲಿ ಅವರೋಹಣ ಮಾಡುತ್ತಿದ್ದ ಹಾಗೆ ಹಾಗೂ ಹೊರಸೂಸುತ್ತಿದ್ದ ಹಾಗೆ ಅದನ್ನು ಅಭಿವ್ಯಕ್ತಪಡಿಸಲು ಹಾಗೂ ಪ್ರಕಟಿಸಲು ಯೋಗ್ಯ ಉಪಕರಣ–ಗಳನ್ನು ಅರಸುತ್ತದೆ. ಹೇಳದೆ ಇದ್ದಾಗಲೂ ತಿಳಿದು ಬರುವುದೇನೆಂದರೆ ಉಪಕರಣ ಹೆಚ್ಚು ತೆರೆದಿಟ್ಟುಕೊಂಡ ಹಾಗೆ, ಗ್ರಹಿಸುವಂತಾದ ಹಾಗೆ, ನಮ್ಯವಾದ ಹಾಗೆ ಪರಿಣಾಮಗಳು ಹೆಚ್ಚು ಒಳ್ಳೆಯವಾಗುತ್ತವೆ. ಮೃದುವಾದ ಹಾಗೂ ಸಾಮರಸ್ಯವಿರುವ ಕಾರ್ಯಗತಿಗೆ ಸಾಧಕರ ಒಳಗೆ ಹಾಗೂ ಆದ್ಯಂತವಾಗಿ ಮಾರ್ಗದಲ್ಲಿ ಅಡ್ಡಬರುವ ವಿಷಯಗಳು ಹೀಗಿವೆ:

1. ಪೂರ್ವಕಲ್ಪಿತ ವಿಚಾರಗಳು ಹಾಗೂ ಮಾನಸಿಕ ರಚನೆಗಳು ಪ್ರಜ್ಞಾಶಕ್ತಿಯ ಪ್ರಭಾವಕ್ಕೆ ಹಾಗೂ ಕಾರ್ಯಗತಿಗೆ ಮಾರ್ಗವನ್ನು ತಡೆಗಟ್ಟುತ್ತವೆ.
2. ಪ್ರಾಣಿಕದ ಆದ್ಯತೆಗಳು ಹಾಗೂ ಪ್ರಚೋದನೆಗಳು ಅಭಿವ್ಯಕ್ತಿಯನ್ನು ವಿರೂಪಗೊಳಿಸುತ್ತವೆ ಹಾಗೂ ಮಿಥ್ಯೆಯಾಗಿಸುತ್ತವೆ.

ಇವೆರಡೂ ಅಹಂಕಾರದ ಸ್ವಾಭಾವಿಕ ಉತ್ಪಾದನೆಗಳಾಗಿವೆ. ಇವೆರಡರ ಹಸ್ತಕ್ಷೇಪವಿಲ್ಲದಿದ್ದರೆ ನನ್ನ ಭೌತಿಕ ಮಧ್ಯ ಪ್ರವೇಶಿಸುವಿಕೆ ಅವಶ್ಯವಾಗುವುದಿಲ್ಲ.

"ಶ್ರೀಮಾತೆಯವರು ಇಷ್ಟಪಡುತ್ತಾರೆ, ಶ್ರೀಮಾತೆಯವರು ಇಷ್ಟಪಡುವುದಿಲ್ಲ" ಎಂಬ ಹೇಳಿಕೆಗಳಲ್ಲಿ ನಿನಗೆ ವಿಶ್ವಾಸ ಇಲ್ಲದೆ ಇರುವುದು ಬಹಳ ಸರಿಯಾಗಿದೆ, ಅದು ಬಾಲಿಶ ಅರ್ಥ ವಿವರಣೆ.

ಅಲ್ಲಿ ದೈವೀ ಶಕ್ತಿ ಹಾಗೂ ದೈವೀಪ್ರಜ್ಞೆ ಇವು ಕಾರ್ಯನಿರತವಾಗಿರುವ ಸ್ಪಷ್ಟ ನಿಖರವಾದ ಗ್ರಹಿಕೆ ಇದೆ, ಮತ್ತು ಈ ದೈವೀ ಶಕ್ತಿ ವಿರೂಪಕ್ಕೊಳಗಾದಾಗೆಲ್ಲ ಇಲ್ಲವೆ ಪ್ರಜ್ಞೆಯನ್ನು ಅದರ ಕಾರ್ಯದಲ್ಲಿ ಮಬ್ಬುಗೊಳಿಸಿದಾಗೆಲ್ಲ ನಾನು ಮಧ್ಯೆ ಪ್ರವೇಶಿಸಬೇಕಾಗುತ್ತದೆ ಹಾಗೂ ಆ ಚಲನೆಯನ್ನು ಸರಿಪಡಿಸಬೇಕಾಗುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ವಿಷಯಗಳು ಮಿಶ್ರಣಕ್ಕೊಳಗಾಗಿರುತ್ತವೆ ಮತ್ತು ಅಲ್ಲಿ ಮತ್ತೆ ನಕಲನ್ನು ಪರಿಶುದ್ಧವಾದುದರಿಂದ ಪ್ರತ್ಯೇಕಗೊಳಿಸಲು ಮಧ್ಯೆ ಪ್ರವೇಶಿಸ–ಬೇಕಾಗುತ್ತದೆ.

ಹಾಗಿರದಿದ್ದರೆ ಕ್ರಿಯೆಯ ದೊಡ್ಡ ಸ್ವಾತಂತ್ರ್ಯವನ್ನು ಎಲ್ಲರಿಗೂ ಬಿಟ್ಟುಕೊಡಲಾಗಿರುತ್ತದೆ, ಏಕೆಂದರೆ ದೈವೀ ಪ್ರಜ್ಞೆಯ ಶಕ್ತಿ ತನ್ನನ್ನು ಅಸಂಖ್ಯಾತ ರೀತಿಗಳಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸಬಲ್ಲದು ಮತ್ತು ಪ್ರಕಟನೆಯ ಪರಿಪೂರ್ಣತೆಗಾಗಿ ಹಾಗು ಸಮಗ್ರತೆಗಾಗಿ, ಕಾರಣದಿಂದ ಕಾರ್ಯವನ್ನು ತರ್ಕಿಸುವ ಯಾವುದೇ ರೀತಿಗಳನ್ನು ಪ್ರತ್ಯೇಕಿಸಿ ಇಡಬಾರದು; ಆಯ್ಕೆಯನ್ನು ಮಾಡುವುದಕ್ಕಿಂತ ಮೊದಲು ಬಹಳಷ್ಟು ಸಲ ಪರೀಕ್ಷೆಯನ್ನು ಕೊಡಲಾಗುವುದು.

**CWSA, 35/676-77** **- ಶ್ರೀ ಅರವಿಂದರು**

*

**ಹೊಸ ಜಗತ್ತಿನ ತೊಟ್ಟಿಲು**

ಮನುಕುಲದ ಸದ್ಯದ ಯಾವ ಸಿದ್ಧಿಗಳೂ, ಅವೆಷ್ಟೇ ಶ್ರೇಷ್ಠವಾಗಿರಲಿ. ನಾವು ಅನುಸರಿಸುವುದಕ್ಕೆ ಅವು ಆದರ್ಶಗಳಾಗಿರುವುದಿಲ್ಲ. ವಿಶಾಲವಾದ ಜಗತ್ತು ಮಾನವ ಆದರ್ಶಗಳ ಒಂದು ಕ್ಷೇತ್ರವಾಗಿದೆ.

ನಮ್ಮ ಉದ್ದೇಶ ಬಹಳ ಭಿನ್ನವಾಗಿದೆ ಮತ್ತು ಇದೀಗ ನಮ್ಮ ಯಶಸ್ಸಿನ ಯೋಗಾಯೋಗ (chance) ಗಳು ಕಡಿಮೆ ಇವೆ, ಆದರೆ ಭವಿಷ್ಯತ್ತನ್ನು ತಯಾರು

ಮಾಡುವುದಕ್ಕಾಗಿ ನಾವು ಕಾರ್ಯ ಕೈಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ನಮಗೆ ನಿಶ್ಚಿತತೆ ಇದೆ.

ಬಾಹ್ಯ ದೃಷ್ಟಿಕೋನದಿಂದ ನಾವು ಜಗತ್ತಿನಲ್ಲಿಯ ಸದ್ಯದ ಸಿದ್ಧಿಗಳ ಮಟ್ಟದ ಕೆಳಗಿದ್ದೇವೆ ಎಂಬುದು ನನಗೆ ತಿಳಿದಿದೆ, ಆದರೆ ನಮ್ಮ ಗುರಿ ಮಾನವ ಪ್ರಮಾಣಬದ್ಧತೆ (standard)ಗೆ ಅನುಗುಣವಾಗಿ ಇರುವ ಒಂದು ಪರಿಪೂರ್ಣತೆಯಲ್ಲ. ನಾವು ಭವಿಷ್ಯತ್ತಿಗೆ ಸೇರಿದ ಬೇರೊಂದರ ಸಲುವಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಆಶ್ರಮವನ್ನು ಸ್ಥಾಪಿಸಲಾಗಿದೆ ಮತ್ತು ಅದರ ಉದ್ದೇಶ ಅದು ಹೊಸ ಜಗತ್ತಿನ ತೊಟ್ಟಿಲಾಗುವುದಾಗಿದೆ.

ಸ್ಫೂರ್ತಿ ಮೇಲ್ಗಡೆಯಿಂದ ಬರುವಂತಹದು, ಮಾರ್ಗದರ್ಶನ ಮಾಡುವ ಶಕ್ತಿ ಮೇಲ್ಗಡೆಯಿಂದ ಬರುವಂತಹದು, ಅದು ಹೊಸ ಸಿದ್ಧಿಯ ಅವರೋಹಣಕ್ಕಾಗಿ ಕಾರ್ಯನಿರತವಾಗಿದೆ.

ಆಶ್ರಮ ಕೇವಲ ಅದರ ಕುಂದುಕೊರತೆಗಳಿಂದಾಗಿ, ಅಭಾವದಿಂದಾಗಿ ಹಾಗೂ ಅದರ ವಿಫಲತೆಗಳಿಂದಾಗಿ ಸದ್ಯದ ಜಗತ್ತಿಗೆ ಸೇರಿದುದಾಗಿದೆ.

ಮನುಕುಲದ ಸದ್ಯದ ಸಿದ್ಧಿಗಳಲ್ಲಿ ಯಾವುದೂ ಆಶ್ರಮವನ್ನು ಅದರ ತೊಂದರೆಗಳಿಂದ ಹೊರಗೆಳೆದು ತರಲು ಸಾಮರ್ಥ್ಯ ಹೊಂದಿಲ್ಲ.

ಅದರ ಸದಸ್ಯರ ಇಡಿಯಾದ ಪರಿವರ್ತನೆ ಹಾಗೂ ಅವರೋಹಣ ಮಾಡುತ್ತಿರುವ ದೈವೀ ಸತ್ಯದ ದೈವೀ ಪ್ರಕಾಶಕ್ಕೆ ಸಮಗ್ರವಾಗಿ ತೆರೆದಿಸಿಕೊಳ್ಳುವಿಕೆ ಇವುಗಳಿಂದ ಮಾತ್ರ ತನ್ನನ್ನು ಸಿದ್ಧಿಸಿಕೊಳ್ಳಲು ಸಹಾಯ ದೊರಕುವುದು.

ಕೈಕೊಳ್ಳಬೇಕಾದ ಕಾರ್ಯ, ನಿಸ್ಸಂಶಯವಾಗಿ, ದಿಗಿಲು ಹುಟ್ಟಿಸುವಂತಿದೆ. ಆದರೆ ನಾವು ಅದನ್ನು ಸಿದ್ಧಿಸಿಕೊಳ್ಳಬೇಕೆಂಬ ಆಜ್ಞೆಯನ್ನು ಸ್ವೀಕರಿಸಿದ್ದೇವೆ. ನಾವು ಕೇವಲ ಅ ಉದ್ದೇಶಕ್ಕಾಗಿ ಪೃಥ್ವಿಯ ಮೇಲಿದ್ದೇವೆ.

ನಾವು ದೈವೀ ಸಂಕಲ್ಪದಲ್ಲಿ ಹಾಗೂ ಪರಮೋಚ್ಚನ ಸಹಾಯದಲ್ಲಿ ವಿಶ್ವಾಸವನ್ನಿರಿಸಿ ಕೊನೆಯವರೆಗೆ ಮುಂದುವರಿಯುತ್ತ ಹೋಗುತ್ತೇವೆ.

ದ್ವಾರ ತೆರೆದುಕೊಂಡಿದೆ, ಮತ್ತು ಯಾರು ತಮ್ಮ ಜೀವನವನ್ನು ಅ ಉದ್ದೇಶಕ್ಕಾಗಿ ನೀಡಬೇಕೆಂದು ನಿರ್ಧರಿಸುವರೋ ಅಂತಹರಿಗಾಗಿ ಯಾವಾಗಲೂ ತೆರೆದುಕೊಂಡದ್ದಾಗಿ ಉಳಿದುಕೊಳ್ಳುತ್ತದೆ.

**CWM, 13/109-10** **- ಶ್ರೀಮಾತೆ**

*

**ಒಂದು ಘೋಷಣೆ**

ವಿಷಯಗಳನ್ನು ಮೇಲ್ಮೈಯಲ್ಲಿ ನೋಡುವ ಕೆಲವು ಜನರು ಆಶ್ರಮ ಈ ನಗರದಲ್ಲಿ ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿದೆ ಮತ್ತು ಅಲ್ಲಿರುವ ನಿವಾಸಿಗಳಿಗೆ ಅದು ಇಷ್ಟವಾಗಿರದೆ ಇರುವುದೇಕೆ ಎಂದು ಕೇಳಬಹುದು.

ಮೊಟ್ಟಮೊದಲ ಹಾಗೂ ಕೂಡಲೆ ಕೊಡಬಹುದಾದ ಉತ್ತರವೆಂದರೆ ಆ ನಿವಾಸಿಗಳಲ್ಲಿ ಉಚ್ಚತರ ಪ್ರಮಾಣ ಬದ್ಧ (standard)ರಾದವರು, ಬುದ್ಧಿಮತ್ತೆ–ಯುಳ್ಳವರು, ಸದಿಚ್ಛೆಯಿದ್ದವರು, ಶಿಕ್ಷಣ ಪಡೆದವರು ಆಶ್ರಮವನ್ನು ಸ್ವಾಗತಿಸುತ್ತಾರಷ್ಟೇ ಅಲ್ಲ, ಆದರೆ ಅವರು ತಮ್ಮ ಸಹಾನುಭೂತಿಯನ್ನು, ಮೆಚ್ಚಿಕೆಯನ್ನು ಹಾಗೂ ಸದ್ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಪಾಂಡೀಚೇರಿಯಲ್ಲಿರುವ ಶ್ರೀ ಅರವಿಂದಾಶ್ರಮ ಬಹಳಷ್ಟು ನಿಷ್ಕಪಟರಾದ, ನಂಬಿಕೆಯುಳ್ಳವರಾದ ಅನುಯಾಯಿಗಳನ್ನು ಹೊಂದಿದೆ.

ಇದನ್ನು ಹೇಳಿದ ನಂತರ ನಮ್ಮ ನಿಲುವು ಸ್ಪಷ್ಟವಾಗಿದೆ.

ನಾವು ಯಾವುದೇ ಪಂಥದೊಂದಿಗೆ, ಯಾವುದೇ ಧರ್ಮದೊಂದಿಗೆ ಹೋರಾಡುವುದಿಲ್ಲ.

ನಾವು ಯಾವುದೇ ರೂಪದ ಸರಕಾರದೊಂದಿಗೆ ಹೋರಾಡುವುದಿಲ್ಲ.

ನಾವು ಯಾವುದೇ ಸಾಮಾಜಿಕ ವರ್ಗದೊಂದಿಗೆ ಹೋರಾಡುವುದಿಲ್ಲ.

ನಾವು ಯಾವುದೇ ದೇಶ ಇಲ್ಲವೆ ನಾಗರಿಕತೆಯ ವಿರುದ್ಧ ಹೋರಾಡುವುದಿಲ್ಲ.

ನಾವು ವಿಭಜನೆ, ಅಪ್ರಜ್ಞೆ, ಅಜ್ಞಾನ, ಜಡತ್ವ ಹಾಗೂ ಮಿಥ್ಯೆ ಇವುಗಳ ವಿರುದ್ಧ ಹೋರಾಡುತ್ತಿದ್ದೇವೆ.

ನಾವು ಪೃಥ್ವಿಯ ಮೇಲೆ ಏಕತೆ, ಜ್ಞಾನ, ಪ್ರಜ್ಞೆ, ದೈವೀ ಸತ್ಯ ಇವುಗಳನ್ನು ಸ್ಥಾಪಿಸಲು ಶ್ರಮಿಸುತ್ತಿದ್ದೇವೆ ಮತ್ತು ಯಾವುದು ಈ ಹೊಸ ದೈವೀ ಪ್ರಕಾಶ,

ದೈವೀ ಶಾಂತಿ, ದೈವೀ ಸತ್ಯ ಹಾಗೂ ದೈವೀ ಪ್ರೇಮ ಇವುಗಳ ಆಗಮನವನ್ನು ವಿರೋಧಿಸುವುದೋ ಅದರ ವಿರುದ್ಧ ಹೋರಾಡುತ್ತೇವೆ.

**CWM, 13/124-25** **- ಶ್ರೀಮಾತೆ**

*

ಶ್ರೀ ಅರವಿಂದಾಶ್ರಮವನ್ನು ಶ್ರೀಮಾತೆಯವರು ಸೃಷ್ಟಿಸಿದ್ದಾರೆ, ಅದನ್ನು ಹಾಗೂ ಅವರು ಕೈಕೊಳ್ಳುವ ಕಾರ್ಯವನ್ನು ಅವರೇ ಸೃಷ್ಟಿಸಿದ್ದಾರೆ, ಅದನ್ನು ಅವರಿಗೆ ಕೊಡಲಾಗಿಲ್ಲ ಮತ್ತು ಅದನ್ನು ಅವರಿಂದ ತೆಗೆದುಕೊಳ್ಳಲಾಗುವುದಿಲ್ಲ.

**CWSA, 32/83** **- ಶ್ರೀ ಅರವಿಂದರು**

*

“ಆಶ್ರಮವನ್ನು ಕುರಿತು ನೀನು ಮೂಲಭೂತ ತಪ್ಪು ಕಲ್ಪನೆಯಡಿಯಲ್ಲಿ ಶ್ರಮಿಸುತ್ತಿರುವಿ ಎಂದು ನನಗನಿಸುತ್ತದೆ. ಶ್ರೀ ಅರವಿಂದರು ಆಡಳಿತ ನಿರ್ವಹಣೆಯ ಕೆಲವೊಂದು ನಿಯಮಗಳು, ಶಾಸನಗಳು ಇಲ್ಲವೆ ಸ್ಥಿರಪಡಿಸಿದ ಆಜ್ಞೆ ನೀಡಬಹುದಾದ ಅಧಿಕೃತ ಅಪ್ಪಣೆ (regulations) ಇವುಗಳೊಡನೆ ಯೋಜಿಸಿ ಶ್ರೀ ಅರವಿಂದಾಶ್ರಮವನ್ನು ಒಂದು ಸಂಸ್ಥೆಯನ್ನಾಗಿ ಮಾಡಿಲ್ಲ. ಅದು ದೈವೀಸತ್ಯದ ಶಕ್ತಿಯಿಂದ ತಾನಾಗಿಯೇ ಬೆಳೆದುಕೊಂಡು ಬಂದಿದೆ, ಪ್ರಕಟಗೊಳ್ಳುತ್ತಿದೆ ಮತ್ತು ಕೇವಲ ದೈವೀಸತ್ಯದ ಚಲನೆಗಳನ್ನು ಮಾತ್ರ ಅನುಸರಿಸಬಲ್ಲದು. ಆಶ್ರಮ ಹಾಗೂ ಶ್ರೀ ಅರವಿಂದರು ಸಮಗ್ರವಾಗಿ ಇಡಿಯಾದುದಾಗಿದ್ದಾರೆ. ಆಶ್ರಮದಲ್ಲಿ ಅವರ ಸತ್ತೆ ಹರಡಿಕೊಂಡಿದೆ, ಒಟ್ಟುಗೂಡಿಸುತ್ತದೆ, ಆಶ್ರಮದ ಇಡೀ ಜೀವನವನ್ನು ತನ್ನಲ್ಲಿ ಹಾಗೂ ಏಕೈಕ ಸಾಮರಸ್ಯವಿರುವ ಆಧ್ಯಾತ್ಮಿಕ ಏಕತೆಯಲ್ಲಿ ಕೈಗೆತ್ತಿಕೊಳ್ಳುತ್ತದೆ. ಅದರ ಆತ್ಮ ದಿವ್ಯಾತ್ಮನ ಆತ್ಮ, ಅದರ ಬೆಳವಣಿಗೆ ದಿವ್ಯಾತ್ಮನ ಬೆಳವಣಿಗೆ. ಆಶ್ರಮವನ್ನು ಸಾಧಕರ ಒಂದು ಗುಂಪು ಇಲ್ಲವೆ ಸಮೂಹವೆಂದು ನೋಡುವುದು ಇಲ್ಲವೆ ಆಶ್ರಮ ಒಂದು ಜೀವನವನ್ನು ಇಲ್ಲವೆ ಅಭೀಪ್ಸೆಯನ್ನು ಇಲ್ಲವೆ ಗುರಿಯನ್ನು ಹೊಂದಿದೆಯೆಂದು ಹಾಗೂ ಅದು ಶ್ರೀ ಅರವಿಂದರಿಂದ ದೂರದಲ್ಲಿ ಅಸ್ತಿತ್ವದಲ್ಲಿದೆ ಇಲ್ಲವೆ ಇರಬಲ್ಲದು ಎಂದು ನೋಡುವುದು ಪೂರ್ತಿ ತಪ್ಪಾಗಿರುತ್ತದೆ. ಅದರ ಜೀವನ, ಚಲನೆಗಳು ಹಾಗೂ ಚಟುವಟಿಕೆಗಳು ಅಂತರಂಗದಿಂದಾಗುವ ಸಮಗ್ರವಾಗಿರುವ ಅದರ ಬೆಳವಣಿಗೆ ಹಾಗೂ ಅಭಿವೃದ್ಧಿಯ ಒಂದು ಅಭಿವ್ಯಕ್ತಿಯಾಗಿರುತ್ತದೆ. ಅದಕ್ಕೆ ಒಂದು ಶಾಸನದ ಹೊರತಾಗಿ ಬೇರೆ

ಶಾಸನಗಳಿಲ್ಲ, ನಿಯಮಗಳಿಲ್ಲ ಇಲ್ಲವೆ ಅಧಿಕೃತ ಅಪ್ಪಣೆಗಳಿಲ್ಲ; ಅ ಶಾಸನವೆಂದರೆ ಶ್ರೀ ಅರವಿಂದರಲ್ಲಿ ಹಾಗೂ ಅವರ ಮೂಲಕ ಆಧ್ಯಾತ್ಮಿಕ ಬೆಳವಣಿಗೆ ಹಾಗೂ ಅಭಿವೃದ್ಧಿ ಮಾಡುವುದಾಗಿದೆ."

ಶ್ರೀ ಅರವಿಂದರ ನಿರ್ದೇಶನದಡಿಯಲ್ಲಿ ಸಾಧಕನೊಬ್ಬ ಬರೆದ ಪತ್ರ, ಆ ಪತ್ರವನ್ನು ಅವರು ತಿದ್ದಿದ್ದರು. ಅಮಲ ಕಿರಣ ಬರೆದ ಪುಸ್ತಕ "Our Light and Delight" p. 8-9 ದಿಂದ ಉಲ್ಲೇಖಿಸಿದ್ದು.

*

## ಆಧಾರಗಳು

**ಕುಗ್ಗಿಸಿದ ಜೀವನದ ಪ್ರತೀಕ**

ಆ ದೃಷ್ಟಿಕೋನದಿಂದ ಸಾಧಕ ಹೇಗಿರಬೇಕು ಎಂಬ ನಿನ್ನ ಅಭಿಪ್ರಾಯವನ್ನು ಮೆಚ್ಚಿಕೊಳ್ಳುತ್ತೇನೆ, ನೀನು ಹೇಳುವುದು ಬಹಳ ಸರಿಯಾಗಿದೆ. ಆಶ್ರಮದಲ್ಲಿ ಪ್ರತ್ಯೇಕವಾಗಿ ಸಾಧಕರು ಮಾತ್ರ ಇರುವುದಿಲ್ಲ. ಆಶ್ರಮ ಕುಗ್ಗಿಸಿದ ಜೀವನದ ಪ್ರತೀಕದಂತಿದೆ, ಅಲ್ಲಿ ಯೋಗಾಚರಣೆ ಕೈಕೊಳ್ಳುತ್ತಿರುವವರು ಅಲ್ಪ ಸಂಖ್ಯೆ–ಯಲ್ಲಿದ್ದಾರೆ. ತಮ್ಮ ಸಾಧನೆಯಲ್ಲಿ ಅತಿ ನಿಷ್ಠರಾದವರನ್ನು ಮಾತ್ರ ಇಟ್ಟುಕೊಂಡಿದ್ದರೆ, ನಿಜವಾಗಿ ಅತಿ ಕಡಿಮೆ ಜನ ಉಳಿದುಕೊಳ್ಳುತ್ತಿದ್ದರು.

ಪರಮಾತ್ಮ ಎಲ್ಲೆಲ್ಲಿಯೂ ಇದ್ದಾನೆ ಹಾಗೂ ಪ್ರತಿಯೊಂದು ವಸ್ತು ವಿಷಯಗಳಲ್ಲಿ ಇದ್ದಾನೆ ಎಂಬ ವಾಸ್ತವ ಸಂಗತಿಯನ್ನು ಶ್ರೀ ಅರವಿಂದರು, ಯಾವಾಗಲೂ, ನಮ್ಮ ನೆನಪಿಗೆ ತಂದುಕೊಡುತ್ತಾರೆ, ಮತ್ತು ನಿಜವಾದ ಸಹಾನುಭೂತಿಯಿಂದ ವರ್ತಿಸಬೇಕೆಂದು ಹೇಳುತ್ತಾರೆ. ನಾನಿದೀಗ ಅವರ ಸೂಕ್ತಿ (aphorism) ಯೊಂದನ್ನು ಹೇಳುತ್ತಿದ್ದೆ. ಅದರಲ್ಲಿ ಇದನ್ನು ಬಹಳ ಸುಂದರವಾಗಿ ಅಭಿವ್ಯಕ್ತಪಡಿಸಿದ್ದಾರೆ, "ನಿನ್ನನ್ನು ನೀನು ನಿರ್ದಯವಾಗಿ ಪರೀಕ್ಷೆಗೆ ಒಳಪಡಿಸಿಕೋ, ಆಗ ನೀನು ಇತರರಿಗೆ ಉದಾರ ಬುದ್ಧಿಯುಳ್ಳವನು ಹಾಗೂ ದಯೆಯುಳ್ಳವನು ಆಗುವಿ."

**CWM,13/144** **- ಶ್ರೀಮಾತೆ**

*

**ಆಶ್ರಮವೊಂದು ಪ್ರಯೋಗ ಶಾಲೆ**

ಆಧ್ಯಾತ್ಮಿಕ ಹಾಗೂ ಅತಿಮಾನಸ ಯೋಗಕ್ಕಾಗಿ ಈ ಆಶ್ರಮ ಒಂದು ಪ್ರಯೋಗಶಾಲೆಯಾಗಿರುವುದು, ಆಧಾರ ದಾಸ ಹೇಳಿದಂತೆ, ಅವಶ್ಯವಾಗಿದೆ ಹಾಗೂ ಅತ್ಯಗತ್ಯದ್ದಾಗಿದೆ, ಮನುಕುಲವನ್ನು ವೈವಿಧ್ಯಮಯವಾಗಿ ಪ್ರತಿನಿಧಿಸ–ಬೇಕಾಗುತ್ತದೆ. ಏಕೆಂದರೆ ಪರಿವರ್ತನೆಯ ಸಮಸ್ಯೆ ಅನುಕೂಲಕರ ಹಾಗೂ ಪ್ರತಿಕೂಲಕರ ಎಂಬ ಎಲ್ಲ ಬಗೆಯ ಅಂಶಗಳೊಡನೆ ವ್ಯವಹರಿಸಬೇಕಾಗುತ್ತದೆ. ಈ ಎರಡೂ ಬಗೆಯ ಅಂಶಗಳನ್ನು ಅದೇ ವ್ಯಕ್ತಿ ತನ್ನೊಡನೆ ಕೊಂಡೊಯುತ್ತಾನೆ. ಕೇವಲ ಸಾತ್ವಿಕರಾದ ಹಾಗೂ ಸುಸಂಸ್ಕೃತರಾದ ಜನರು, ಪಾರ್ಥಿವ ಸ್ವಭಾವದಲ್ಲಿ ಪ್ರಾಣಿಕ ಅಂಶದ ತೊಂದರೆಯನ್ನು ಹೊಂದಿರದೆ ಇದ್ದವರು ಯೋಗಕ್ಕಾಗಿ ಬಂದರೆ, ಆಗ ಪ್ರಾಪಂಚಿಕ ಸ್ವಭಾವದಲ್ಲಿ ಪ್ರಾಣಿಕ ಅಂಶದ ತೊಂದರೆಯನ್ನು ಎದುರಿಸಲಾಗಿರುವುದಿಲ್ಲ, ಅದರ ಮೇಲೆ ಜಯ ಸಾಧಿಸಲಾಗಿರುವುದಿಲ್ಲ, ಹಾಗಾಗಿ ಅ ಪ್ರಯತ್ನ ವಿಫಲವಾಗಬಹುದು. ಅಲ್ಲಿ ಕಲ್ಪಿಸಿಕೊಳ್ಳಬಹುದಾದ ರೀತಿಯಲ್ಲಿ, ಕೆಲವೊಂದು ಸಂದರ್ಭಗಳಲ್ಲಿ ಅಧಿಮಾನಸ ಪದರು ಮಾನಸಿಕ, ಪ್ರಾಣಿಕ ಹಾಗೂ ಭೌತಿಕವಾದವುಗಳ ಮೇಲೆ ಆಧ್ಯಾರೋಪ (superimposed) ವಾಗಿರಬಹುದು ಮತ್ತು ಅವುಗಳ ಮೇಲೆ ಪ್ರಭಾವ ಬೀರುತ್ತಿರಬಹುದು, ಆದರೆ ಅಲ್ಪ ಪ್ರಮಾಣದಲ್ಲಿಯೂ ಕೂಡ ಮಾನವ ಸತ್ತೆಯ ಅತಿಮಾನಸ ಇಲ್ಲವೆ ಸಾರ್ವಭೌಮ ರೂಪಪರಿವರ್ತನೆ ಇರುವುದಿಲ್ಲ. ಆಶ್ರಮದಲ್ಲಿದ್ದವರು ಎಲ್ಲ ಕಡೆಯಿಂದ ಬಂದಿರುತ್ತಾರೆ, ಎಲ್ಲ ಬಗೆಯವರಾಗಿರುತ್ತಾರೆ. ಅದು ಬೇರೆ ರೀತಿಯಾಗುವುದು ಸಾಧ್ಯವಿಲ್ಲ.

ಸಾಮೂಹಿಕ ಯೋಗ ಸಾಧನೆ ನಡೆದು ಹೋಗುತ್ತಿರುವಾಗ – ಈ ವಿಷಯ ಪ್ರತಿಯೊಬ್ಬನಿಗೂ ಅಲ್ಲ– ಏಕೆಂದರೆ ಪ್ರತಿಯೊಂದು ಸ್ತರದೊಂದಿಗೆ ವ್ಯವಹರಿಸ–ಲಾಗುತ್ತದೆ, ಅದರ ಎಲ್ಲ ತೊಂದರೆಗಳು ಮೇಲೆದ್ದು ಬರುತ್ತವೆ; ಆಶ್ರಮದಲ್ಲಿ ನಿರೀಕ್ಷಿಸಲಾಗಿರದ ಬಹಳಷ್ಟು ಅಲ್ಲಿರುವುದಕ್ಕೆ ಅದು ವಿವರಣೆ ನೀಡುತ್ತದೆ. ಪ್ರಾಥಮಿಕ ಕಾರ್ಯ ಪ್ರಯೋಗಶಾಲೆಯಲ್ಲಿ ಮುಗಿದ ನಂತರ ವಿಷಯಗಳು ಬದಲಾಗಲೇ ಬೇಕು.

ಆಶ್ರಮವಾಸಿಗಳ ನಡುವೆ ಸಾಮಾನ್ಯ ಮಾನವೀ ಭ್ರಾತೃತ್ವದಂತಹ ಸಂಬಂಧಗಳ ಮೇಲೆ ಒತ್ತು ನೀಡಲಾಗುವುದಿಲ್ಲ (ಆದಾಗ್ಯೂ ಸದ್ಭಾವನೆ,

ಗಂಭೀರವಾಗಿ ಪರಿಗಣಿಸುವುದು ಮತ್ತು ಗೌರವನಮನ ಇವು ಯಾವಾಗಲೂ ಅಲ್ಲಿರಲೇಬೇಕು). ಏಕೆಂದರೆ ಅದು ಗುರಿಯಲ್ಲ, ಅದು ಹೊಸ ಪ್ರಜ್ಞೆಯಲ್ಲಿ ಏಕತೆ, ಅದು ಪ್ರತಿಯೊಬ್ಬನಿಗೆ ತನ್ನ ಸಾಧನೆಯನ್ನು ಕೈಕೊಳ್ಳಲು ಪ್ರತಿಯೊಬ್ಬನಿಗೂ ಪ್ರಥಮ ವಿಷಯವಾಗಿರುತ್ತದೆ, ಅದು ಹೊಸ ಪ್ರಜ್ಞೆಯನ್ನು ತಲುಪಿ ಅಲ್ಲಿ ಏಕತೆಯನ್ನು ಸಿದ್ಧಿಸಿಕೊಳ್ಳಬೇಕಾಗಿರುತ್ತದೆ.

ಸಾಧಕರಲ್ಲಿ ಯಾವುದೇ ಬಗೆಯ ದೋಷಗಳಿರಲಿ ಅವುಗಳನ್ನು ಮೇಲ್ಗಡೆ–ಯಿರುವ ದೈವೀ ಪ್ರಕಾಶದಿಂದ ತೆಗೆದು ಹಾಕಬೇಕು– ಸಾತ್ವಿಕ ನಿಯಮಕ್ಕೆ ಒಳಪಡುವಂತಿದ್ದರೆ ಮಾತ್ರ ಸಾತ್ವಿಕ ನಿಯಮ ಬದಲು ಮಾಡಬಲ್ಲದು.

**CWSA, 35/600-01** **- ಶ್ರೀ ಅರವಿಂದರು**

*

**ಯೋಗವನ್ನು ಕೈಕೊಳ್ಳಲು ನಿರ್ಧಾರ**

ಶ್ರೀ ಅರವಿಂದರ ಯೋಗವನ್ನು ಆಚರಿಸಲು ಮನುಷ್ಯ ತನ್ನನ್ನು ಸಮಗ್ರವಾಗಿ ಪರಿವರ್ತಿಸಿಕೊಳ್ಳಲು ಬಯಸಬೇಕು, ಅದು ಜೀವನದಲ್ಲಿ ಒಂದೇ ಗುರಿಯನ್ನು ಹೊಂದಿರುವುದಾಗಿದೆ, ಅದೆಷ್ಟರ ಮಟ್ಟಿಗೆಂದರೆ ಇನ್ನು ಮುಂದೆ ಬೇರೆ ಯಾವುದೂ ಅಸ್ತಿತ್ವದಲ್ಲಿರಬಾರದು, ಅದೊಂದೇ ಅಸ್ತಿತ್ವದಲ್ಲಿರಬೇಕು. ಮತ್ತು ಹೀಗೆ ಮನುಷ್ಯ ತನ್ನಲ್ಲಿ ಸ್ಪಷ್ಟವಾಗಿ ತನಗೆ ಅದು ಬೇಕೋ ಬೇಡವೋ ಎಂಬ ಭಾವನೆ ತಂದುಕೊಳ್ಳುತ್ತಾನೆ, ಅವನಿಗೆ ಅದು ಬೇಡಾಗಿದ್ದರೆ, ಇನ್ನೂ ಅವನು ಸದ್ಭಾವನೆಯಿರುವ ಸೇವೆ ಮಾಡುವ ಜೀವನವಿರುವ, ತಿಳಿವಳಿಕೆಯಿರುವ ಜೀವನವನ್ನು ಹೊಂದಿರಬಹುದು, ಅವನು ಸಿದ್ಧಿಸಿಕೊಳ್ಳಬೇಕಾದ ದೈವೀ ಕಾರ್ಯಕ್ಕೆ ಬಹಳ ಸರಳವಾಗಿ ಶ್ರಮವಹಿಸಬಲ್ಲನು.– ಅದೆಲ್ಲ– ಮನುಷ್ಯ ಬಹಳಷ್ಟು ಕಾರ್ಯ ಮಾಡಬಲ್ಲವನಾಗಿರುತ್ತಾನೆ. ಆದರೆ ಇದರ ಹಾಗೂ ಯೋಗಾಚರಣೆಯ ನಡುವೆ ದೊಡ್ಡ ವ್ಯತ್ಯಾಸವಿದೆ.

ಯೋಗಾಚರಣೆ ಕೈಕೊಳ್ಳುವುದಕ್ಕೆ ನೀನು ಅದನ್ನು ಪ್ರಜ್ಞಾಪೂರ್ವಕವಾಗಿ ಬಯಸಬೇಕು. ಪ್ರಾರಂಭದೊಂದಿಗೆ ಅದೇನೆಂಬುದನ್ನು ತಿಳಿದಿರಬೇಕು. ನೀನು ಅದನ್ನು ಕುರಿತು ನಿರ್ಧಾರ ಮಾಡಬೇಕು. ಒಮ್ಮೆ ನಿರ್ಧಾರ ಕೈಕೊಂಡ ನಂತರ ನೀನು ಇನ್ನು ಮುಂದೆ ಹಿಂಜರಿಯಬಾರದು. ಆ ಕಾರಣದಿಂದಾಗಿ ಅ ವಿಷಯ

ಕುರಿತು ಪೂರ್ತಿ ಜ್ಞಾನದಿಂದ ಅದನ್ನು ಕೈಗೆತ್ತಿಕೊಳ್ಳಬೇಕು. "ನಾನು ಯೋಗಾಚರಣೆ ಮಾಡುತ್ತೇನೆ" ಎಂದು ನೀನು ಹೇಳಿದಾಗ ಯಾವುದನ್ನು ಕುರಿತು ನಿರ್ಧಾರ ಮಾಡುತ್ತಿರುವಿ ಎಂಬುದನ್ನು ನೀನು ತಿಳಿದಿರಬೇಕು. ಮತ್ತು ಆ ಕಾರಣದಿಂದಾಗಿ, ಈ ದೃಷ್ಟಿಕೋನದಿಂದ ನಾನು ನಿನ್ನ ಮೇಲೆ ಒತ್ತಾಯ ತಂದಿಲ್ಲ ಎಂದು ನನಗನಿಸುತ್ತದೆ. ನಾನು ಆ ವಿಷಯ ಕುರಿತು ಮಾತನಾಡಬಲ್ಲೆ. ಓಹ್! ಅದನ್ನು ಕುರಿತು ನಾನು ಬಹಳಷ್ಟನ್ನು ಹೇಳಬಲ್ಲೆನು. ನಾನು ಅದನ್ನು ಹೇಳಲೆಂದೇ ನೀನು ಇಲ್ಲಿ ನನಗಾಗಿ ಇರುವಿ; ಆದರೆ ವ್ಯಕ್ತಿಗತವಾಗಿ "ಹೌದು, ಸಂದರ್ಭ ಏನೇ ಇರಲಿ. ಯೋಗದ ಬಗ್ಗೆ ನನ್ನ ವಿಚಾರವಿದೆ ಮತ್ತು ನಾನದನ್ನು ಕೈಕೊಳ್ಳಲು ಬಯಸುತ್ತೇನೆ" ಎಂದು ಹೇಳುತ್ತ ಬಂದವರ ಬಳಿ ಮಾತನಾಡುತ್ತೇನೆ; ಅದು ಒಳ್ಳೆಯದು.

ನಂತರ ಅವರಿಗೆ ಅದು ಭಿನ್ನವಾದ ಏನೋ ಒಂದು, ಜೀವನದ ಪರಿಸ್ಥಿತಿಗಳು ವಿಶೇಷವಾಗಿ ಆಂತರಿಕವಾಗಿ ಭಿನ್ನವಾಗಿರುತ್ತವೆ, ಆಂತರಿಕವಾಗಿ ವಿಷಯಗಳು ವಿಶೇಷ ರೀತಿಯಲ್ಲಿ ಬದಲಾಗಿರುತ್ತವೆ.

ಸನ್ನಿವೇಶವನ್ನು ಸತತ ಸರಿಪಡಿಸುತ್ತಿರುವ ಪ್ರಜ್ಞೆಯೊಂದು ಸದಾ ಅಲ್ಲಿರುತ್ತದೆ, ಅದು ನಿಮ್ಮನ್ನು ಎಲ್ಲ ಕಾಲದಲ್ಲಿ ಅಡೆತಡೆಗಳ ಸಾನ್ನಿಧ್ಯದಲ್ಲಿರಿಸುತ್ತದೆ, ಅವು ಮುನ್ನಡೆಯನ್ನು ತಡೆಗಟ್ಟುತ್ತವೆ, ನಿಮ್ಮದೇ ದೋಷಗಳು ಹಾಗೂ ಕುರುಡುತನಗಳ ವಿರುದ್ಧ ನೀವೇ ಎಡವುವಂತೆ ಮಾಡುತ್ತವೆ. ಇತರರಿಗಾಗಿ ದೈವೀಪ್ರಜ್ಞೆಯು ಪ್ರಕಾಶ, ಜ್ಞಾನ, ರಕ್ಷಣೆ, ಪ್ರಗತಿಗಾಗಿ ಒಂದು ಶಕ್ತಿ ಇವುಗಳ ರೂಪದಲ್ಲಿ ಕಾರ್ಯಮಾಡುತ್ತದೆ, ಅದರಿಂದಾಗಿ ಅವರು ತಮ್ಮ ಕ್ಷಮತೆಗಳನ್ನು ಗರಿಷ್ಠ ಮಟ್ಟದಲ್ಲಿ ಪಡೆಯಬಹುದು ಮತ್ತು ಸಾಧ್ಯವಿದ್ದಷ್ಟು ಅನುಕೂಲಕರ ವಾತಾವರಣದಲ್ಲಿ ಅಭಿವೃದ್ಧಿಯನ್ನು ಸಾಧಿಸಬಹುದು– ಆದರೆ ಆಯ್ಕೆ ಮಾಡುವುದರಲ್ಲಿ ಅವರನ್ನು ಸಂಪೂರ್ಣವಾಗಿ ಮುಕ್ತರಾಗಿರುವಂತೆ ಬಿಟ್ಟುಕೊಡಲಾಗಿರುತ್ತದೆ.

ನಿರ್ಧಾರ ಅಂತರಂಗದಿಂದ ಬರಬೇಕು. ಪ್ರಜ್ಞಾಪೂರ್ವಕವಾಗಿ ಯೋಗದತ್ತ ಬರುವವರು, ಯೋಗ ಎಂದರೇನು ಎಂಬುದನ್ನು ತಿಳಿದುಕೊಂಡವರು ಇಲ್ಲಿರಬೇಕಾದರೆ ಪಾಲಿಸಬೇಕಾದ ಷರತ್ತುಗಳು ಹೀಗಿವೆ: ಬಾಹ್ಯದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ, ಆದರೆ ಆಂತರಿಕವಾಗಿ ಅಲ್ಲಿ ಬಹಳ ದೊಡ್ಡ

ವ್ಯತ್ಯಾಸವಿದೆ. ಮನುಷ್ಯ ದೋಷಗಳಿರುವ ಅಪರಾಧ ಮಾಡಿದವುಗಳು ಕೂಡಲೆ ಪರಿಣಾಮಗಳೊಂದಿಗೆ ಗೋಚರವಾಗುತ್ತವೆ. ಮನುಷ್ಯ ತಪ್ಪು ಭಾವನೆಗೆ ಎಡೆಮಾಡಿಕೊಡದಿರುವಷ್ಟು ಅ ಪರಿಣಾಮಗಳು ಬಲಿಷ್ಠವಾಗಿರುತ್ತವೆ, ಹಾಗೂ ವಿಷಯಗಳು ಗಂಭೀರವಾಗುತ್ತವೆ. ಆದರೆ ಅದು ಬಹಳಷ್ಟು ಸಲ ಹಾಗಿರುವುದಿಲ್ಲ.

**CWM, 7/198-99** **- ಶ್ರೀಮಾತೆ**

*

**ಇನ್ನೊಂದು ಬಗೆಯ ಆಧ್ಯಾತ್ಮಿಕ ಉತ್ಕ್ರಾಂತಿಯ ಕ್ಷೇತ್ರ**

ಸಾಧಾರಣವಾಗಿ ಸಾಮಾನ್ಯವಾಗಿರುವಂತಹ ಇಂತಹ ಸಂಸ್ಥೆಗಳು ಇರಿಸಿಕೊಂಡಿರುವ ಉದ್ದೇಶಗಳಿಂದ ಭಿನ್ನವಾದ ಉದ್ದೇಶದೊಂದಿಗೆ ಈ ಆಶ್ರಮವನ್ನು ಸೃಷ್ಟಿಸಲಾಗಿದೆ. ಇಲ್ಲಿ ಜಗತ್ತನ್ನು ಪರಿತ್ಯಾಗ ಮಾಡುವುದಿರುವುದಿಲ್ಲ, ಆದರೆ ಇನ್ನೊಂದು ಬಗೆಯದಾದ, ಬೇರೆ ರೂಪವಿದ್ದ ಜೀವನವನ್ನು ಉತ್ಕ್ರಾಂತಿಯ ಮೂಲಕ ಪಡೆಯಲು ಜಗತ್ತು ಸಾಧನೆಗಾಗಿ ಒಂದು ಕೇಂದ್ರ ಹಾಗೂ ಕ್ಷೇತ್ರವಾಗಿದೆ. ಆ ಉತ್ಕ್ರಾಂತಿ ಪಡೆದ ಜೀವನ ಕಟ್ಟಕಡೆಯದು, ಅದು ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆಯಿಂದ ಚಲನೆಗೊಳಗಾಗುವುದು ಮತ್ತು ಆತ್ಮದ ಶ್ರೇಷ್ಠತರ ಜೀವನವನ್ನು ಮೈವೆತ್ತುತ್ತದೆ. ಯಾವ ಹಂತದಲ್ಲಿ ಸಾಮಾನ್ಯ ಜೀವನವನ್ನು ದೂರೀಕರಿಸಿ ಜನರು ಇಲ್ಲಿಗೆ ಪ್ರವೇಶ ಪಡೆಯಲು ಬರಬೇಕೆಂಬುದರ ಬಗ್ಗೆ ಸರ್ವಸಾಮಾನ್ಯ ನಿಯಮವಿಲ್ಲ. ಪ್ರತಿಯೊಂದು ಸಂದರ್ಭದಲ್ಲಿ ಅದು ವೈಯಕ್ತಿಕ ಆವಶ್ಯಕತೆ ಹಾಗೂ ಸಾಧ್ಯತೆ ಇಲ್ಲವೆ ಆ ಹೆಜ್ಜೆಯನ್ನಿರಿಸುವುದಕ್ಕಾಗಿ ಸೂಕ್ತತೆ ಇವುಗಳ ಮೇಲೆ ಅವಲಂಬಿಸುತ್ತದೆ, ನಿರ್ಧಾರ ಶ್ರೀಮಾತೆಯವರ–ದಾಗಿರುತ್ತದೆ.

**CWSA, 35/592-93** **- ಶ್ರೀ ಅರವಿಂದರು**

*

**ಇಲ್ಲಿ ಉಳಿದುಕೊಳ್ಳುವುದು ಸುಲಭವಾಗಿರುವುದಿಲ್ಲ**

ತೋರಿಕೆಗಳಿಂದ ತೀರ್ಮಾನಕ್ಕೆ ಬರುವುದು ಬೇಡ, ಜನರು ಹೇಳುವುದರತ್ತ ಕಿವಿಗೊಡುವುದು ಬೇಡ, ಏಕೆಂದರೆ ಇವೆರಡೂ ದಾರಿ ತಪ್ಪಿಸುವ ಸಂಗತಿಗಳು. ಆದರೆ ಹೊರಟು ಹೋಗುವುದು ನಿನಗೆ ಅವಶ್ಯವಾಗಿದೆ ಎನಿಸಿದರೆ, ಸಹಜವಾಗಿ,

ನೀನು ಹೊರಟು ಹೋಗಬಹುದು ಮತ್ತು ಬಾಹ್ಯ ದೃಷ್ಟಿಕೋನದಿಂದ ಅದು, ನಿಜವಾಗಿ, ಹೆಚ್ಚು ವಿವೇಕದ ವಿಷಯವಾಗುತ್ತದೆ.

ಅಲ್ಲದೆ ಇಲ್ಲಿ ಉಳಿದುಕೊಂಡಿರುವುದು ಸುಲಭವಾದದ್ದಲ್ಲ. ಆಶ್ರಮದಲ್ಲಿ ಯಾವ ಬಾಹ್ಯ ಶಿಸ್ತುಪಾಲನೆಯಿಲ್ಲ, ಮತ್ತು ಗೋಚರವಾಗುವ ಪರೀಕ್ಷೆ ಇಲ್ಲ. ಆದರೆ ಆಂತರಿಕ ಪರೀಕ್ಷೆ ಕಠೋರವಾಗಿರುತ್ತದೆ ಹಾಗೂ ಸತತ ಇರುತ್ತದೆ. ಮನುಷ್ಯ ಇಲ್ಲಿ ಉಳಿದುಕೊಳ್ಳಲು ಶಕ್ತನಾಗಬೇಕಾದರೆ. ಎಲ್ಲ ಅಹಂಮನ್ಯತೆಯನ್ನು ಮೀರಿ ಹೋಗಲು ಮತ್ತು ಎಲ್ಲ ಒಣ ಪ್ರತಿಷ್ಠೆಯ ಮೇಲೆ ಜಯ ಸಾಧಿಸಲು ಅವನು ತನ್ನ ಅಭೀಪ್ಸೆಯಲ್ಲಿ ಬಹಳ ನಿಷ್ಕಪಟನಾಗಿರಬೇಕು.

ಸಂಪೂರ್ಣ ಶರಣಾಗತಿ ಇರಲೆಂದು ಬಾಹ್ಯದಲ್ಲಿ ಒತ್ತಾಯ ತರುವುದಿಲ್ಲ. ಇಲ್ಲಿಯೇ ಇದ್ದುಬಿಡಲು ಬಯಸುವವರಿಗೆ ಅದು ಅತ್ಯಗತ್ಯದ್ದಾಗಿರುತ್ತದೆ. ಶರಣಾಗತಿಯ ನಿಷ್ಕಾಪಟ್ಯವನ್ನು ಪರೀಕ್ಷಿಸಲು ಹಲವಾರು ವಿಷಯಗಳು ಬರುತ್ತವೆ, ಹಾಗಿದ್ದರೂ ಅಭೀಪ್ಸೆ ಪಡುವವರಿಗೆ ದೈವೀಕೃಪೆ ಹಾಗೂ ಸಹಾಯ ಅಲ್ಲಿರುತ್ತವೆ ಮತ್ತು ಅವುಗಳ ಸಾಮರ್ಥ್ಯ ಸೀಮಾತೀತವಾಗಿರುತ್ತದೆ, ನಂಬಿಕೆ ಹಾಗೂ ಗಾಢವಿಶ್ವಾಸಗಳಿಂದ ಅವುಗಳನ್ನು ಸ್ವೀಕರಿಸಬೇಕು.

**CWM, 13/111** **- ಶ್ರೀಮಾತೆ**

*

**ಆಶ್ರಮದಲ್ಲಿ ಭೌತಿಕ ಜೀವನದ ಆಧಾರಗಳು**

ಇಲ್ಲಿ ಭೌತಿಕ ಜೀವನ ಸಾಧ್ಯವಾಗುವುದಕ್ಕೆ ಕೇವಲ ಎರಡು ಆಧಾರಗಳಿವೆ. ಒಂದು ಇಲ್ಲಿರುವ ಮನುಷ್ಯ ಸ್ವ–ಅರ್ಪಣೆ ಹಾಗೂ ಶರಣಾಗತಿ ತತ್ವಗಳ ಆಧಾರದ ಮೇಲೆ ಸ್ಥಾಪಿತವಾದ ಆಶ್ರಮದ ಸದಸ್ಯನಾಗಿರುತ್ತಾನೆ ಎಂಬುದು ಒಂದು. ಅವನು ಹಾಗೂ ಅವನಿಗೆ ಸೇರಿದುದೆಲ್ಲವೂ ಭಗವಂತನಿಗೆ ಸೇರಿದುದಾ–ಗಿರುತ್ತದೆ ಎಂಬುದು ಇನ್ನೊಂದು. ಮನುಷ್ಯ ಕೊಡುತ್ತಿರುವಾಗ ತನ್ನದೇ ಆಗಿರುವುದನ್ನು ಕೊಡುವುದಿಲ್ಲ, ಆಗಲೇ ಪರಮಾತ್ಮನಿಗೆ ಸೇರಿದುದನ್ನು ಕೊಡುತ್ತಾನೆ. ಇಲ್ಲಿ ಸಂಬಳದ, ಪ್ರತಿಫಲದ ಪ್ರಶ್ನೆಯಿರುವುದಿಲ್ಲ, ವ್ಯವಹಾರವಿರು–ವುದಿಲ್ಲ, ಒತ್ತಾಯದ ಬೇಡಿಕೆಗೆ ಮತ್ತು ಆಸೆಗೆ ಸ್ಥಾನವಿರುವುದಿಲ್ಲ. ಶ್ರೀಮಾತೆಯವರು ಆಶ್ರಮದ ಏಕೈಕ ಮೇಲ್ವಿಚಾರಣೆ ಮಾಡುವವರಾಗಿದ್ದಾರೆ.

ಅವರ ವಿನಿಯೋಗಕ್ಕಾಗಿ ಲಭ್ಯವಿರುವ ಸಾಧನಗಳನ್ನು ಹಾಗೂ ಉಪಕರಣಗಳ ಸಾಮರ್ಥ್ಯಗಳನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ವ್ಯವಸ್ಥೆಗೊಳಪಡಿಸುತ್ತಾರೆ. ಅವರು ಸಾಧಕರ ಮಾನಸಿಕ ಮಾನದಂಡಗಳು, ಇಲ್ಲವೆ ಪ್ರಾಣಿಕ ಆಸೆಗಳು ಹಾಗೂ ಹಕ್ಕುಗಳು ಇವುಗಳಿಗನುಸಾರವಾಗಿ ಕಾರ್ಯ ಕೈಕೊಳ್ಳುವ ನಿರ್ಬಂಧಕ್ಕೊಳ–ಗಾಗಿರುವುದಿಲ್ಲ. ಅವರೊಡನೆ ವ್ಯವಹರಿಸುವಾಗ ಅವರು ಪ್ರಜಾಪ್ರಭುತ್ವದ ಸಮಾನತೆಯನ್ನು ಉಪಯೋಗಿಸಬೇಕಾದ ನಿರ್ಬಂಧಕ್ಕೊಳಗಾಗಿರುವುದಿಲ್ಲ. ಪ್ರತಿಯೊಬ್ಬ ಸಾಧಕನಿಗೆ ಯಾವುದರ ಆವಶ್ಯಕತೆ ಇದೆ ಎಂಬುದನ್ನು ಕುರಿತು ಇಲ್ಲವೆ ಅವನ ಆಧ್ಯಾತ್ಮಿಕ ಪ್ರಗತಿಗೆ ಯಾವುದು ಅತ್ಯಂತ ಒಳ್ಳೆಯದು ಎಂಬುದನ್ನು ಕುರಿತು ಅವನೊಡನೆ ವ್ಯವಹರಿಸಲು ಅವರು ಮುಕ್ತರಾಗಿದ್ದಾರೆ. ಯಾರೂ ಅವರನ್ನು ತೀರ್ಮಾನಕ್ಕೊಳಪಡಿಸಲಾಗುವುದಿಲ್ಲ ಇಲ್ಲವೆ ಅವರ ಮೇಲೆ ತನ್ನದೇ ನಿಯಮ ಹಾಗೂ ಮಾನದಂಡಗಳನ್ನು ಹೇರಲಾಗುವುದಿಲ್ಲ, ಅವರು ಮಾತ್ರ ನಿಯಮಗಳನ್ನು ಮಾಡಬಲ್ಲರು. ಅವುಗಳನ್ನು ತ್ಯಜಿಸುವುದು ಯೋಗ್ಯವೆನಿಸಿದರೆ ಅದನ್ನೂ ಕೂಡ ಅವರು ಮಾಡಬಲ್ಲರು, ಆದರೆ ಅವರು ಹಾಗೆ ಮಾಡಬೇಕೆಂದು ಯಾರೂ ಒತ್ತಾಯದ ಬೇಡಿಕೆ ಮಾಡಲಾರರು. ವೈಯಕ್ತಿಕ ಬೇಡಿಕೆಗಳನ್ನು ಹಾಗೂ ಆಸೆಗಳನ್ನು ಅವರ ಮೇಲೆ ಹೇರಲಾಗುವುದಿಲ್ಲ. ಯಾರಿಗಾದರೂ ತಮಗೆ ನಿಜವಾಗಿ ಏನಾದರೂ ಅವಶ್ಯವಾಗಿದೆ ಇಲ್ಲವೆ ಯಾವುದೇ ಸೂಚನೆ ನೀಡಬೇಕೆನಿಸಿದರೆ ಅವರು ತಮಗೆ ನೀಡಿದ ಅಧಿಕಾರದ ಪರಿಧಿಯೊಳಗೆ ಶ್ರೀಮಾತೆಯವರಿಗೆ ತಿಳಿಸಬಹುದು. ಅದಕ್ಕೆ ಅವರು ಸಮ್ಮತಿ ನೀಡದೆ ಹೋದರೆ, ಅವನು ಸಮಾಧಾನ ಚಿತ್ತದಿಂದ ಅದನ್ನು ಬಿಟ್ಟುಕೊಡಬೇಕು. ಇದು ಆಧ್ಯಾತ್ಮಿಕ ಶಿಸ್ತುಪಾಲನೆ, ದೈವೀ ಸತ್ಯವನ್ನು ಪ್ರತಿನಿಧಿಸುವವರು ಇಲ್ಲವೆ ಆ ಸತ್ಯವನ್ನು ಮೈವೆತ್ತವರು ಆ ಪಾಲನೆಯ ಕೇಂದ್ರವಾಗಿರುತ್ತಾರೆ. ಅವರು ಇದೆಲ್ಲವೂ ಆಗಿದ್ದಾರೆ ಮತ್ತು ಇದೆಲ್ಲವೂ ಸರಳ ಸಾಮಾನ್ಯ ಜ್ಞಾನದ ವಿಷಯ, ಅವರು ಅದಾಗಿರದಿದ್ದರೆ, ಆಗ ಇಲ್ಲಿ ಯಾರೂ ಉಳಿದುಕೊಳ್ಳುವ ಆವಶ್ಯಕತೆ ಇರುವುದಿಲ್ಲ. ಪ್ರತಿಯೊಬ್ಬರು ತಮ್ಮ ದಾರಿ ಹಿಡಿದು ಹೋಗಬಹುದು, ಮತ್ತು ಅಲ್ಲಿ ಆಶ್ರಮವೂ ಇಲ್ಲ, ಯೋಗವೂ ಇಲ್ಲ.

ಇನ್ನೊಂದೆಡೆಗೆ ವ್ಯಕ್ತಿಯೊಬ್ಬ ಆಶ್ರಮದ ಸದಸ್ಯನಾಗಿ ಉಳಿದುಕೊಳ್ಳಲು ತಯಾರಾಗಿರದಿದ್ದರೆ ಇಲ್ಲವೆ ಆಶ್ರಮದ ಶಿಸ್ತುಪಾಲನೆಯನ್ನು ತಾಳಿಕೊಳ್ಳದಿದ್ದರೆ,

ಆದಾಗ್ಯೂ ಯೋಗದ ಯಾವುದೋ ಒಂದು ಸ್ಥಾನದಲ್ಲಿ ಒಪ್ಪಿಗೆ ಪಡೆದಿದ್ದರೆ ಅವನು ಬೇರೆಡೆ ಉಳಿದುಕೊಳ್ಳಬೇಕು ತನ್ನ ವೆಚ್ಚವನ್ನು ತಾನೇ ಭರಿಸಬೇಕು. ಅವನ ಪ್ರಾಪಂಚಿಕ ಜವಾಬ್ದಾರಿ ಶ್ರೀಮಾತೆಯವರ ಮೇಲಿರುವುದಿಲ್ಲ.

**CWSA, 32/374-75** **- ಶ್ರೀ ಅರವಿಂದರು**

*

**ಪೃಥ್ವಿಯ ಒಂದು ಸಾಂಕೇತಿಕ ಪ್ರಾತಿನಿಧ್ಯ**

ಪರಿವರ್ತನೆಗಾಗಿ ಇಡೀ ಪೃಥ್ವಿಯ ಎಲ್ಲ ರೂಪಗಳನ್ನು ಕೈಗೆತ್ತಿಕೊಂಡು, ಪರಿವರ್ತನೆಗೆ ಎಳ್ಳಷ್ಟೂ ತಯಾರಾಗಿರದೆ ಇರುವವಗಳನ್ನೊಳಗೊಂಡು ತಯಾರು ಮಾಡಬೇಕಾಗಿದೆ ಎಂಬ ವಿಚಾರವಿದೆ. ಪೃಥ್ವಿಯ ಮೇಲಿರುವ ಅಂಶಗಳ ಸಾಂಕೇತಿಕ ಪ್ರಾತಿನಿಧ್ಯವಿರಬೇಕು, ಅದರೊಡನೆ ಜೋಡಣೆಯನ್ನು ಸ್ಥಾಪಿಸಲು ಅವುಗಳ ಮೇಲೆ ಕಾರ್ಯಕೈಕೊಳ್ಳುವಂತಾಗುವುದು. ಪೃಥ್ವಿ ವಿಶ್ವದ ಸಾಂಕೇತಿಕ ಪ್ರಾತಿನಿಧ್ಯ ಸ್ವರೂಪದ್ದಾಗಿದೆ, ಇಲ್ಲಿರುವ ಗುಂಪು ಪೃಥ್ವಿಯ ಸಾಂಕೇತಿಕ ಪ್ರಾತಿನಿಧ್ಯ ಸ್ವರೂಪದ್ದಾಗಿದೆ.

ಈ ವಿಷಯ ಕುರಿತು ಬಹಳ ಕಾಲದ ಹಿಂದೆ, ಎಂದರೆ 1914ರಲ್ಲಿ ಶ್ರೀ ಅರವಿಂದರು ಹಾಗೂ ನಾನು ಚರ್ಚೆ ಮಾಡಿದ್ದೆವು, ಏಕೆಂದರೆ ನಾವು ಎರಡು ಸಾಧ್ಯತೆಗಳನ್ನು ಕಂಡುಕೊಂಡಿದ್ದೆವು: ನಾವು ಈಗ ಕೈಕೊಳ್ಳುತ್ತಿರುವುದು ಒಂದು, ಇಲ್ಲವೆ ಅತಿ ಮನಸ್ಸನ್ನು ಸಿದ್ಧಿಸಿಕೊಳ್ಳುವವರೆಗೆ ಅಷ್ಟೇ ಅಲ್ಲ ಭೌತಿಕದ ಪರಿವರ್ತನೆ ಆರಂಭಗೊಳ್ಳುವವರೆಗೆ ಏಕಾಂತದಲ್ಲಿ ಹಿಂದಿದ್ದು ಬಿಡುವುದು. ಶ್ರೀ ಅರವಿಂದರು ನ್ಯಾಯಯುತವಾಗಿಯೇ ಹೇಳಿದರು, ನಾವು ಏಕಾಂತದಲ್ಲಿ ಪ್ರತ್ಯೇಕವಾಗಿ ಇರಲಾರೆವು, ಏಕೆಂದರೆ ನೀವು ಪ್ರಗತಿ ಸಾಧಿಸುತ್ತಿದ್ದಂತೆ ಹೆಚ್ಚು ಹೆಚ್ಚಾಗಿ ವಿಶ್ವಂಭರರಾಗುತ್ತೀರಿ, ಪರಿಣಾಮವಾಗಿ, ಸಂದರ್ಭ ಏನೇ ಇರಲಿ, ಆ ಭಾರವನ್ನು ನಿಮ್ಮ ಮೇಲೆ ಹೊತ್ತುಕೊಳ್ಳುತ್ತೀರಿ.

ಕೇಂದ್ರವನ್ನು ರೂಪಿಸಲು ಜೀವನವೇ ಸ್ವತಃ ಜನರನ್ನು ಮುಂದೆ ಕರೆತರುವುದರ ಮೂಲಕ ಪ್ರತಿಸ್ಪಂದಿಸಿದೆ. ಸಹಜವಾಗಿ, ಇದು ಕಾರ್ಯವನ್ನು ಸ್ವಲ್ಪ ಹೆಚ್ಚು ಸಂಕೀರ್ಣ ಹಾಗೂ ಕಠಿಣವಾದದ್ದನ್ನಾಗಿ ಮಾಡುತ್ತದೆ ಎಂಬುದನ್ನು ಸ್ಪಷ್ಟವಾಗಿ ನೋಡಿದೆವು (ಅದು ನನಗೆ ಭಾರವಾದ ಜವಾಬ್ದಾರಿ ಕೊಡುತ್ತದೆ

ಹಾಗೂ ಭವ್ಯರೀತಿಯಲ್ಲಿ ಪ್ರಾಪಂಚಿಕ ಕಾರ್ಯವನ್ನೂ ಕೊಡುತ್ತದೆ.) ಆದರೆ ಎಲ್ಲ ದೃಷ್ಟಿಕೋನದಿಂದ ನೋಡಿದಾಗ– ದೈವೀ ಕಾರ್ಯಕ್ಕಾಗಿ– ಅದು ಅತ್ಯಗತ್ಯದ್ದಾಗಿದೆ ಹಾಗೂ ಅನಿವಾರ್ಯವಾಗಿದೆ. ಮತ್ತು ಸಂದರ್ಭ ಏನೇ ಇರಲಿ, ನಂತರ ನಮಗೆ ಪರಿಶೀಲನೆ ಮಾಡುವುದು ಸಾಧ್ಯವಾದಾಗ ಅದು ಏಕಕಾಲಕ್ಕೆ ಪ್ರತಿಯೊಂದು ಒಂದು ಸಾಧ್ಯತೆಯನ್ನು ಮತ್ತು ಪರಿಹರಿಸಬೇಕಾದ ವಿಶಿಷ್ಟ ತೊಂದರೆಯನ್ನು ಪ್ರತಿನಿಧಿಸುತ್ತದೆ.

ಅನುಯಾಯಿಯೊಡನೆ ಮಾತುಕತೆ, ಸಪ್ಟಂಬರ 20, 1960 – **ಶ್ರೀಮಾತೆ**

*

**ಸಾಮೂಹಿಕ ಕಾರ್ಯ ಹಾಗೂ ಸಾಮೂಹಿಕ ಯೋಗ**

ಯಾವುದೇ ವ್ಯಕ್ತಿ ಏಕಾಂಗಿಯಾಗಿ ಕೈಕೊಳ್ಳುವ ಪರಿವರ್ತನೆ, ಪೃಥ್ವಿಯ ಮೇಲಿನ ಕಾರ್ಯವನ್ನು ಹೊರತುಪಡಿಸಿ (ಅದರರ್ಥ ವ್ಯಕ್ತಿಗತ ಪರಿವರ್ತನೆಗಿಂತ ಹೆಚ್ಚಾದದ್ದು) ಸಾಧ್ಯವಾಗುವುದಿಲ್ಲ ಇಲ್ಲವೆ ಉಪಯುಕ್ತವಾಗುವುದಿಲ್ಲ. (ಹಾಗೆಯೇ ಯಾವ ವೈಯುಕ್ತಿಕ ಮಾನವ ಸತ್ತೆ, ತನ್ನದೇ ಸಾಮರ್ಥ್ಯದಿಂದ ಮಾತ್ರ ಪರಿವರ್ತನೆಯನ್ನು ಕಾರ್ಯಗತಗೊಳಿಸಲಾರ ಮತ್ತು ಅಲ್ಲೊಬ್ಬ ಇಲ್ಲೊಬ್ಬ ಅತಿಮಾನಸ ವ್ಯಕ್ತಿಯನ್ನು ಸೃಷ್ಟಿಸುವುದು ಯೋಗದ ಉದ್ದೇಶವಲ್ಲ.) ಈ ಯೋಗದ ಉದ್ದೇಶ ಪೃಥ್ವಿಯ ಮೇಲೆ ಅತಿಮಾನಸ ಪ್ರಜ್ಞೆಯನ್ನು ಕೆಳಗಿಳಿಸಿ ತರುವುದಾಗಿದೆ, ಅದನ್ನು ಅಲ್ಲಿ ಸ್ಥಿರಗೊಳಿಸುವುದಾಗಿದೆ, ಹೊಸ ಕುಲವೊಂದನ್ನು ಸೃಷ್ಟಿಸುವುದಾಗಿದೆ, ಅತಿಮಾನಸ ಪ್ರಜ್ಞೆಯ ತತ್ವ ಆಂತರಿಕ ಹಾಗೂ ಬಾಹ್ಯ ವ್ಯಕ್ತಿಯನ್ನು ಹಾಗೂ ಸಾಮೂಹಿಕ ಜೀವನವನ್ನು ತನ್ನ ಆಳಿಕೆಗೆ ಒಳಪಡಿಸುವು–ದಾಗಿದೆ. ಹಾಗಾಗಿ ಆಶ್ರಮದ ಅಸ್ತಿತ್ವ, ಯಾವುದೇ ತರಹದ ತೊಂದರೆಗಳನ್ನು ನಮಗಾಗಿ ಇಲ್ಲವೆ ವ್ಯಕ್ತಿಗಾಗಿ ಸೃಷ್ಟಿಸಿದಾಗಲೂ ಅದು ಅನಿವಾರ್ಯವಾಗಿದ್ದಿತು. ಆಶ್ರಮದ ಸದಸ್ಯರು ಹಾಗೂ ಇತರರು (ಸರ್ವಸಾಧಾರಣ ಪೃಥ್ವಿ ಪ್ರಜ್ಞೆಯಲ್ಲಿ ಒಂದಿಷ್ಟು ಕಾರ್ಯ ಕೈಕೊಳ್ಳುವುದರೊಂದಿಗೆ) ಪ್ರತಿನಿಧಿಸುವ ಮಾನವ ಸತ್ತೆಯಲ್ಲಿ ಪೃಥ್ವಿ ಪ್ರಜ್ಞೆಯನ್ನು ತಯಾರು ಮಾಡುವ ವಿಧಾನವಿದ್ದಿತು, ಅದರಿಂದಾಗಿ ಅತಿಮಾನಸ ಶಕ್ತಿಯ ಅವರೋಹಣ ಸಾಧ್ಯವಾಗುವಂತೆ ಮಾಡುವುದಿತ್ತು. ವ್ಯಕ್ತಿಯ ನಂತರ ವ್ಯಕ್ತಿ ತಮ್ಮ ತಯಾರಿಗನುಗುಣವಾಗಿ ಆ ದೈವೀ ಶಕ್ತಿಯನ್ನು

ಒಪ್ಪಿಕೊಂಡ ನಂತರ ಅತಿ ಮಾನಸ ಪ್ರಜ್ಞೆಯನ್ನು ಅದು ಭೌತಿಕ ಜಗತ್ತಿನಲ್ಲಿ ಸ್ಥಾಪಿಸುವುದು ಮತ್ತು ಅದರಿಂದಾಗಿ ತನ್ನದೇ ವಿಸ್ತರಣೆಗಾಗಿ ಕೇಂದ್ರವೊಂದನ್ನು ಸೃಷ್ಟಿಸುವುದು.

**CWSA, 28/296** **- ಶ್ರೀ ಅರವಿಂದರು**

*

ಇದು ಇತರ ಆಶ್ರಮಗಳಂತಹದಲ್ಲ– ಸದಸ್ಯರು ಸನ್ಯಾಸಿಗಳಲ್ಲ, ಇಲ್ಲಿ ಯೋಗದ ಗುರಿ ಮೋಕ್ಷ ಮಾತ್ರವಲ್ಲ. ಇಲ್ಲಿ ಕೈಕೊಳ್ಳುತ್ತಿರುವುದು ಒಂದು ಕಾರ್ಯಕ್ಕಾಗಿ ತಯಾರು ಮಾಡಿಕೊಳ್ಳುವುದಾಗಿದೆ– ಯೌಗಿಕ ಪ್ರಜ್ಞೆ ಹಾಗೂ ಯೋಗಶಕ್ತಿ ಇವುಗಳ ಮೇಲೆ ಸ್ಥಾಪಿತಗೊಂಡ ಈ ಕಾರ್ಯಕ್ಕೆ ಬೇರಾವ ಆಧಾರವಿರುವುದಿಲ್ಲ. ಈ ಮಧ್ಯೆ ಇಲ್ಲಿರುವ ಪ್ರತಿಯೊಬ್ಬ ಸದಸ್ಯ ಆಶ್ರಮದಲ್ಲಿ ತನ್ನ ಆಧ್ಯಾತ್ಮಿಕ ಸಿದ್ಧತೆಯ ಭಾಗವೆಂದು ಯಾವುದಾದರೊಂದು ಕಾರ್ಯವನ್ನು ಮಾಡಬೇಕು.

**CWSA, 29/232** **- ಶ್ರೀ ಅರವಿಂದರು**

*

**ಆಶ್ರಮವನ್ನು ಆವರಿಸಿಕೊಂಡಿರುವ ಶ್ರೀಕೃಷ್ಣ**

ನೇರಳೆ ಬಣ್ಣ ಶ್ರೀಕೃಷ್ಣನ ರಕ್ಷಣೆಯನ್ನು ಹೊರಸೂಸುತ್ತಿರುತ್ತದೆ.– ಆ ಕಾರಣದಿಂದಾಗಿಯೇ ಬಹಳ ಸ್ವಾಭಾವಿಕವಾಗಿ ಅದು ನಿನಗೆ ಶಾಂತಿಯ ಭಾವನೆ ತಂದು ಕೊಟ್ಟಿತು. ಶ್ರೀಕೃಷ್ಣನ ಜೊತೆಗೆ ಆಧ್ಯಾತ್ಮಿಕ ಸಂಸರ್ಗದಲ್ಲಿದ್ದಾಗ ಶ್ರೀಮಾತೆಯವರು ಅದನ್ನು ಯಾವಾಗಲೂ ನೋಡಿದ್ದನ್ನು ಕುರಿತು ಹೇಳುತ್ತಾರೆ ಮತ್ತು ಈಗಲೂ ಕೂಡ ಅವನು ಆಶ್ರಮವನ್ನು ಆವರಿಸಿಕೊಂಡದ್ದನ್ನು ಕುರಿತು ಹೇಳುತ್ತಾರೆ.

**CWSA, 30/157** **- ಶ್ರೀ ಅರವಿಂದರು**

*

ಶ್ರೀಮಾತೆಯವರನ್ನು ಕುರಿತು ರೂಪರಹಿತ ದೈವೀಮಾತೆ ಎಂದು ಧ್ಯಾನ ಮಾಡುವುದು ಒಳ್ಳೆಯ ಧ್ಯಾನವಾಗಿರುತ್ತದೆ, ಆದರೆ ಈ ಯೋಗದಲ್ಲಿ ಪೂರ್ತಿ

ಪರಿಣಾಮ ಪಡೆಯುವುದಕ್ಕಾಗಿ ಅದು ಸಾಕಾಗದು. ಹೃದಯ ಸ್ಥಾನದಲ್ಲಿ ಅವರ ವ್ಯಕ್ತಿತ್ವದ ಮೇಲೆ ಧ್ಯಾನ ಮಾಡುವುದು ಅವಶ್ಯವಾಗಿದೆ.

**CWSA, 32/65** **- ಶ್ರೀ ಅರವಿಂದರು**

*

## ಪ್ರಸರಿಸುವ ಕೇಂದ್ರ

**ಶ್ರೀ ಅರವಿಂದಾಶ್ರಮ ದೈವೀ ಕಂಪನಗಳಿಂದ ತುಂಬಿಕೊಂಡ ಒಂದು ಸ್ಥಾನವಾಗಿದೆ**

ಕೆಲವೊಂದು ಶಕ್ತಿಗಳಿಂದ, ಕೆಲವೊಂದು ಕಂಪನಗಳಿಂದ ಅತಿಯಾಗಿ ತುಂಬಿಕೊಂಡ ಈ ಸ್ಥಳದಂತಹದನ್ನು ಗಮನಿಸಿರಿ, ಈ ಕಂಪನಗಳು ಗೋಚರವಾಗುವ ಹಾಗೂ ಸ್ಪರ್ಶಗ್ರಾಹ್ಯ (tangible)ವಾಗುವ ರೀತಿಯಲ್ಲಿ ತಮ್ಮನ್ನು ತೋರಿಸಿಕೊಡುವುದಿಲ್ಲ– ಅವು ಬದಲಾವಣೆಗಳನ್ನು ಉತ್ಪನ್ನ ಮಾಡಬಲ್ಲವು, ಆದರೆ ಈ ಬದಲಾವಣೆಗಳು ಒಂದು ವಿಧಾನದ ಮೂಲಕ (ಎಲ್ಲ ಭೌತಿಕ ವಿಷಯಗಳು ಹಾಗೆ ಮಾಡುತ್ತವೆ) ಸಂಭವಿಸುತ್ತವೆ, ನೀವು ಬಹು ಮಟ್ಟಿಗೆ ತರ್ಕದ ಮೂಲಕ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಸಾಗಿ ಹೋಗುತ್ತೀರಿ ಮತ್ತು ಈ ತರ್ಕ ಇಲ್ಲಿ ಸಾಮಾನ್ಯ ಜೀವನಕ್ಕೆ ಸೇರಿರದ ಏನೋ ಒಂದು ಇಲ್ಲಿದೆ ಎಂದು ಗ್ರಹಿಸುವುದಕ್ಕೆ ಅಡ್ಡಿಯಾಗುತ್ತದೆ. ಸಾಮಾನ್ಯ ಮನಸ್ಸಿನ ಗ್ರಹಿಕೆಗಿಂತ ಬೇರೆ ಯಾವುದರ ಗ್ರಹಿಕೆ ಇಲ್ಲದವರು ರೂಢಿಯ ಪ್ರಕಾರ ಕೈಕೊಳ್ಳುವಂತೆ ಇಲ್ಲವೆ ಕೈಕೊಳ್ಳಲು ತೋರಿಬರುವಂತೆ ನಿಮಗೆ ಹೇಳುತ್ತಾರೆ: "ಓಹ್ ಅದು ಅತ್ಯಂತ ಸ್ವಾಭಾವಿಕವಾಗಿದೆ." ಕೇವಲ ಭೌತಿಕವಾಗಿರುವ ಗ್ರಹಿಕೆಯಲ್ಲದೆ ಅವರಿಗೆ ಬೇರೆ ಯಾವ ಗ್ರಹಿಕೆ ಇಲ್ಲದಿದ್ದರೆ ಕಂಪನವೊಂದರ ಗುಣಲಕ್ಷಣವನ್ನು ಭಾವನೆಗೆ ತಂದುಕೊಳ್ಳುವುದಕ್ಕೆ ಅವರಲ್ಲಿ ಕ್ಷಮತೆ ಇಲ್ಲದಿದ್ದಾಗ (ಕೆಲವರು ಅಸ್ಪಷ್ಟವಾಗಿ ಭಾವನೆಗೆ ತಂದುಕೊಳ್ಳುತ್ತಾರೆ, ಅದನ್ನೂ ಭಾವನೆಗೆ ತಂದುಕೊಳ್ಳಲು ಕ್ಷಮತೆಯಿಲ್ಲದವರಲ್ಲಿ ಅದಕ್ಕೆ ಅನುಗುಣವಾದ ಏನೂ ಅವರಲ್ಲಿ ಇಲ್ಲದಿದ್ದರೆ ಇಲ್ಲವೆ ಅವರಲ್ಲಿ ಏನಾದರೂ ಇದ್ದರೆ ಅದಕ್ಕೆ ಅವರು ಎಚ್ಚರಗೊಂಡಿರುವುದಿಲ್ಲ) ಇಲ್ಲಿಯ ಜೀವನವನ್ನು ನೋಡುತ್ತಾರೆ ಮತ್ತು ನಿಮಗೆ ಹೇಳುತ್ತಾರೆ: "ಅದು ಭೌತಿಕ ಜೀವನದ ಹಾಗಿದೆ, – ಬಹುಶಃ ನಿಮ್ಮವೇ ಆದ ಕೆಲವು ವಿಚಾರಗಳಿರಬಹುದು, ತಮ್ಮವೇ ವಿಚಾರಗಳನ್ನಿಟ್ಟುಕೊಂಡ ಅನೇಕ

ಜನರಿರುತ್ತಾರೆ; ಬಹುಶಃ ನೀವು ಕಾರ್ಯಗಳನ್ನು ವಿಶಿಷ್ಟ ರೀತಿಯಲ್ಲಿ ಕೈಕೊಳ್ಳುತ್ತಿರಬಹುದು. ಒಟ್ಟಿನಲ್ಲಿ ಅದು ನಾನು ಜೀವಿಸುವ ಜೀವನದ ಹಾಗಿದೆ."... ಮತ್ತು ಹಾಗಾಗಿ ಒಂದು ಸಮಯದಲ್ಲಿ ಅತಿಮಾನಸ ಪ್ರಜ್ಞೆ ಪ್ರಕಟಗೊಳ್ಳಬಹುದು, ಅದು ಇಲ್ಲಿ ಪ್ರಜ್ಞಾಪೂರ್ಣವಾಗಿರುತ್ತದೆ, ಭೌತದ್ರವ್ಯದ ಮೇಲೆ ಕಾರ್ಯ ಕೈಕೊಳ್ಳುತ್ತದೆ, ಆದರೆ ಅದರ ಕಂಪನದಲ್ಲಿ ಪ್ರಜ್ಞಾಪೂರ್ವಕವಾಗಿ ಭಾಗವಹಿಸದಿದ್ದವರು ಅದನ್ನು ಗ್ರಹಿಸಲು ಕ್ಷಮತೆ ಇಲ್ಲದವರಾಗಿರುತ್ತಾರೆ. ಜನರು ಹೇಳುತ್ತಾರೆ: "ಅತಿಮಾನಸ ಶಕ್ತಿ ಪ್ರಕಟವಾದಾಗ ಅದನ್ನು ನಾವು ಸರಿಯಾಗಿ ತಿಳಿದುಕೊಳ್ಳುತ್ತೇವೆ, ಅದನ್ನು ನೋಡಲಾಗುವುದು."– ಅವಶ್ಯವಾಗಿ ಅದು ಹಾಗಾಗುವುದಿಲ್ಲ. ಹಾಗೆ ಹೇಳುವ ಜನರು, ಈ ಸ್ಥಳವನ್ನು ದಾಟಿಕೊಂಡು ಹೋಗುವ ಕಡಿಮೆ ಸಂವೇದನತ್ವವಿರುವ ಜನರು, ಇಲ್ಲಿ ವಾಸಿಸುವ ಜನರೂ ಕೂಡ ಇಲ್ಲಿಯ ವಾತಾವರಣ ಬೇರೆಡೆಯಲ್ಲಿರುವುದಕ್ಕಿಂತ ಭಿನ್ನವಾಗಿದೆ ಎಂದು ಭಾವನೆ ತಂದುಕೊಳ್ಳದವರಿಗಿಂತ ಹೆಚ್ಚಿನ ಭಾವನೆ ತಂದುಕೊಳ್ಳುವುದಿಲ್ಲ ... ಇಲ್ಲಿ ನಾನು ಹೇಳುವುದನ್ನು ಕೇಳಿರಿ: ಜಪಾನಿನಿಂದ ಮರಳಿ ಬರುತ್ತಿದ್ದಾಗ ನನಗಾದ ಅನುಭವ. ಸಮುದ್ರದಲ್ಲಿ ನಾವೆಯೊಂದರಲ್ಲಿ ನಾನಿದ್ದೆ, ಏನನ್ನೂ ನಿರೀಕ್ಷಿಸುತ್ತಿರಲಿಲ್ಲ (ಸಹಜವಾಗಿ ನಾನು ನನ್ನ ಅಂತರಂಗದ ಜೀವನದೊಂದಿಗೆ ಕಾರ್ಯನಿರತಳಾಗಿದ್ದೆ.) ಆದರೆ ಭೌತಿಕವಾಗಿ ನಾವೆಯೊಂದರಲ್ಲಿದ್ದೆ ಆಗ ಹಠಾತ್ತಾಗಿ, ಇದ್ದಕ್ಕಿದ್ದಂತೆ ಪಾಂಡಿಚೇರಿಯಿಂದ ಎರಡು ನಾವಿಕರ ಮೈಲುಗಳಷ್ಟು ದೂರದಲ್ಲಿದ್ದಾಗ, ವಾತಾವರಣ, ಗಾಳಿ ಇವುಗಳ ಗುಣಲಕ್ಷಣ ಎಷ್ಟೊಂದು ಬದಲಾಯಿತೆಂದರೆ ನಾವು ಶ್ರೀ ಅರವಿಂದರ ಪ್ರಭಾಮಂಡಲವನ್ನು ಪ್ರವೇಶಿಸುತ್ತಿದ್ದೇವೆ ಎಂದು ನಾನು ತಿಳಿದುಕೊಂಡೆ. ಅದು ಭೌತಿಕ ಅನುಭವವಾಗಿತ್ತು. ಸಾಕಷ್ಟು ಎಚ್ಚತ್ತುಕೊಂಡ ಪ್ರಜ್ಞೆ ಇದ್ದವರು ಅಂತಹ ಅನುಭವವನ್ನು ಪಡೆಯಬಲ್ಲರು ಎಂದು ನಾನು ಖಾತರಿ (guarantee) ನೀಡುತ್ತೇನೆ.

**CWM, 4/222-23** **- ಶ್ರೀಮಾತೆ**

*

**ಶ್ರೀ ಅರವಿಂದರು ಹೆಚ್ಚು ಸುಲಭ ಲಭ್ಯರಾಗಿದ್ದಾರೆ**

ನಿಸ್ಸಂಶಯವಾಗಿ ನಾವು ಈಗ ಅವರೊಂದಿಗೆ ಸುಲಭವಾಗಿ ಸಂಪರ್ಕ ಪಡೆಯಬಹುದು. ಅವರೊಂದಿಗೆ ತಮ್ಮನ್ನು ಸಂಪರ್ಕದಲ್ಲಿರಿಸಿಕೊಂಡ ಅನೇಕ

ಜನರಿದ್ದಾರೆ ಹಾಗೂ ಅವರು ತಮಗೆ ಬೇಕಾದ ಉತ್ತರ ದೊರಕಿಸುತ್ತಾರೆ. ಅವರು ನಮಗೆ ಹೆಚ್ಚು ಸುಲಭಲಭ್ಯರಾಗಿದ್ದಾರೆ ಮತ್ತು ಹೆಚ್ಚು ಕ್ರಿಯಾಶೀಲರಾಗಿದ್ದಾರೆ.

ಏನೋ ಒಂದು ಸರಿಯಾಗಿರದಿದ್ದರೆ ಮತ್ತು ನೀವು ಅದಕ್ಕೆ ಕಾರಣವನ್ನು ತಿಳಿದುಕೊಳ್ಳಲು ಬಯಸಿದರೆ ಇಲ್ಲವೆ ನೀವು ದೌರ್ಬಲ್ಯವೊಂದನ್ನು ತೊಡೆದು ಹಾಕುವುದಿದ್ದರೆ, ವಾಸಿಯಾಗಬೇಕಾದರೆ ಇಲ್ಲವೆ ನಿರ್ಮಲರಾಗಬೇಕಾದರೆ, ಪರಿಶುದ್ಧರಾಗುವುದಕ್ಕೆ ಇರುವ ತೊಂದರೆಯನ್ನು ತೆಗೆದು ಹಾಕುವುದಿದ್ದರೆ – ಯಾವುದೇ ಉತ್ತರಕ್ಕೆ ಸಮಾಧಿಯ ಹತ್ತಿರ ಬಂದು ಶ್ರೀ ಅರವಿಂದರನ್ನು ಕೇಳಿದರೆ ನೀವು ಉತ್ತರ ದೊರಕಿಸುವಿರಿ. ಅವರ ಉತ್ತರವನ್ನಷ್ಟೇ ಅಲ್ಲ, ಅವರ ಆಶೀರ್ವಾದಗಳನ್ನು, ಕರುಣೆಯನ್ನು ಹಾಗೂ ಜ್ಞಾನೋದಯವನ್ನು ನೀವು ದೊರಕಿಸುತ್ತೀರಿ, ಸರ್ವಸಮರ್ಥವಾದ ಅವರ ದೈವೀ ಪ್ರೇಮದಲ್ಲಿ ನೀವು ಮುಳುಗಿ ಹೋಗುತ್ತೀರಿ, ಅದರ ಹಿಡಿತಕ್ಕೆ ಒಳಗಾಗುತ್ತೀರಿ. ಒಮ್ಮೆ ನೀವು ಅವರಿಗೆ ನಿಮ್ಮನ್ನು ಅರ್ಪಿಸಿಕೊಂಡರೆ ನೀವು ಎಲ್ಲ ಅನಿಷ್ಟಗಳ ವಿರುದ್ಧ ರಕ್ಷಣೆ ಪಡೆಯುತ್ತೀರಿ. ಅವರ ದೈವೀ ಪ್ರಭಾವ ಈ ರೀತಿಯದಾಗಿದೆ. ಸರಳರು, ನಿಷ್ಕಪಟರಾದವರು ಹಾಗೂ ವಿನಮ್ರರು ಆಗಿರುವವರಿಗೆ ಅವರು ತಮ್ಮನ್ನು ತೆರೆದು ತೋರಿಸುತ್ತಾರೆ. ಪರಿಪೂರ್ಣ ಪ್ರಜ್ಞೆಯಿಂದ ಅವರು ಅಲ್ಲಿದ್ದಾರೆ ಮತ್ತು ಜಗತ್ತಿನ ಎಲ್ಲ ಚಟುವಟಿಕೆಗಳಿಗೆ ನಿರ್ದೇಶನ ನೀಡುತ್ತಾರೆ.

ಅದು ಅತ್ಯದ್ಭುತವಾಗಿದೆ. ಅವರ ದೈವೀ ಸಾನ್ನಿಧ್ಯ ಕಂಪಿಸುತ್ತದೆ, ಮೂರ್ತರೂಪದ್ದಾಗಿದೆ, ಸಮಾಧಿಯ ಸುತ್ತಲೂ ಇದೆ. ಅವರ ದೈವೀ ಪ್ರಭಾವ ಕೇಂದ್ರ ಸತ್ತೆಯಲ್ಲಿ ಒಳನುಗ್ಗುತ್ತದೆ ಹಾಗೂ ಸ್ಪರ್ಶಿಸುತ್ತದೆ ಹಾಗೂ ಪ್ರಜ್ಞೆ ಆಧ್ಯಾತ್ಮಿಕ ಜೀವನಕ್ಕಾಗಿ ಎಚ್ಚತ್ತುಕೊಳ್ಳುವಂತೆ ಮಾಡುತ್ತದೆ. ನಾಸ್ತಿಕರು, ನಂಬಿಕೆ ಇಲ್ಲದವರು, ದುಷ್ಟ ಸಂಕಲ್ಪ ಇದ್ದವರೂ ಕೂಡ ಕುತೂಹಲದಿಂದ ನೋಡಲು ಬಂದಾಗ ರಹಸ್ಯ ರಸವಿದ್ಯೆಯಿಂದ ಆಶ್ಚರ್ಯಚಕಿತರಾಗಿ ಮರಳಿ ಹೋಗುತ್ತಾರೆ ಹಾಗೂ ಆಂತರಿಕ ಶಾಂತಿ ಪಡೆಯುತ್ತಾರೆ, ಏಕೆಂದರೆ ಅವರು ತಮ್ಮ ಶಾಂತಿಯನ್ನು, ಕರುಣೆಯನ್ನು ಸತತ ಸುರಿಯುತ್ತಾರೆ. ಅವರ ಬಳಿ ಹಾಯ್ದು ಹೋದವರಿಗೆ ಇದು ಸ್ನಾನ ಮಾಡಿಸುತ್ತದೆ. ಅದು ನಂಬಲಸಾಧ್ಯವಾದ ಅವರ ಶಕ್ತಿಯ ಹಾಗೂ ಸಾನ್ನಿಧ್ಯದ ಅತಿಯಾಗಿ ತುಂಬಿಕೊಂಡ ಕ್ರಿಯೆಯಾಗಿರುತ್ತದೆ.

**Blessings of the Grace, pp. 121-22** **- ಶ್ರೀಮಾತೆ**

*

## ಸಮಾಧಿಯ ಬಳಿ ಶ್ರೀ ಅರವಿಂದರಿರುತ್ತಾರೆ

ನಾನು ಸಮಾಧಿಯತ್ತ ನೋಡಿದಾಗ ಹಾಗೂ ಅಲ್ಲಿ ಏನು ಸಂಭವಿಸುತ್ತಿದೆ ಎಂಬುದನ್ನು ಗಮನಿಸಿದಾಗ ಪರಿವರ್ತನೆಗೊಳಪಡಿಸುವ, ಕಂಪಿಸುತ್ತಿರುವ ಚೈತನ್ಯದೊಂದಿಗೆ ಈ ಥಳಥಳಿಸುತ್ತಿರುವ ಪ್ರಕಾಶ ನೋಡಿ ಆಶ್ಚರ್ಯಚಕಿತ–ಳಾಗುತ್ತೇನೆ. ಅದು ಹೀಗೆ (ಶ್ರೀಮಾತೆಯವರು ತಮ್ಮ ತೋಳುಗಳನ್ನು ಮೇಲ್ಮುಖ ಮಾಡಿ ತೋರಿಸುತ್ತಾರೆ). ಸಮಾಧಿಯ ಅಗಲ ಹಾಗೂ ಉದ್ದಳತೆಗಳಿಂದ ಪ್ರಕಾಶದ ತಡೆಯಿಲ್ಲದ ಹರಿವಿನ ಹಾಗೆ ಭವ್ಯತೆ ಹಾಗೂ ಪ್ರಜ್ವಲತೆಗಳಿಂದ ಮೇಲಕ್ಕೇಳುತ್ತದೆ. ಅದು ಭೌತಿಕ ರೂಪ ತಾಳುತ್ತಿರುವ ಹೊಸ ದೈವೀ ಪ್ರಕಾಶ...

ಧ್ಯಾನ್ಯಕ್ಕಾಗಿ ಪವಿತ್ರಗೊಳಿಸಿದ ಸ್ಥಾನ ಅದಾಗಿದೆ, ಹರಟೆ ಹೊಡೆಯುವುದಕ್ಕಲ್ಲ. ಅಲ್ಲಿ ಎಂದೂ ಮಾತನಾಡಬಾರದು, ಮಾತಿನಿಂದ ಮನುಷ್ಯ ವಾತಾವರಣವನ್ನು ಕ್ಷೋಭೆಗೊಳಪಡಿಸುತ್ತಾನೆ. ಶ್ರೀ ಅರವಿಂದರು ತಮ್ಮ ವೈಭವೀಕರಿಸಿದ ದೇಹದೊಂದಿಗೆ ಸೂಕ್ಷ್ಮ ಚಲನೆಯಿಂದ ಇಡೀ ಜಗತ್ತನ್ನು ಪೋಷಿಸುತ್ತ, ಭಗವಂತನ ಅವರೋಹಣಕ್ಕಾಗಿ ಭಾಗಶಃ ಪರದೆಯ ಹಿಂದೆ ತಮ್ಮ ಪ್ರಜ್ಞೆಯನ್ನು ಪ್ರಕಟಿಸುತ್ತ ಅಲ್ಲಿ ಇರುವರು. ಅವರು ನಮ್ಮ ದೈವೀ ಸಾಧ್ಯತೆಗೆ ಜೀವಂತ ವಾಗ್ದಾನವಿದ್ದ ಹಾಗಿದ್ದಾರೆ, ದೈವೀ ಪ್ರಕಾಶದಿಂದ ಹಾಗೂ ದೈವೀ ಸಾಮರ್ಥ್ಯದಿಂದ ಹೊರಸೂಸುತ್ತಿರುವ ದೈವೀ ವಚನ ನೀಡುವವರಾಗಿದ್ದಾರೆ– ಅದು ದೈವೀ ಪ್ರಕಟಣೆಯತ್ತ ಪ್ರಗತಿಪರ ಮುನ್ನಡೆ. ಆ ಕಾರಣದಿಂದಾಗಿ ಇಡೀ ವಾತಾವರಣ ದೈವೀ ಹಾಗೂ ಘನತೆವೆತ್ತ ದೈವೀ ಶಾಂತಿಯೊಂದಿಗೆ ತುಂಬಿಕೊಂಡಿದೆ, ತಿಳಿಯಿತೆ? ತಮ್ಮನ್ನೇ ದೈವೀಕರಣಗೊಳಿಸಿಕೊಂಡು, ಮನುಕುಲದ ಪ್ರತಿನಿಧಿಯೆಂದು ದೈವೀ ದೇಹದಿಂದ ಅಲ್ಲಿರುವವರು ಅವರಾಗಿದ್ದಾರೆ, ತಮ್ಮದೇ ಪ್ರಯತ್ನದಿಂದ, ತಪಸ್ಸಿನಿಂದ ಹಾಗೂ ಸಾಧನೆಯಿಂದ ಅವರು ತಮ್ಮ ದೈವೀ ದೇಹವನ್ನು ತಯಾರು ಮಾಡಿದ್ದಾರೆ, ಆ ದೇಹ ವೈಭವೋಪೇತವಾಗುವಂತೆ, ಮಾಡಿದ್ದಾರೆ. ಅವರಿಗಾದ ಸಿದ್ಧಿಗಳು ಹಾಗೂ ಅನುಭವಗಳು, ತಮ್ಮ ಯೌಗಿಕ ಪ್ರಯತ್ನದಿಂದ ತಮ್ಮ ದೇಹದಲ್ಲಿ ಸಂಗ್ರಹಿಸಿದ್ದುದು ಇವು ಅವರ ದೇಹವನ್ನು ಪರಿವರ್ತನೆಗೊಳಪಡಿಸುವ ಸಾಮರ್ಥ್ಯದಿಂದ ತುಂಬಿವೆ. ಹೊರಗೆ ಪ್ರವಹಿಸುವ ಒಂದು ಶಕ್ತಿಯಿಂದ ಹಾಗೂ ಒಂದು ಪ್ರಕಾಶದಿಂದ ಅದು ಕ್ರಿಯಾಶೀಲವಾಗಿ ತುಂಬಿಕೊಂಡಿದೆ. ಇಡೀ ವಾತಾವರಣವನ್ನು

ಆವರಿಸಿರುವುದು ಇದೇ ಆಗಿದೆ. ಅದು ತಾಳಿಕೊಳ್ಳುತ್ತದೆ, ಏಕೆಂದರೆ ಅದು ಅತಿಮಾನಸ ಶಕ್ತಿಯಾಗಿದೆ, ಕುಂದುತ್ತಿರುವ ಕುರುಹನ್ನು ತೋರಿಸುವುದಿಲ್ಲ. ಅದು ಕುಂದಲಾರದು.

ಜನರು ಸಮಾಧಿಯ ಹತ್ತಿರ ಸುತ್ತುಹಾಕಿ ಹೋಗುತ್ತಿರುವಾಗ ಇದನ್ನೇ ಅವರು ಹೀರಿಕೊಳ್ಳುತ್ತಾರೆ. ಅದನ್ನು ಅವರು ತಿಳಿದುಕೊಳ್ಳದೆ ಶ್ರೀ ಅರವಿಂದರ ಪ್ರೇಮದಲ್ಲಿ ಸ್ನಾನ ಮಾಡುತ್ತಾರೆ. ಸಮಾಧಿಯನ್ನು ಸಮೀಪಿಸಿದಾಗ ತಾವೇಕೆ ದಿಗ್ಭ್ರಮೆಗೊಳಗಾಗುತ್ತೇವೆ ಎಂಬುದರ ಅರಿವು ಅವರಿಗಾಗುವುದಿಲ್ಲ. ಅದು ಅದ್ಭುತವಾದದ್ದು. ತೆರೆದಿರಿಸಿಕೊಂಡವರು ಸ್ಪರ್ಶಕ್ಕೊಳಗಾಗುತ್ತಾರೆ, ತಮ್ಮನ್ನು ಮತ್ತೆ ತುಂಬಿಕೊಳ್ಳಲು ಅವರು ಮರಳಿ ಬರುತ್ತಾರೆ ಹಾಗೂ ತಮ್ಮ ಸತ್ತೆಯಲ್ಲಿ ವಾತಾವರಣದಲ್ಲಿರುವ ಈ ದೈವೀ ಶಾಂತಿಯನ್ನು ಮೈಗೂಡಿಸಿಕೊಳ್ಳುತ್ತಾರೆ. ಅವರ ಸಾನ್ನಿಧ್ಯ ಎಷ್ಟೊಂದು ಮೂರ್ತರೂಪದ್ದಾಗಿದೆ ಹಾಗೂ ಜೀವಂತವಾಗಿದೆ. ಪ್ರಜ್ಞಾಪೂರ್ಣ ಅಗಾಧವಾದದ್ದಿರುವುದರ ಹಾಗೆ ಅದು ಈ ವಾತಾವರಣದ ಮೇಲೆ ಪ್ರಾಬಲ್ಯ ಹೊಂದಿದೆ ಹಾಗೂ ಅದನ್ನು ತುಂಬುತ್ತದೆ. ಅದು ಅತಿಸೂಕ್ಷ್ಮ ಪ್ರಕಾಶಗಳು ಹಾಗೂ ವರ್ಣಗಳು, ವಶಪಡಿಸಿಕೊಳ್ಳಲಾಗದ ದಿವ್ಯಾನಂದವಿರುವ ಒಂದು ಸೌಂದರ್ಯ, ಪರಿಶುದ್ಧತೆಯಿರುವ ಒಂದು ಆತ್ಮ ಹಾಗೂ ಗ್ರಹಿಕೆಗೆ ಸಿಗದಿರುವ ಸಾನ್ನಿಧ್ಯ, ವಾಸ್ತವದಲ್ಲದಿದ್ದರೂ ಬಹುತೇಕವಾಗಿ ಭೌತಿಕವಾದದ್ದು, ಜಗತ್ತಿಗೆ ಅಪರಿಚಿತವಾದ ಮಾಧುರ್ಯವೊಂದನ್ನು ಕೊಂಡೊಯ್ಯುತ್ತಿರು–ವಂತಹದು. ಇವುಗಳಲ್ಲಿ ಅದು ಅವರ ಸಾನ್ನಿಧ್ಯ ತೇಲುತ್ತಿರುವಂತೆ ತೋರಿಬರುವುದನ್ನು ನಾನು ನೋಡುತ್ತೇನೆ. ಒಂದೇ ದಿಶೆಯಲ್ಲಿ ಗಮನವಿರಿಸಿದ, ಭಗವಂತನಿಗಾಗಿ ಉತ್ಸಾಹದಿಂದ ಅಭೀಪ್ಸೆಪಡುವ ಹೃದಯ ಸಮಾಧಿಯ ಬಳಿ ನಿಂತುಕೊಂಡರೆ ಹಾಗೂ ಕೇವಲ ಅವರ ಪರಮಸೌಖ್ಯವನ್ನಲ್ಲದೆ ಬೇರೇನನ್ನೂ ಬಯಸದಿದ್ದರೆ ಅದನ್ನು ಹೆಚ್ಚು ಒಳ್ಳೆಯ ಹಾಗೂ ಉಚ್ಚತರ ಸ್ವರ್ಗಗಳು ಅನುಭವಕ್ಕೆ ತಂದುಕೊಂಡಿರಬಹುದಾದುದಕ್ಕಿಂತ, ಪೃಥ್ವಿ ಎಂದಾದರೂ ತಿಳಿದುಕೊಳ್ಳದೆ ಇರುವಂತಹ ಹೆಚ್ಚು ಒಳ್ಳೆಯ ಪ್ರದೇಶಕ್ಕೆ ಕಳುಹಿಸಲಾಗುವುದು ಎಂದು ನನಗೆ ತೋರಿಬರುತ್ತದೆ.

ತಮ್ಮ ಅತ್ಯದ್ಭುತ ಸಾನ್ನಿಧ್ಯದೊಂದಿಗೆ ಈ ಸ್ಥಳದಲ್ಲಿ ಪ್ರಾಬಲ್ಯ ಹೊಂದಿರುವ ಶ್ರೀ ಅರವಿಂದರ ಪ್ರಜ್ಞೆಯೊಂದಿಗೆ ತಮ್ಮ ಪ್ರಜ್ಞೆ ಏಕವಾಗಲೆಂದು ನಿಜವಾಗಿ

ಬಯಸುವ ಭಕ್ತರು ಹಾಗೂ ಅಭೀಪ್ಸೆಪಡುವವರು ಈಗ ನನ್ನನ್ನು ನೀವು ನೋಡುತ್ತಿರುವಷ್ಟು ಮೂರ್ತರೂಪದಲ್ಲಿ ಅವರ ಉದಾತ್ತ ಸಾನ್ನಿಧ್ಯದ ಔನ್ನತ್ಯವನ್ನು ಕಂಡುಕೊಳ್ಳುತ್ತೀರಿ. ಅವರೊಡನೆ ಸಂಪರ್ಕ ಬೆಳೆಸಲು ಬಯಸುವವರಿಗೆ ಅವರು ಮಾರ್ಪಡಿಸಲಾಗದ ಉತ್ತರ ನೀಡುತ್ತಾರೆ. ತಮ್ಮ ಎಲ್ಲ ಸಾಮರ್ಥ್ಯದೊಂದಿಗೆ ಬಲಿಷ್ಠರಾಗಿ ಅವರು ಅಲ್ಲಿದ್ದಾರೆ ಹಾಗೂ ಪರದೆಯ ಹಿಂದಿದ್ದು ಅವರು ಹೊಸ ಸೃಷ್ಟಿಯ ಮೇಲೆ ಅಧ್ಯಕ್ಷತೆ ವಹಿಸುತ್ತಾರೆ, ಅದನ್ನು ಅವರು ಪೋಷಿಸಿಕೊಂಡು ಬಂದ ಪಟ್ಟುಹಿಡಿಯುವಿಕೆಯಿಂದ ಹಾಗೂ ನಂಬಲಸಾಧ್ಯವಾದ ತಾಳ್ಮೆಯಿಂದ ಕೈಕೊಳ್ಳುತ್ತಾರೆ, ಆದರೆ ದೃಢನಿಶ್ಚಯ ಮಾಡಿದ ಕಾರ್ಯದ ಹಾಗೆ ಒಂದು ಜಯದ ನಂತರ ಇನ್ನೊಂದು ಜಯ ಪಡೆಯುವುದಾಗಿರುತ್ತದೆ, ಮೊದಲು ಮನುಕುಲದ ಪ್ರಜ್ಞೆಯನ್ನು ಬದಲು ಮಾಡುವುದಿದೆ ಮತ್ತು ನಂತರ ಅದನ್ನು ಎಲ್ಲ ಆಯಾಮಗಳಲ್ಲಿ ಪರಿವರ್ತಿಸುವುದಿದೆ, ಇದಕ್ಕೆ ಅಡ್ಡಬರುವ ಈ ಅಡೆತಡೆಗಳನ್ನು ಹಾಗೂ ಕ್ಷಣಿಕ ಪತನಗಳನ್ನು ತಿಳಿದುಕೊಂಡು ಮನುಕುಲ ತನ್ನ ಮುಂದಿರುವ ಅಡೆತಡೆಗಳ ಮೇಲೆ ಜಯಸಾಧಿಸುವಂತೆ ಅದನ್ನು ತಯಾರು ಮಾಡುವುದಿದೆ, ಹಾಗೂ ಅವರ ದೈವೀ ಪ್ರಕಾಶದ ಶಾಂತಿಯಲ್ಲಿ ವಿಶ್ವವ್ಯಾಪಕ ಚಲನೆಯ ಮೂಲಕ ಅದರ ಕ್ರಿಯೆಯ ರೀತಿಗೆ ಹಾಗೂ ಅದರ ಮನೋಭಾವಕ್ಕೆ ಮಾರ್ಗದರ್ಶನ ಮಾಡುವುದಿದೆ. ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಇದಕ್ಕೆ ಆಧ್ಯಾತ್ಮಿಕ ಆಧಾರವಿದೆ, ಮತ್ತು ಕಪಟ ಧಾರ್ಮಿಕ ಚಲನೆಗಳೆಂದು ಕರೆಯಲಾದ ಹಾಗೂ ಅವುಗಳ ಸಾರ ಮತಾಂಧತೆ, ಯುದ್ಧ ಹಾಗೂ ಅನಾವಶ್ಯಕ ಜಗಳಗಳಾಗಿರುವಂತಹವುಗಳ ಆಧಾರ ಪಡೆದಿರುವುದಿಲ್ಲ.

**Blessings of the Grace, pp. 122-25** **- ಶ್ರೀಮಾತೆ**

*

**ಆಶ್ರಮದ ವಾತಾವರಣ**

ನಿವಾಸ ಮಹತ್ವದ್ದಾದದ್ದಲ್ಲ; ಆಂತರಿಕವಾಗಿ ಹತ್ತಿರ ಇರುವುದು ಮಹತ್ವದ್ದಾಗಿದೆ.

ಸತ್ಯವಾದದ್ದೇನೆಂದರೆ ಇಲ್ಲಿಂದ ಅಲ್ಲಿ ಹೊರಗೆ ಸಾಗಿ ಹೋಗುವ ಬಲಿಷ್ಠ ಶಕ್ತಿಯೊಂದಿದೆ ಮತ್ತು ಅದು ಸ್ವಾಭಾವಿಕವಾಗಿ ಕೇಂದ್ರದಲ್ಲಿ ಅತ್ಯಂತ

ಬಲಿಷ್ಠವಾಗಿದೆ. ಆದರೆ ಅದು ಹೇಗೆ ಪರಿಣಾಮ ಬೀರುತ್ತದೆ ಎಂಬುದು ಅದನ್ನು ಸ್ವೀಕರಿಸುವವನ ಮೇಲೆ ಅವಲಂಬಿಸಿರುತ್ತದೆ. ಸರಳ ವಿಶ್ವಾಸ, ನಂಬಿಕೆ, ತೆರೆದಿರಿಸಿಕೊಂಡಿರುವಿಕೆ, ಗಾಢನಂಬಿಕೆ ಇವುಗಳೊಂದಿಗೆ ಸ್ವೀಕರಿಸಿದರೆ, ಆಗ ಅದು ಸಂಪೂರ್ಣ ರಕ್ಷಣೆಯ ಹಾಗೆ ಕಾರ್ಯಮಾಡುತ್ತದೆ. ಆದರೆ ಅದು ದೂರದಲ್ಲೂ ಕೂಡ ಹಾಗೆ ಕಾರ್ಯಕೈಕೊಳ್ಳಬಲ್ಲದು.

*

ಆಶ್ರಮದ ಪರಿಸರವೆಂದರೇನು? ಆಶ್ರಮದ ಸಾಧಕರು ವಾಸಿಸುವ ಪ್ರತಿಯೊಂದು ಮನೆ ಆಶ್ರಮದ ಪರಿಸರದಲ್ಲಿದೆ. ಗೋಡೆಗಳ ಮಧ್ಯದಲ್ಲಿರುವ ಈ ಮನೆಗಳನ್ನು ಕುರಿತು ಅದು ಆಶ್ರಮ ಎಂದು ವಿಚಿತ್ರ ರೀತಿಯಲ್ಲಿ ಮಾತನಾಡುತ್ತಾರೆ, ಅದಕ್ಕೆ ಯಾವ ಅರ್ಥವೂ ಇಲ್ಲ. ಇಲ್ಲವೆ ಅವರು ಶ್ರೀಮಾತೆಯವರ ಹಾಗೂ ನನ್ನ ಪ್ರಭಾವ ಈ ಮನೆಗಳ ಸುತ್ತಲಿರುವ ಗೋಡೆಗಳ ಮಧ್ಯೆ ಮುಚ್ಚಿ ಹೋಗಿದೆ ಎಂದು ಯೋಚಿಸುತ್ತಾರೆಯೆ?

*

ಆಶ್ರಮದಲ್ಲಿ ಎರಡು ವಾತಾವರಣಗಳಿವೆ: ನಮ್ಮದೊಂದು ಹಾಗೂ ಸಾಧಕರದೊಂದು. ಸ್ವಲ್ಪ ಗ್ರಹಣಶಕ್ತಿಯಿದ್ದ ಜನರು ಹೊರಗಿನಿಂದ ಇಲ್ಲಿಗೆ ಬಂದಾಗ ಇಲ್ಲಿಯ ವಾತಾವರಣದಲ್ಲಿರುವ ಆಳವಾದ ಸ್ಥಿರತೆ ಹಾಗೂ ಶಾಂತಿಗಳಿಂದ ಆಶ್ಚರ್ಯಚಕಿತರಾಗುತ್ತಾರೆ ಮತ್ತು ಅವರು ಸಾಧಕರೊಂದಿಗೆ ಮಿಶ್ರಣಗೊಂಡಾಗ ಮಾತ್ರ ಈ ಗ್ರಹಿಕೆ ಹಾಗೂ ಪ್ರಭಾವ ಮಸುಕಾಗಿ ಹೋಗುತ್ತವೆ. ಆ ಇನ್ನೊಂದು ವಾತಾವರಣ ತಳಮಳದ್ದು ಹಾಗೂ ಮಬ್ಬಿನದು ಆಗಿರುತ್ತದೆ, ಅದನ್ನು ಸಾಧಕರೇ ಸ್ವತಃ ನಿರ್ಮಾಣ ಮಾಡಿರುತ್ತಾರೆ– ಅವರಿರಬೇಕಾದ ರೀತಿಯಲ್ಲಿ ಶ್ರೀಮಾತೆಯವರಿಗೆ ತಮ್ಮನ್ನು ತೆರೆದಿರಿಸಿಕೊಂಡಿದ್ದರೆ ಅವರು ಸ್ಥಿರತೆ ಹಾಗೂ ಶಾಂತಿಗಳಲ್ಲಿ ಜೀವಿಸಬಲ್ಲರು, ತಳಮಳ ಇಲ್ಲವೆ ಮಬ್ಬಿನಲ್ಲಲ್ಲ.

**CWSA, 35/631-32** **- ಶ್ರೀ ಅರವಿಂದರು**

*



**ಪ್ರಶ್ನೆ:** *ನಾನು ಮೆಟ್ಟಲುಗಳ ಸಾಲಿರುವುದರ ಹತ್ತಿರ ಇದ್ದಾಗ ಶ್ರೀಮಾತೆಯವರ ಕೋಣೆಗಳನ್ನು ನೋಡಬೇಕೆಂದು ಗಾಢ ಬಯಕೆ ನನ್ನಲ್ಲಿ ಬಂದಿತು. X ಹೇಳಿದ ಪ್ರಕಾರ ಮನುಷ್ಯ ತೊಂದರೆಯಲ್ಲಿದ್ದಾಗ ಶ್ರೀಮಾತೆಯವರ ಹತ್ತಿರ ಹೋಗಲು ಕೇಳಿಕೊಳ್ಳಬೇಕು.*

**ಶ್ರೀ ಅ:** ಆದರೆ, ಶ್ರೀಮಾತೆಯವರ ಹತ್ತಿರ ಬರುವುದು ಆಂತರಿಕ ಕೋಣೆಗಳ–ಲ್ಲಾಗಬೇಕು, ಏಕೆಂದರೆ ಆಂತರಿಕ ಕೋಣೆಗಳಲ್ಲಿ ಮನುಷ್ಯ ಯಾವಾಗಲೂ ಪ್ರವೇಶಿಸಬಲ್ಲನು ಹಾಗೂ ಅಲ್ಲಿಯೇ ಉಳಿದುಕೊಂಡುಬಿಡಲು ವ್ಯವಸ್ಥೆ ಮಾಡಿಕೊಳ್ಳಬಲ್ಲನು.

**CWSA, 32/496-97** **- ಶ್ರೀ ಅರವಿಂದರು**

*

# ವಿಶಿಷ್ಟ ಆಧ್ಯಾತ್ಮಿಕ ಸಮುದಾಯದಲ್ಲಿ ಜೀವಿಸುವುದು

## ಸಾಧನೆಯ ಗುರಿ, ಷರತ್ತುಗಳು ಹಾಗೂ ನಿಯಮಗಳು

ಪರಮೋಚ್ಚ ಪ್ರಜ್ಞೆ (ಸತ್–ಚಿತ್–ಆನಂದ) ಯೊಡನೆ ಏಕತೆ ಪಡೆಯುವುದು ಸಾಮಾನ್ಯ ಸಾಧನೆಗಳ ಗುರಿಯಾಗಿರುತ್ತದೆ. ಆ ಸ್ಥಿತಿಗೆ ತಲುಪಿದವರು ತಮ್ಮ ಮುಕ್ತಿಯನ್ನು ಕುರಿತು ಸಂತೃಪ್ತಿಯಿಂದ ಇದ್ದು ಬಿಡುತ್ತಾರೆ, ಹಾಗೂ ಜಗತ್ತನ್ನು ಅದರ ಅಸಂತುಷ್ಟ ಶೋಚನೀಯ ಸ್ಥಿತಿಗೆ ಬಿಟ್ಟುಕೊಡುತ್ತಾರೆ. ತದ್ವಿರುದ್ಧವಾಗಿ ಶ್ರೀ ಅರವಿಂದರ ಯೋಗ ಉಳಿದವರದು ಮುಕ್ತಾಯಗೊಂಡ ಹಂತದಿಂದ ಪ್ರಾರಂಭವಾಗುತ್ತದೆ. ಪರಮೋಚ್ಚನೊಡನೆ ಏಕತೆಯನ್ನು ಸಿದ್ಧಿಸಿಕೊಂಡ ನಂತರ, ಆ ಸಿದ್ಧಿಯನ್ನು ಬಾಹ್ಯ ಜಗತ್ತಿನ ಮೇಲೆ ಕೆಳಗಿಳಿಸಿ ತರಬೇಕು ಮತ್ತು ಪೃಥ್ವಿಯ ಮೇಲಿನ ಜೀವನದ ಪರಿಸ್ಥಿತಿಗಳು ಪೂರ್ತಿ ಪರಿವರ್ತನೆಗೆ ಒಳಪಡುವವರೆಗೆ ಅವುಗಳನ್ನು ಬದಲು ಮಾಡಬೇಕು. ಈ ಗುರಿಗನುಗುಣವಾಗಿ ಸಮಗ್ರ ಯೋಗದ ಸಾಧಕರು ಚಿಂತನೆ ಹಾಗೂ ಧ್ಯಾನದ ಜೀವನವನ್ನು ನಡೆಸುವುದಕ್ಕಾಗಿ ಜಗತ್ತಿನಿಂದ ನಿವೃತ್ತರಾಗಿ ಹೋಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಸಮಯದ ಮೂರು ಅಂಶಗಳಲ್ಲಿ ಒಂದು ಅಂಶವನ್ನು ಉಪಯುಕ್ತವಾಗುವ ಕಾರ್ಯಕ್ಕೆ ಮೀಸಲಾಗಿರಿಸಬೇಕು. ಆಶ್ರಮದಲ್ಲಿ ಎಲ್ಲ ಬಗೆಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಪ್ರತಿಯೊಬ್ಬನು ತನ್ನ ಸ್ವಭಾವಕ್ಕೆ ಅತ್ಯಂತ ಹೊಂದಿಕೆಯಾಗುವ ಕಾರ್ಯವನ್ನು ಆಯ್ದುಕೊಳ್ಳುತ್ತಾನೆ. ಆದರೆ ಸಮಗ್ರ ಪರಿವರ್ತನೆಯ ಗುರಿಯನ್ನು ದೃಷ್ಟಿಕೋನದಲ್ಲಿ ಯಾವಾಗಲೂ ಕಾಪಾಡಿಕೊಂಡು ಬರುತ್ತ ಅ ಕಾರ್ಯವನ್ನು ಸೇವಾ ಮನೋಭಾವದಿಂದ, ನಿಸ್ವಾರ್ಥದಿಂದ ಕೈಕೊಳ್ಳಬೇಕು.

ಈ ಉದ್ದೇಶ ಈಡೇರಬೇಕೆಂಬುದನ್ನು ಸಾಧ್ಯವಾಗಿಸುವುದಕ್ಕೆ ಈ ಆಶ್ರಮವನ್ನು ಸಂಘಟಿಸಲಾಗಿದೆ, ಅದರಿಂದಾಗಿ ಆಶ್ರಮವಾಸಿಗಳು ತಮ್ಮ ಯಥೋಚಿತ ಆವಶ್ಯಕತೆಗಳು ಪೂರೈಕೆ ಕಂಡುಕೊಳ್ಳುತ್ತಿವೆ ಎಂಬುದನ್ನು ಕಂಡುಕೊಳ್ಳುತ್ತಾರೆ ಮತ್ತು ಅವರು ತಮ್ಮ ಜೀವನದ ನಿರ್ವಹಣೆಗಾಗಿ ಚಿಂತಿಸಬೇಕಾದ ಆವಶ್ಯಕತೆ ಇರುವುದಿಲ್ಲ.

ಪಾಲಿಸಬೇಕಾದ ನಿಯಮಗಳು ಅತಿ ಕಡಿಮೆ ಇವೆ, ಅದರಿಂದಾಗಿ ಪ್ರತಿಯೊಬ್ಬನು ತನ್ನ ಅಭಿವೃದ್ಧಿಗಾಗಿ ಅವಶ್ಯವಿರುವ ಸ್ವಾತಂತ್ರ್ಯದ ಸಂತೋಷ

ಪಡೆಯಬಲ್ಲನು. ಆದರೆ ಕೆಲವು ವಿಷಯಗಳನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ, ಅವು 1. ರಾಜಕೀಯ, 2. ಧೂಮ್ರಪಾನ, 3. ಮದ್ಯಪಾನ ಹಾಗೂ 4. ಲೈಂಗಿಕ ಸಂತೋಷ ಪಡೆಯುವುದು.

ಎಲ್ಲರ ಎಂದರೆ ಚಿಕ್ಕವರ, ದೊಡ್ಡವರ, ತರುಣರ ಹಾಗೂ ವಯಸ್ಸಾದವರ ದೇಹದ ಆರೋಗ್ಯ, ಯೋಗಕ್ಷೇಮ, ಸಾಮಾನ್ಯ ಬೆಳವಣಿಗೆ ಇವುಗಳಿಗಾಗಿ ಹೆಚ್ಚಿನ ಕಾಳಜಿ ವಹಿಸಲಾಗುವುದು.

**CWM, 13/107-08** **- ಶ್ರೀಮಾತೆ**

*

**ಸಾಧನೆ ಕೈಕೊಳ್ಳಲು ಪ್ರತಿಯೊಬ್ಬನಿಗೂ ಅವನದೇ ರೀತಿಯಿದೆ**

ಪ್ರತಿಯೊಬ್ಬನಿಗೂ ಸಾಧನೆ ಕೈಕೊಳ್ಳುವ ಹಾಗೂ ಭಗವಂತನನ್ನು ಸಮೀಪಿಸುವ ಅವನದೇ ರೀತಿಯಿರುತ್ತದೆ ಮತ್ತು ಇತರರು ಅದನ್ನು ಹೇಗೆ ಕೈಕೊಳ್ಳುತ್ತಾರೆ ಎಂಬುದರ ಬಗ್ಗೆ ಅವನು ತೊಂದರೆಗೊಳಗಾಗಬಾರದು, ಅವರ ಯಶಸ್ಸು, ಇಲ್ಲವೆ ಅಪಯಶಸ್ಸು, ಅವರ ತೊಂದರೆಗಳು, ಅವರ ಭ್ರಾಂತಿಗಳು, ಅವರ ಅಹಂಮನ್ಯತೆ ಹಾಗೂ ಜಂಬ ಇವೆಲ್ಲ ಅವರ (ಶ್ರೀಮಾತೆಯವರ) ಕಾಳಜಿಗಳಲ್ಲಿವೆ, ಅವರಿಗೆ ಅನಂತ ತಾಳ್ಮೆ ಇದೆ, ಅದರರ್ಥ ಅಂತಹ ಜನರ ದೋಷಗಳನ್ನು ಅವರು ಒಪ್ಪಿಕೊಳ್ಳುತ್ತಾರೆ ಇಲ್ಲವೆ ಅವರು ಹೇಳುವುದಕ್ಕೆಲ್ಲ ಹಾಗೂ ಕೈಕೊಳ್ಳುವುದಕ್ಕೆಲ್ಲ ಆಧಾರ ನೀಡುತ್ತಾರೆ ಎಂದಲ್ಲ. ಶ್ರೀಮಾತೆಯವರು ಯಾವುದೇ ಜಗಳದಲ್ಲಿ, ವೈಷಮ್ಯದಲ್ಲಿ ಇಲ್ಲವೆ ವಾಗ್ವಾದದಲ್ಲಿ ಯಾರ ಪಕ್ಷವನ್ನೂ ವಹಿಸುವುದಿಲ್ಲ, ಆದರೆ ಅವರ ಮೌನದ ಅರ್ಥ ಅಂತಹದರಲ್ಲಿ ತೊಡಗಿಕೊಂಡವರು ಹೇಳಿದ್ದನ್ನು, ಕೈಕೊಂಡದ್ದನ್ನು ಅದು ಸರಿಯಾಗಿ ಇಲ್ಲದಿದ್ದಾಗ ಒಪ್ಪಿಕೊಳ್ಳುತ್ತಾರೆ ಎಂದಲ್ಲ. ಆಶ್ರಮ ಇಲ್ಲವೆ ಆಧ್ಯಾತ್ಮಿಕ ಜೀವನ ಕೆಲವು ಗಣ್ಯರಿರುವ ಇಲ್ಲವೆ ಮಾರ್ಗದರ್ಶನ ಮಾಡುವ ಪಾತ್ರವಹಿಸುವವರಿರುವ, ಸ್ಪರ್ಧೆಗಾಗಿ ಒಂದು ಕ್ಷೇತ್ರವಾಗಿರುವ– ಅದರಲ್ಲಿ ಒಬ್ಬನಿಗೆ ಹಕ್ಕಿರುತ್ತದೆ ಇಲ್ಲವೆ ತಾನು ಇತರರಿಗಿಂತ ಹೆಚ್ಚಿನವನು ಎಂದು ಸರಿಯಾಗಿ ತನ್ನನ್ನು ಪರಿಗಣಿಸಬಹುದು– ವೇದಿಕೆಯಲ್ಲ. ಜಗತ್ತನ್ನು ಕುರಿತು ಸಾಮಾನ್ಯ ಮನೋಭಾವ ಹೊಂದಿದವರು ಈ ವಿಷಯಗಳನ್ನು ಶೋಧಿಸಿದ್ದಾರೆ ಮತ್ತು ಅವುಗಳನ್ನು ಸಾಧನೆಯ ಜೀವನದಲ್ಲಿ ಕೊಂಡೊಯ್ಯುವ

ಪ್ರವೃತ್ತಿ ಇರುತ್ತದೆ, ಆದರೆ ಅದು ವಿಷಯಗಳ ಸತ್ಯವಲ್ಲ. ಶ್ರೀಮಾತೆಯವರು ಎಲ್ಲವನ್ನೂ ಸಹಿಸಿಕೊಳ್ಳುತ್ತಾರೆ, ಸಾಧಕರಲ್ಲಿ ಒಬ್ಬರು ಇನ್ನೊಬ್ಬರನ್ನು ಕುರಿತು ಟೀಕೆ ಮಾಡುವುದನ್ನು ಅವರು ನಿಷೇಧಿಸುವುದಿಲ್ಲ ಮತ್ತು ಈ ಟೀಕೆಗಳಿಗೆ ಅವರು ಯಾವ ಮೌಲ್ಯವನ್ನೂ ಕೊಡುವುದಿಲ್ಲ. ಆಧ್ಯಾತ್ಮಿಕ ಸ್ತರದಲ್ಲಿ ಈ ಎಲ್ಲ ವಿಷಯಗಳು ನಿರರ್ಥಕ ಎಂದು ಸಾಧಕರು ನೋಡಿದಾಗ ಇವೆಲ್ಲ ನಿಂತುಹೋಗುವ ಭರವಸೆ ತಾಳಬಹುದು.

**CWSA, 32/398** **- ಶ್ರೀ ಅರವಿಂದರು**

*

**ಕರ್ಮಯೋಗದ ಮನೋಭಾವದಲ್ಲಿ ಒಂದು ತರಬೇತು**

ಇಲ್ಲಿ ಕೈಕೊಳ್ಳುವ ಕಾರ್ಯ ಮತ್ತು ಜಗತ್ತಿನಲ್ಲಿ ಕೈಕೊಳ್ಳುತ್ತಿರುವ ಕಾರ್ಯ ಇವು ಸ್ವಾಭಾವಿಕವಾಗಿ ಒಂದೇ ಆಗಿರುವುದಿಲ್ಲ. ಅಲ್ಲಿ ಕೈಕೊಂಡ ಕಾರ್ಯ, ಸ್ವಾಭಾವಿಕವಾಗಿ, ದೈವೀ ಕಾರ್ಯವಲ್ಲ– ಅದು ಜಗತ್ತಿನಲ್ಲಿ ನಡೆಯುತ್ತಿರುವ ಸಾಮಾನ್ಯ ಕಾರ್ಯ. ಆದಾಗ್ಯೂ ಅದನ್ನು ಒಂದು ತರಬೇತು ಎಂದು ತೆಗೆದುಕೊಳ್ಳಬೇಕು ಮತ್ತು ಕರ್ಮಯೋಗದ ಭಾಗವೆಂದು ಭಾವಿಸಬೇಕು. ಅಲ್ಲಿ ಕಾರ್ಯದ ಸ್ವರೂಪಕ್ಕಿಂತ ಅದನ್ನು ಯಾವ ಮನೋಭಾವದಿಂದ ಕೈಕೊಳ್ಳಲಾಗುತ್ತದೆ ಎಂಬುದು ಮಹತ್ವದ್ದಾಗಿರುತ್ತದೆ. ಅದಕ್ಕಾಗಿ ಗೀತೆಯ ಮನೋಧರ್ಮವನ್ನು ಹೊಂದಿರಬೇಕು: ಆಸೆಗಳಿಲ್ಲದೆ ಇರುವುದು, ನಿರ್ಲಿಪ್ತಸ್ಥಿತಿ, ಜುಗುಪ್ಸೆ ಇಲ್ಲದೆ ಇರುವುದು, ಆದರೆ ಸಾಧ್ಯವಿದ್ದಷ್ಟು ಪರಿಪೂರ್ಣವಾಗುವಂತೆ ಕೈಕೊಳ್ಳುವುದಾಗಿದೆ; ಕುಟುಂಬದ ಸಲುವಾಗಿ, ಬಡತಿ (promotion)ಗಾಗಿ ಇಲ್ಲವೆ ಮೇಲಿನವರನ್ನು ಸಂತೋಷಪಡಿಸುವುದಕ್ಕಾಗಿ ಕೈಕೊಳ್ಳುವುದಲ್ಲ, ಆದರೆ ಸರಳವಾಗಿ ಏಕೆಂದರೆ ಅದು ನಿಮ್ಮ ಕೈಗೆ ಕೊಡಲಾದ ಕಾರ್ಯವಾಗಿರುತ್ತದೆ. ಅದು ಆಂತರಿಕ ತರಬೇತಿಗಾಗಿ ಒಂದು ಕ್ಷೇತ್ರ, ಅದಕ್ಕಿಂತ ಹೆಚ್ಚಿನದೇನಲ್ಲ. ಅದರಲ್ಲಿ ಮನುಷ್ಯ ಮೂರು ವಿಷಯಗಳನ್ನು ಕಲಿಯುವುದಿರುತ್ತದೆ: ಸಮತೆ, ಅಪೇಕ್ಷೆಗಳನ್ನಿರಿಸಿ–ಕೊಳ್ಳದೆ ಇರುವುದು ಹಾಗೂ ಸಮರ್ಪಣೆ. ಕಾರ್ಯವೊಂದನ್ನು ಅದರ ಸಲುವಾಗಿಯೇ ಭಗವಂತನಿಗೆ ಅರ್ಪಿಸುವುದಿರುವುದಿಲ್ಲ, ಆದರೆ ಕೈಕೊಳ್ಳುವುದನ್ನು, ಕೈಕೊಳ್ಳುವ ರೀತಿಯನ್ನು ಭಗವಂತನಿಗೆ ಅರ್ಪಿಸಬೇಕು. ಆ ಮನೋಭಾವದಿಂದ ಕೈಕೊಂಡಾಗ ಕಾರ್ಯ ಏನಾಗಿರುತ್ತದೆ ಎಂಬುದು ಮಹತ್ವದ್ದಾಗಿರುವುದಿಲ್ಲ. ಆ

ರೀತಿಯಲ್ಲಿ ಮನುಷ್ಯ ತನ್ನನ್ನು ಆಧ್ಯಾತ್ಮಿಕವಾಗಿ ತರಬೇತಿಗೆ ಒಳಪಡಿಸಿದಾಗ ಅವನಿಗೆ ಭಗವಂತನ ಸಲುವಾಗಿ ಕೊಟ್ಟ ಯಾವ ವಿಶಿಷ್ಟ ಕಾರ್ಯವನ್ನಾದರೂ ಅವನು ಕೈಕೊಳ್ಳಲು ತಯಾರಾಗಿರುತ್ತಾನೆ. ಆಶ್ರಮದಲ್ಲಿ ಕೊಡಲಾಗುವಂತಹ ಕಾರ್ಯ ಅವನಿಗೆ ಯಾವುದೇ ಒಂದು ದಿನ ಕೈಕೊಳ್ಳಲು ಕೊಡಬಹುದಾದಂತಹ ಕಾರ್ಯ.

**CWSA, 29/240-41** **- ಶ್ರೀ ಅರವಿಂದರು**

*

**ಸಾಧಕರಿಗಾಗಿ ಒಂದು ನಿಯಮ**

ನಿಮಗಾಗಿ ಒಂದು ನಿಯಮವನ್ನು ನಾನಿರಿಸಬಹುದು, "ಶ್ರೀಮಾತೆ–ಯವರಿಂದ ಮರೆಯಲ್ಲಿರಿಸಲು ನೀವು ಬಯಸಬಹುದಾದುದನ್ನು ಕೈಕೊಳ್ಳುವುದು ಬೇಡ, ಹೇಳುವುದು ಇಲ್ಲವೆ ಯೋಚಿಸುವುದು ಬೇಡ". ಮತ್ತು ನಿಮ್ಮಲ್ಲಿ ಹಾಗೂ ನಿಮ್ಮ ಪ್ರಾಣಿಕದಲ್ಲಿ ಮೇಲೆದ್ದು ಬಂದ ಆಕ್ಷೇಪಣೆಗಳಿಗೆ ಅದು ಉತ್ತರ ನೀಡುತ್ತದೆ, ಅಲ್ಲವೆ? ಇದು "ಈ ಕ್ಷುದ್ರ ವಿಷಯಗಳನ್ನು" ಶ್ರೀಮಾತೆಯವರ ಗಮನಕ್ಕೆ ತರುವುದರ ವಿರುದ್ಧವಿದೆ. ಈ ವಿಷಯಗಳಿಂದ ಶ್ರೀಮಾತೆಯವರು ಪೀಡೆಗೊಳ–ಗಾಗುತ್ತಾರೆ ಇಲ್ಲವೆ ಅವುಗಳನ್ನು ಕ್ಷುದ್ರ ಇಲ್ಲವೆ ಮಹತ್ವವಿಲ್ಲದವುಗಳು ಎಂದು ಪರಿಗಣಿಸುತ್ತಾರೆ ಎಂದು ನೀವು ಏಕೆ ಯೋಚಿಸಬೇಕು? ಇಡೀ ಜೀವನವೇ ಯೋಗವಾದರೆ ಯಾವುದನ್ನು ಕ್ಷುದ್ರ ಇಲ್ಲವೆ ಮಹತ್ವವಿಲ್ಲದ್ದು ಎಂದು ಕರೆಯಬಹುದು? ಶ್ರೀಮಾತೆಯವರು ಉತ್ತರ ನೀಡದಿದ್ದರೂ ನಿಮ್ಮ ಕ್ರಿಯೆಯ ಯಾವುದೇ ಮಹತ್ವದ ವಿಷಯವನ್ನು ಹಾಗೂ ಅಭಿವೃದ್ಧಿಯಾದುದನ್ನು ಅವರ ಮುಂದೆ ಸರಿಯಾದ ಮನೋಭಾವದಿಂದ ತಂದಿರಿಸಿರುವುದರ ಅರ್ಥ ಅದನ್ನು ಅವರ ರಕ್ಷಣೆಯಡಿಯಲ್ಲಿ, ದೈವೀ ಸತ್ಯದ ಪ್ರಕಾಶದಲ್ಲಿ, ಪರಿವರ್ತನೆಗಾಗಿ ಕಾರ್ಯ ಮಾಡುತ್ತಿರುವ ದೈವೀ ಸಾಮರ್ಥ್ಯದ ಕಿರಣಗಳಡಿಯಲ್ಲಿ ಇರಿಸಿರುವುದಾಗಿರುತ್ತದೆ, ಏಕೆಂದರೆ ಆ ಕಿರಣಗಳು ತಮ್ಮ ಲೀಲೆಯನ್ನು ಹಾಗೂ ಶ್ರೀಮಾತೆಯವರ ಗಮನಕ್ಕೆ ತಂದ ವಿಷಯಗಳ ಮೇಲೆ ತಮ್ಮ ಕ್ರಿಯೆಯನ್ನು ಪ್ರಾರಂಭಿಸುತ್ತವೆ. ಅದರಂತರಂದೊಳಗಿರುವ ಏನೋ ಒಂದು ಅದನ್ನು ಕೈಕೊಳ್ಳಬಾರದೆಂದು ಉಪದೇಶಿಸಿದಾಗ, ನಿಮ್ಮೊಳಗಿರುವ ಆತ್ಮ ಅದನ್ನು ಕೈಕೊಳ್ಳಬೇಕೆಂಬ ಚಲನೆಗೊಳಪಡಿಸಿದಾಗ, ಅದು ಪ್ರಾಣಿಕದ ತಂತ್ರವಾಗಿರಬಹುದು, ಅದಕ್ಕೆ ದೈವೀ

ಕಿರಣವನ್ನು ಹಾಗೂ ದೈವೀ ಸಾಮರ್ಥ್ಯದ ಕಾರ್ಯಗತಿಯನ್ನು ತೋರೆದುಬಿಡು–ವುದಿರುತ್ತದೆ. ಶ್ರೀಮಾತೆಯವರ ಅವಲೋಕನದಲ್ಲಿರುವ ನಿಮ್ಮ ಯಾವುದೇ ಭಾಗದ ಚಲನೆಗಳನ್ನು ಅವರ ಮುಂದಿರಿಸುತ್ತ ನಿಮ್ಮನ್ನು ಅವರಿಗೆ ತೆರೆದಿರಿಸಿಟ್ಟು–ಕೊಂಡರೆ, ಅದೇ ಸ್ವತಃ ಒಂದು ಸಂಬಂಧವನ್ನು, ವೈಯಕ್ತಿಕವಾಗಿ ಅವರ ಒಂದು ಹತ್ತಿರವಿರುವಿಕೆಯನ್ನು ನಿರ್ಮಾಣ ಮಾಡುತ್ತದೆಂಬುದನ್ನು ಅವಲೋಕಿಸ–ಬಹುದು, ಅದರ ಹೊರತಾಗಿ ಅವರ ಸರ್ವಸಾಮಾನ್ಯ, ನಿಶ್ಚಲನೀರವತೆ–ಯಲ್ಲಿರುವ, ಇಲ್ಲವೆ ನೇರವಾಗಿ ಆಮಂತ್ರಿಸಿರದ ಕ್ರಿಯೆ ಎಲ್ಲ ಸಾಧಕರೊಡನೆ ಮುಂದುವರಿದುಕೊಂಡು ಹೋಗುತ್ತದೆ.

ಈ ತೆರೆದಿರಿಸಿಕೊಳ್ಳುವಿಕೆಗೆ ನೀವು ತಯಾರಾದ ಭಾವನೆ ಹೊಂದಲು ತಯಾರಾದರೆ, ನಿಮ್ಮ ಆತ್ಮ ನಿಮ್ಮಲ್ಲಿರುವುದೆಲ್ಲವನ್ನೂ ಅವರ ಮುಂದೆ ಬರಿದಾಗಿರಿಸಲು ನಿಮಗೆ ಚಾಲನೆ ನೀಡಿದರೆ ಇದೆಲ್ಲವೂ ಸಹಜವಾಗಿ ಅಲ್ಲಿರುತ್ತದೆ. ಏಕೆಂದರೆ ಆಗ ಅದು ಫಲಪ್ರದವಾಗುತ್ತದೆ– ಅದು ಅಂತರಂಗದಿಂದ ಬಂದಿರಬೇಕು ಮತ್ತು ಸ್ವಯಂಪ್ರೇರಿತವಾಗಿರಬೇಕು ಹಾಗೂ ನಿಜವಾಗಿರಬೇಕು.

**CWSA, 32/449** **- ಶ್ರೀ ಅರವಿಂದರು**

*

## ಎಲ್ಲ ಸಂಬಂಧಗಳು ಪ್ರಾಣಿಕದ ಆಧಾರದಿಂದ ಆಧ್ಯಾತ್ಮಿಕ ಆಧಾರದತ್ತ ಸಾಗಿ ಹೋಗುತ್ತವೆ

ಎಲ್ಲ ಸಾಧಕರು ತಮ್ಮೊಳಗೆ ಒಬ್ಬರು ಇನ್ನೊಬ್ಬರಿಂದ ಪ್ರತ್ಯೇಕವಾಗಿರಬೇಕು, ಕದನಕ್ಕಾಗಿ ತಯಾರಾಗಿರಬೇಕು ಎಂಬ ಪೂರ್ವಕಲ್ಪಿತ ವಿಚಾರವನ್ನು ಬಿಟ್ಟುಕೊಡಬೇಕು. ಹೋರಾಟವಲ್ಲ, ಸಾಮರಸ್ಯ ಯೌಗಿಕ ಜೀವನದ ನಿಯಮ–ವಾಗಿರುತ್ತದೆ. ಈ ಪೂರ್ವಕಲ್ಪಿತ ವಿಚಾರ ಬಹುಶಃ ಹಳೆಯ ಕಾಲದಲ್ಲಿ ಗುರಿಯಾಗಿರಿಸಿಕೊಂಡ ನಿರ್ವಾಣದ ಯೋಚನೆಯಿಂದ ಮೇಲೆದ್ದು ಬರುತ್ತಿರಬಹುದು, ಆದರೆ ಇಲ್ಲಿ ನಿರ್ವಾಣವನ್ನು ಗುರಿಯಾಗಿರಿಸಿಕೊಂಡಿಲ್ಲ. ಇಲ್ಲಿರಿಸಿಕೊಂಡಿರುವ ಗುರಿ ಜೀವನದಲ್ಲಿ ಭಗವಂತನನ್ನು ಸಿದ್ಧಿಸಿಕೊಳ್ಳುವುದಾಗಿದೆ, ಮತ್ತು ಅದಕ್ಕಾಗಿ ಏಕತೆ ಮತ್ತು ಒಗ್ಗಟ್ಟು ಅತ್ಯಗತ್ಯವಾಗಿವೆ. X ತನ್ನ ಮನಸ್ಸಿನ ಕಣ್ಣಲ್ಲಿ ನಿನಗಾಗಿ ವಿರೋಧವನ್ನು ಅಭಿವೃದ್ಧಿಗೊಳಿಸುತ್ತಿರುವುದನ್ನು ನೋಡುವುದು

ನನಗೆ ಕಠಿಣವೆನಿಸುತ್ತದೆ ಮತ್ತು ನಿನಗೆ X ನಿಗಾಗಿ ವಿರೋಧವನ್ನು ಅಭಿವೃದ್ಧಿಪಡಿಸುವುದು ಸುಲಭವಾಗಿರುವುದಿಲ್ಲ; ಹಾಗಾಗಿ ಎಡೆಬಿಡದೆ ಕಾಡುವ ಪ್ರಾಣಿಕ ಕಲ್ಪನಾಶಕ್ತಿಯ ಭಯ ಹೊರಹೊಮ್ಮಿ ಬರಬಾರದು. ವಿರೋಧ ಮತ್ತು ಜಗಳಾಡುವುದು ಇವು ಯೌಗಿಕವಾದವುಗಳಲ್ಲ, ಯೌಗಿಕ ಪ್ರವೃತ್ತಿಗಳಲ್ಲ; ಈ ಆಶ್ರಮ ಜಗಳಗಳಿಂದ ಮಾತ್ರ ತುಂಬಿಕೊಂಡಿದೆ ಎಂಬ ವಾಸ್ತವತೆ ಅದು ಇನ್ನೂ ಬಹಳ ಅಪರಿಪೂರ್ಣ ಸಾಧಕರಿರುವ ಆಶ್ರಮವಾಗಿದೆ ಎಂಬುದನ್ನು ತೋರಿಸಿ–ಕೊಡುತ್ತದೆ, ಅದಿನ್ನೂ ಯೋಗಿಗಳ ಆಶ್ರಮವಾಗಿಲ್ಲ. ಅದರರ್ಥ ವಿರೋಧ ಹಾಗೂ ಜಗಳಾಡುವಿಕೆ ಇವು ಆಧ್ಯಾತ್ಮವನ್ನು ಅರಸುವವನ ಧರ್ಮವಾಗಿಲ್ಲ ಎಂದಿದೆ. ಯೋಗದ ಆದರ್ಶ ಎಲ್ಲರೂ ಭಗವಂತನಲ್ಲಿ ಹಾಗೂ ಅವನ ಸುತ್ತ ಕೇಂದ್ರೀಕೃತಗೊಂಡಿರಬೇಕು ಮತ್ತು ಸಾಧಕರ ಜೀವನ ಆ ದೃಢ ಬುನಾದಿಯ ಮೆಲೆ ಸ್ಥಾಪಿತವಾಗಿರಬೇಕು, ಅವರ ವೈಯಕ್ತಿಕ ಸಂಬಂಧಗಳು ಕೂಡ ಅವುಗಳ ಕೇಂದ್ರವನ್ನು ಭಗವಂತನಲ್ಲಿ ಹೊಂದಿರಬೇಕು. ಅಲ್ಲದೆ ಎಲ್ಲ ಸಂಬಂಧಗಳು ಪ್ರಾಣಿಕದಿಂದ ಆಧ್ಯಾತ್ಮಿಕ ಆಧಾರದತ್ತ ಸಾಗಿ ಹೋಗಬೇಕು, ಪ್ರಾಣಿಕ ಆಧ್ಯಾತ್ಮಿಕವಾದುದರ ಒಂದು ರೂಪ ಹಾಗೂ ಉಪಕರಣವಾಗಬೇಕು.– ಇದರರ್ಥ ಪ್ರತಿಯೊಬ್ಬರು ತಮ್ಮಲ್ಲಿ ಯಾವುದೇ ಸಂಬಂಧ ಹೊಂದಿರಲಿ ಎಲ್ಲ ಅಸೂಯೆ, ಹೋರಾಟ, ದ್ವೇಷ, ವಿರೋಧ, ವೈರ–ಸಾಧನ ಹಾಗೂ ಇತರ ಅನಿಷ್ಟ ಪ್ರಾಣಿಕ ಭಾವನೆಗಳು ಇವೆಲ್ಲವನ್ನೂ ಬಿಟ್ಟುಕೊಡಬೇಕು, ಏಕೆಂದರೆ ಅವು ಆಧ್ಯಾತ್ಮಿಕ ಜೀವನದ ಯಾವುದೇ ಭಾಗಗಳಾಗುವುದಿಲ್ಲ. ಹಾಗೆಯೇ ಅಹಂಕಾರದ ಎಲ್ಲ ಪ್ರೇಮ, ಆಸಕ್ತಿ ಇವು ಮಾಯವಾಗಬೇಕು. ಕೇವಲ ಅಹಂಕಾರದ ಸಲುವಾಗಿ ಇರುವ ಪ್ರೇಮ ಮತ್ತು ಆಸಕ್ತಿ ಅಹಂಕಾರಕ್ಕೆ ನೋವುಂಟಾದ ಹಾಗೂ ಅತೃಪ್ತಿಯುಂಟಾದ ಕೂಡಲೆ ಪ್ರೀತಿಸುವುದನ್ನು ನಿಲ್ಲಿಸುತ್ತದೆ ಹಾಗೂ ವೈರ–ಸಾಧನವನ್ನು ಹಾಗೂ ದ್ವೇಷವನ್ನು ಪಾಲಿಸಿಕೊಂಡು ಬರುತ್ತದೆ. ಅಲ್ಲಿ ಪ್ರೇಮದ ಹಿಂದೆ ನಿಜವಾದ ಜೀವಿಸುವಿಕೆ, ಉಳಿದುಕೊಳ್ಳುವ ಏಕತೆ ಇವಿರಬೇಕು: ಸಹಜವಾಗಿ ಲೈಂಗಿಕ ಅಶುದ್ಧತೆಯಂತಹ ವಿಷಯಗಳು ಕೂಡ ಮಾಯವಾಗಬೇಕು ಎಂಬುದನ್ನೂ ತಿಳಿದುಕೊಳ್ಳಲಾಗಿರುತ್ತದೆ.

**CWSA, 31/288-89** **- ಶ್ರೀ ಅರವಿಂದರು**

*

## ಪರಿಶುದ್ಧತೆ ಹಾಗೂ ಭಾವಶೂನ್ಯ ವೈರಾಗ್ಯ

ಆಶ್ರಮದಲ್ಲಿರುವ ಎಲ್ಲರೂ ಪ್ರತಿಯೊಬ್ಬರನ್ನು ಕುರಿತು ಉದಾಸೀನ ಭಾವನೆ ಹೊಂದಿರುವುದಿಲ್ಲ, ಗೆಳೆತನವನ್ನು ಇಲ್ಲವೆ ಒಲವನ್ನು ಯೋಗದಿಂದ ಪ್ರತ್ಯೇಕವಾಗಿರಿಸಿರುವುದಿಲ್ಲ. ಭಗವಂತನೊಡನೆ ಸ್ನೇಹ, ಸಾಧನೆಯಲ್ಲಿ ಗುರುತಿಸಲಾದ ಸಂಬಂಧವಾಗಿದೆ. ಸಾಧಕರ ನಡುವೆ ಗೆಳೆತನಗಳು ಅಸ್ತಿತ್ವದಲ್ಲಿವೆ ಹಾಗೂ ಅವುಗಳಿಗೆ ಶ್ರೀಮಾತೆಯವರು ಪ್ರೋತ್ಸಾಹ ನೀಡುತ್ತಾರೆ. ಕೇವಲ ನಾವು ಅವುಗಳನ್ನು ಹೆಚ್ಚು ನಿಶ್ಚಿತ ಆಧಾರದ ಮೇಲೆ ಸ್ಥಾಪಿಸುವುದನ್ನು ಅರಸುತ್ತೇವೆ; ಸಾಮಾನ್ಯ ಮಾನವರಲ್ಲಿರುವ ಗೆಳೆತನಗಳು ಬೃಹತ್–ಪ್ರಮಾಣದಲ್ಲಿ ಸುರಕ್ಷಿತವಲ್ಲದ ರೀತಿಯಲ್ಲಿ ಸ್ಥಾಪಿತಗೊಂಡಿರುವಂತೆ ಅಲ್ಲ. ಅದು ನಿಖರವಾಗಿ ಏಕೆಂದರೆ ನಾವು ಗೆಳೆತನ, ಭ್ರಾತೃತ್ವ, ಪ್ರೇಮ ಇವು ಪವಿತ್ರವಾದ ಸಂಗತಿಗಳು ಎಂದು ಇಟ್ಟುಕೊಂಡಿದ್ದೇವೆ ಮತ್ತು ಈ ಬದಲಾವಣೆಯನ್ನು ಬಯಸುತ್ತೇವೆ– ಏಕೆಂದರೆ ಅಹಂಕಾರದ ಚಲನೆಗಳಿಂದ ಅವು ಪ್ರತಿಕ್ಷಣ ಮುರಿದು ಬೀಳುವುದನ್ನು ನಾವು ನೋಡಲು ಬಯಸುವುದಿಲ್ಲ; ಅಹಂಕಾರದ ಚಲನೆಗಳು ಪ್ರಾಣಿಕ ಪ್ರವೃತ್ತಿಗೊಳ–ಗಾಗಿರುವ ಭಾವೋದ್ರೇಕಗಳು, ಅಸೂಯೆಗಳು, ನಂಬಿಕೆ ದ್ರೋಹಗಳು ಇವುಗಳಿಂದ ಕೊಳಕಾಗಿರುತ್ತವೆ, ಕೆಟ್ಟುಹೋಗಿರುತ್ತವೆ, ಹಾಳಾಗಿರುತ್ತವೆ– ಅವು ನಿಜವಾಗಿ ಪವಿತ್ರವಾದವುಗಳು ಹಾಗೂ ಸುರಕ್ಷಿತವಾದವುಗಳು ಆಗುವಂತೆ ಮಾಡಲು, ಅವು ಜೀವದಲ್ಲಿ ಬೇರುಬಿಡುವಂತೆ, ಭಗವಂತನ ಶಿಲೆಯಮೇಲೆ ಸ್ಥಾಪಿತಗೊಳ್ಳುವಂತೆ ಆಗಲೆಂದು ನಾವು ಬಯಸುತ್ತೇವೆ. ನಮ್ಮದು ವಿರಕ್ತಿಯ ಯೋಗವಲ್ಲ; ಅದು ಪರಿಶುದ್ಧತೆಯನ್ನು ಗುರಿಯಾಗಿರಿಸಿಕೊಂಡಿದೆ, ಭಾವಶೂನ್ಯ ವೈರಾಗ್ಯವನ್ನಲ್ಲ. ನಾವು ಅಭೀಪ್ಸೆಪಡುತ್ತಿರುವ ಸಾಮರಸ್ಯದಲ್ಲಿ ಗೆಳೆತನ ಹಾಗೂ ಪ್ರೇಮ ಇವು ಅತ್ಯಗತ್ಯವಾದ ಗುರುತುಗಳು. ಅದೊಂದು ವ್ಯರ್ಥ ಕನಸಲ್ಲ, ಏಕೆಂದರೆ ಅಪರಿಪೂರ್ಣ ಸ್ಥಿತಿಗಳಲ್ಲಿಯೂ ಕೂಡ ಅತ್ಯಗತ್ಯದ್ದಾದ ಅಂಶದ ಸ್ವಲ್ಪಮಾತ್ರದ್ದಾದರೂ ಅಲ್ಲಿ ಬೇರಿನಲ್ಲಿದ್ದಾಗ ಆ ವಿಷಯ ಸಾಧ್ಯವಾಗುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಅದು ಕಠಿಣವಾದದ್ದು ಹಾಗೂ ಹಳೆಯ ಅಡೆತಡೆಗಳು ಇನ್ನೂ ಹಟಮಾರಿತನದಿಂದ ಅಂಟಿಕೊಳ್ಳುತ್ತವೆ. ಆದರೆ ಯಾವ ವಿಜಯವನ್ನೂ ಗುರಿಗೆ ಸ್ಥಿರಗೊಳಿಸಿದ ನಿಷ್ಠೆಯಿಲ್ಲದೆ, ದೀರ್ಘ ಪ್ರಯತ್ನವಿಲ್ಲದೆ ಸಾಧಿಸಲಾಗದು. ಪಟ್ಟುಹಿಡಿಯುವುದನ್ನು ಹೊರತುಪಡಿಸಿ ಬೇರೆ ಯಾವ ರೀತಿಯೂ ಇರುವುದಿಲ್ಲ.

**CWSA, 31/294-95** **- ಶ್ರೀ ಅರವಿಂದರು**

*

## ಗೃಹಸ್ಥ ಹಾಗೂ ಸನ್ಯಾಸಿ

ಇಲ್ಲಿ ಸನ್ಯಾಸಿ ಹಾಗೂ ಗೃಹಸ್ಥ ಇವರನ್ನು ಕುರಿತು ಯಾವ ಪ್ರಶ್ನೆಯೂ ಇರುವುದಿಲ್ಲ. ಆ ಭಿನ್ನತೆ ನಮಗಾಗಿ ಅಸ್ತಿತ್ವದಲ್ಲಿ ಇರುವುದಿಲ್ಲ. ಕನಿಷ್ಠಪಕ್ಷ ಸಾಮಾನ್ಯ ರೀತಿಯ ಸನ್ಯಾಸಿಗೆ ಇಲ್ಲಿ ಸ್ಥಾನವಿಲ್ಲ, ಏಕೆಂದರೆ ನಾವು ಜೀವನದತ್ತ, ಹಾಗೆಯೇ ಗೃಹಸ್ಥರತ್ತ ಬೆನ್ನು ತಿರುಗಿಸುವುದಿಲ್ಲ, ಏಕೆಂದರೆ ನಾವು ಸಾಮಾನ್ಯ ಮಾನವ ಜೀವನವನ್ನು, ಅದರ ಸಂಸ್ಥೆಗಳನ್ನು ಹಾಗೂ ಉದ್ದೇಶಗಳನ್ನು ಹಿಂದೆ ಉಳಿಯುವಂತೆ ಬಿಟ್ಟುಕೊಡುವುದಿಲ್ಲ.

ಯಾವುದೇ ನಿಜವಾದ ಲಾಭದೊಂದಿಗೆ ಇಲ್ಲಿ ಎರಡು ಬಗೆಯ ಜನರು ಉಳಿದುಕೊಳ್ಳಬಲ್ಲರು:

1. ಇಲ್ಲಿರುವ ಆಧ್ಯಾತ್ಮಿಕ ವಾತಾವರಣವನ್ನು ಹಾಗೂ ಬದಲಾವಣೆಯನ್ನು ಹೀರಿಕೊಳ್ಳಲು ತಯಾರಾದ ಜನರು.
2. ಇನ್ನೂ ತಯಾರಾಗಿರದೆ ಇದ್ದ ಜನರು ಆ ಪ್ರಭಾವಕ್ಕೆ ಶರಣಾಗತ–ರಾಗಬಹುದು ಹಾಗೂ ಅವರು ತಯಾರಾಗುವವರೆಗೆ ನಿಧಾನ ಗತಿಯಿಂದ ತಯಾರುಮಾಡಿಕೊಳ್ಳಬಹುದು.

**CWSA, 35/563-64** **- ಶ್ರೀ ಅರವಿಂದರು**

*

## ಪರೀಕ್ಷೆಗೆ ಒಳಗಾಗಿರುವ ಕಾಲ

ನಾನು ನಿನ್ನ ಪತ್ರವನ್ನು ಓದಿದ್ದೇನೆ ಹಾಗೂ ಅದರಲ್ಲಿದ್ದುದನ್ನು ಪರಿಗಣಿಸಿದ್ದೇನೆ ಮತ್ತು ನೀನು ಕೇಳುತ್ತಿರುವ ಅವಕಾಶವನ್ನು ನಿನಗೆ ಕೊಡಲು ನಿರ್ಧರಿಸಿದ್ದೇನೆ– ಎರಡು ಅಥವಾ ಮೂರು ತಿಂಗಳುಗಳ ಕಾಲ ನೀನು ಆಶ್ರಮದಲ್ಲಿ ವಾಸ ಮಾಡಬಹುದು ಮತ್ತು ನೀನು ನಿಜವಾಗಿ ಅರಸುತ್ತಿರುವ ಸ್ಥಳ ಹಾಗೂ ಮಾರ್ಗ ಇಲ್ಲಿವೆಯೇ ಎಂಬುದನ್ನು ಕಂಡುಹಿಡಿಯಬಹುದು; ಮತ್ತು ನಾವೂ ಕೂಡ ನಿನ್ನ ಆಧ್ಯಾತ್ಮಿಕ ಸಾಧ್ಯತೆಗಳನ್ನು ಹೆಚ್ಚು ಹತ್ತಿರದಿಂದ ಅವಲೋಕನ ಮಾಡುವುದರ ಮೂಲಕ ನಾವು ನಿನಗೆ ಎಷ್ಟು ಒಳ್ಳೆಯ ರೀತಿಯಲ್ಲಿ ಸಹಾಯ ನೀಡಬಲ್ಲೆವು ಮತ್ತು ಈ ಯೋಗ ನಿನಗೆ ಅತ್ಯಂತ ಒಳ್ಳೆಯದಾಗಿದೆಯೋ ಎಂಬುದನ್ನು ಕುರಿತು ವಿವೇಚನೆ ಮಾಡುತ್ತೇವೆ.

ಹಲವಾರು ಕಾರಣಗಳಿಂದಾಗಿ ಈ ಪರೀಕ್ಷೆ ಅವಶ್ಯವಾಗಿದೆ, ಆದರೆ ವಿಶೇಷವಾಗಿ ಏಕೆಂದರೆ ಅದು ಅನುಸರಿಸುವುದಕ್ಕೆ ಕಠಿಣವಾದ ಯೋಗ ಮತ್ತು ಬಹಳ ಕಡಿಮೆ ಜನರು ಸ್ವಭಾವದ ಮೇಲೆ ಅದು ಒತ್ತಾಯದಿಂದ ಬೇಡುವುದನ್ನು ಪೂರೈಸಬಲ್ಲರು. ನೀನು ಬರೆದುದರ ಪ್ರಕಾರ ನನ್ನಲ್ಲಿ ನೀನು ನೋಡಿದ್ದು ಬೌದ್ಧಿಕ ಪರಿಪೂರ್ಣತೆಯಿಂದಾದುದರ ಆಧ್ಯಾತ್ಮೀಕರಣ ಹಾಗೂ ದೈವೀಕರಣ, ಆದರೆ ವಾಸ್ತವದಲ್ಲಿ ನಾನು ಮನಸ್ಸಿನ ಸಂಪೂರ್ಣ ನಿಶ್ಚಲನೀರವತೆಯಿಂದ ಅದನ್ನು ತಲುಪಿದ್ದೆ ಮತ್ತು ಅದು ಆ ನಿಶ್ಚಲ ನೀರವತೆಯಲ್ಲಿ ಸಿದ್ಧಿಸಿಕೊಂಡ ಯಾವುದೇ ಬಗೆಯ ಆಧ್ಯಾತ್ಮೀಕರಣ ಹಾಗೂ ದೈವೀಕರಣ ಅತಿ ಬೌದ್ಧಿಕ ಉಚ್ಚತರ ಜ್ಞಾನದ ಅವರೋಹಣದಿಂದ ಆದದ್ದು. ಗೀತಾಪ್ರಬಂಧಗಳು (Essays on the Gita) ಗ್ರಂಥವನ್ನೇ ಸ್ವತಃ ಮನಸ್ಸಿನ ಆ ನಿಶ್ಚಲ ನೀರವತೆಯಲ್ಲಿ ಬರೆಯಲಾಗಿತ್ತು, ಅಲ್ಲಿ ಬೌದ್ಧಿಕ ಪ್ರಯತ್ನವಿರಲಿಲ್ಲ ಮತ್ತು ಮೇಲ್ಗಡೆಗಿರುವ ಈ ಜ್ಞಾನದ ಮುಕ್ತ ಚಟುವಟಿಕೆ ಅದರಲ್ಲಿತ್ತು. ಈ ಯೋಗದ ತತ್ವ ಮಾನವ ಸ್ವಭಾವವನ್ನು, ಅದಿರುವ ಹಾಗೆ, ಪರಿಪೂರ್ಣಗೊಳಿಸುವುದಾಗಿಲ್ಲ, ಆದರೆ ಸತ್ತೆಯ ಎಲ್ಲ ಭಾಗಗಳನ್ನು ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಪರಿವರ್ತನೆಗೆ ಒಳಪಡಿಸುವುದಾಗಿದೆ; ಇದನ್ನು ಅವುಗಳ ಮೇಲೆ ಕಾರ್ಯಕೈಕೊಳ್ಳುವ ಆಂತರಿಕ ಪ್ರಜ್ಞೆಯ ಮೂಲಕ ಮತ್ತು ನಂತರ ಅವುಗಳ ಮೇಲೆ ಕಾರ್ಯಕೈಕೊಳ್ಳುವ ಉಚ್ಚತರ ಪ್ರಜ್ಞೆಯ ಮೂಲಕ ಮಾಡಲಾಗುವುದು, ಉಚ್ಚತರ ಪ್ರಜ್ಞೆ ಹಳೆಯ ಚಲನೆಗಳನ್ನು ಹೊರಗೆ ಚೆಲ್ಲಿ ಕೊಡುತ್ತದೆ ಇಲ್ಲವೆ ತನ್ನ ಪ್ರತೀಕದಲ್ಲಿ ಬದಲು ಮಾಡುತ್ತದೆ ಹಾಗೂ ನಿಮ್ನತರ-ವಾದದ್ದನ್ನು ಉಚ್ಚತರವಾಗುವಂತೆ ರೂಪಪರಿವರ್ತನೆಗೆ ಒಳಪಡಿಸುತ್ತದೆ. ಅದು ಬುದ್ಧಿಮತ್ತೆಯನ್ನು ಅತಿಶಯಿಸುವಷ್ಟು ಪರಿಪೂರ್ಣಗೊಳಿಸುವುದಾಗಿಲ್ಲ, ಜ್ಞಾನದ ತತ್ವವನ್ನು ಹೆಚ್ಚು ಭವ್ಯವಾಗುವಂತೆ, ಶ್ರೇಷ್ಠತರವಾಗುವಂತೆ ಬದಲಾದದ್ದನ್ನಾಗಿ ಮಾಡುವುದಿದೆ– ಮತ್ತು ಅದೇ ರೀತಿಯಲ್ಲಿ ಸತ್ತೆಯ ಎಲ್ಲ ಭಾಗಗಳಿಗೆ ಮಾಡುವುದಿದೆ.

ಇದು ಒಂದು ನಿಧಾನ ಗತಿಯ ಹಾಗೂ ಕಠಿಣವಾದ ವಿಧಾನ; ಮಾರ್ಗ ದೀರ್ಘವಾಗಿದೆ ಮತ್ತು ಅವಶ್ಯವಾದ ಆಧಾರವನ್ನು ಸ್ಥಾಪಿಸುವುದು ಸುಲಭ-ವಾದದ್ದಲ್ಲ. ಅಸ್ತಿತ್ವದಲ್ಲಿರುವ ಹಳೆಯ ಸ್ವಭಾವ ತಡೆದು ನಿಲ್ಲಿಸುತ್ತದೆ ಹಾಗೂ ಅಡ್ಡಗಟ್ಟುತ್ತದೆ ಮತ್ತು ತೊಂದರೆಗಳು, ಅವುಗಳ ಮೇಲೆ ಜಯಸಾಧಿಸುವವರೆಗೆ,

ಒಂದರ ನಂತರ ಒಂದರಂತೆ ಮೇಲೆದ್ದು ಬರುತ್ತವೆ. ಹಾಗಾಗಿ ಈ ಮಾರ್ಗದ ಮೇಲೆ ಹೆಜ್ಜೆ ಇರಿಸುವುದಕ್ಕಾಗಿ ಮನುಷ್ಯನಿಗೆ ಕರೆಕೊಡಲಾಗಿದೆ ಎಂಬುದನ್ನು ನಿರ್ಧರಿಸುವ ಮೊದಲು ಅವನು ನಿಶ್ಚಿತತೆ ಹೊಂದಿರುವುದು ಅವಶ್ಯವಾಗಿದೆ.

**CWSA, 35/585-86** **- ಶ್ರೀ ಅರವಿಂದರು**

*

**ನಿಜವಾದ ಹೋರಾಟ ಮತ್ತು ಅದಕ್ಕೆ ಉಪಾಯ**

ಇಲ್ಲಿರುವ ಸಾಧಕರು ಎಲ್ಲ ಬಗೆಯವರಾಗಿದ್ದಾರೆ, ಎಲ್ಲ ಹಂತಗಳಲ್ಲಿದ್ದಾರೆ, ಆದರೆ ನಿಜವಾದ ತೊಂದರೆ, ಪ್ರಗತಿ ಸಾಧಿಸಿದವರಿಗೂ ಕೂಡ, ಬಾಹ್ಯ ಮನುಷ್ಯನೊಂದಿಗೆ ಇರುತ್ತದೆ. ಹಳೆಯ ಆದರ್ಶವನ್ನು ಅನುಸರಿಸುವವರಲ್ಲಿಯೂ ಕೂಡ ಸಾಧಕನ ಬಾಹ್ಯ ಮನುಷ್ಯತ್ವ ಅವನೇನನ್ನಾದರೂ ಸಿದ್ಧಿಸಿಕೊಂಡಿದ್ದಾಗಲೂ ಮೊದಲಿದ್ದ ಹಾಗೆ ಉಳಿದುಕೊಳ್ಳುತ್ತದೆ. ಆಂತರಿಕ ಸತ್ತೆ ಮುಕ್ತವಾಗುತ್ತದೆ. ಬಾಹ್ಯದಲ್ಲಿದ್ದದ್ದು ತನ್ನ ಹಳೆಯ ಸ್ಥಿರಗೊಂಡ ಸ್ವಭಾವವನ್ನು ಇನ್ನೂ ಅನುಸರಿಸುತ್ತದೆ. ಬಾಹ್ಯ ಮನುಷ್ಯ ಕೂಡ ಬದಲಾದರೆ ನಮ್ಮ ಯೋಗ ಯಶಸ್ವಿಯಾಗುತ್ತದೆ, ಆದರೆ ಅದು ಎಲ್ಲ ವಿಷಯಗಳಲ್ಲಿ ಅತ್ಯಂತ ಕಠಿಣವಾದದ್ದು. ಭೌತಿಕ ಸ್ವಭಾವದಲ್ಲಿ ಬದಲಾವಣೆ ಆಗುವುದರ ಮೂಲಕ ಹಾಗೂ ಪ್ರಕೃತಿಯ ಅತ್ಯಂತ ನಿಮ್ನ ಭಾಗದಲ್ಲಿ ಅತ್ಯುಚ್ಚ ಪ್ರಕಾಶ ಅವರೋಹಣ ಮಾಡುವುದರ ಮೂಲಕ ಮಾತ್ರ ಅದನ್ನು ಕೈಕೊಳ್ಳಲಾಗುವುದು. ಅದು ಇದರಲ್ಲಿಯೇ ಹೋರಾಟ ಮುಂದುವರಿಸಿ–ಕೊಂಡು ಹೋಗಿದೆ. ಇಲ್ಲಿ ಬಹಳಷ್ಟು ಸಾಧಕರ ಆಂತರಿಕ ಸತ್ತೆ, ಅದೆಷ್ಟೇ ಇನ್ನೂ ಅಪರಿಪೂರ್ಣವಾಗಿದ್ದರೂ, ಸಾಮಾನ್ಯ ಮನುಷ್ಯನದಕ್ಕಿಂತ ಭಿನ್ನವಾಗಿರುತ್ತದೆ, ಆದರೆ ಬಾಹ್ಯದಲ್ಲಿದ್ದುದು ಅದರ ಹಳೆಯ ರೀತಿಗಳಿಗೆ, ವಿಧಾನಗಳಿಗೆ, ರೂಢಿ–ಗಳಿಗೆ ಇನ್ನೂ ಅಂಟಿಕೊಂಡಿರುತ್ತದೆ. ಬಹಳಷ್ಟು ಜನರು ಬದಲಾವಣೆಯ ಈ ಆವಶ್ಯಕತೆಗೆ ಎಚ್ಚತ್ತುಕೊಂಡಂತೆ ತೋರಿಬರುವುದಿಲ್ಲ. ಮತ್ತು ಇದರ ಅರಿವು ಪಡೆದ ನಂತರ ಹಾಗೂ ಇದನ್ನು ಕೈಕೊಂಡ ನಂತರ ಈ ಯೋಗ ತನ್ನ ಪೂರ್ತಿ ಪರಿಣಾಮಗಳನ್ನು ಆಶ್ರಮದಲ್ಲಿಯೇ ಉತ್ಪನ್ನ ಮಾಡುತ್ತದೆ.

**CWSA, 35/591** **- ಶ್ರೀ ಅರವಿಂದರು**

*

ನಮ್ಮದು ಆಧ್ಯಾತ್ಮಿಕ ಗುರಿ, ರಾಜಕೀಯವಾದದ್ದಲ್ಲ ಇಲ್ಲವೆ ಸಾಮಾಜಿಕ–ವಾದದ್ದಲ್ಲ. ನಾವು ವ್ಯಕ್ತಿಗತ ಪ್ರಜ್ಞೆಯ ಪರಿವರ್ತನೆಯನ್ನು ಬಯಸುತ್ತೇವೆ, ಆಡಳಿತ ರೀತಿಯ ಇಲ್ಲವೆ ಸರಕಾರದ ಬದಲಾವಣೆಯನ್ನಲ್ಲ. ಆ ಗುರಿಯನ್ನು ತಲುಪುವುದಕ್ಕೆ ನಾವು ಯಾವುದೇ ಮಾನವ ಸಾಧನದಲ್ಲಿ, ಅದೆಷ್ಟೇ ಸಾಮರ್ಥ್ಯಪೂರ್ಣವಾಗಿದ್ದರೂ, ದೃಢನಂಬಿಕೆಯನ್ನು ಇರಿಸುವುದಿಲ್ಲ; ನಮ್ಮ ವಿಶ್ವಾಸ ಕೇವಲ ದೈವೀಕೃಪೆಯಲ್ಲಿ ಮಾತ್ರವಿದೆ.

**CWM, 13/08** **- ಶ್ರೀಮಾತೆ**

*

**ಯೋಗದತ್ತ ಬರುವುದು**

ಮನುಷ್ಯ ಯೋಗದತ್ತ ಬರುವುದಕ್ಕೆ ಜೀವನ ಹಾಗೂ ಜನರು ಇವರತ್ತ ಜುಗುಪ್ಸೆ ಹೊಂದಿರಬಾರದು.

ತೊಂದರೆಗಳಿಂದ ದೂರ ಓಡಿಹೋಗುವುದಕ್ಕೆ ಮನುಷ್ಯ ಇಲ್ಲಿಗೆ ಬರಬಾರದು.

ಪ್ರೇಮದ ಹಾಗೂ ರಕ್ಷಣೆಯ ಮಾಧುರ್ಯವನ್ನು ಕಂಡುಕೊಳ್ಳುವುದಕ್ಕೆ ಕೂಡ ಇಲ್ಲಿಗೆ ಬರಬಾರದು, ಏಕೆಂದರೆ ಮನುಷ್ಯ ಸರಿಯಾದ ಮನೋಭಾವ ಹೊಂದಿದ್ದರೆ ಭಗವಂತನ ಪ್ರೇಮದ ಹಾಗೂ ರಕ್ಷಣೆಯ ಸಂತೋಷವನ್ನು ಎಲ್ಲೆಡೆಯಲ್ಲೂ ಪಡೆಯಬಹುದು.

ಭಗವಂತನ ಸೇವೆಯಲ್ಲಿ ಮನುಷ್ಯ ತನ್ನನ್ನು ಇಡಿಯಾಗಿ ಕೊಟ್ಟುಕೊಳ್ಳಲು, ಭಗವಂತನ ಸೇವೆಗೆ ತನ್ನನ್ನು ಇಡಿಯಾಗಿ ಮುಡುಪಾಗಿರಿಸಿಕೊಳ್ಳಲು ಬಯಸಿದಾಗ, ಸರಳವಾಗಿ ತನ್ನನ್ನು ಕೊಟ್ಟುಕೊಳ್ಳುವ, ಸೇವೆ ಸಲ್ಲಿಸುವ ಸಂತೋಷಕ್ಕಾಗಿ, ಮುಡುಪಾಗಿರಿಸುವಿಕೆ ಹಾಗೂ ಸೇವೆ ಇವುಗಳ ಹೊರತಾಗಿ ಪ್ರತಿಯಾಗಿ ಏನನ್ನೂ ಕೇಳದೆ ಇದ್ದಾಗ ಅವನು ಇಲ್ಲಿಗೆ ಬರಲು ತಯಾರಾಗಿರುತ್ತಾನೆ ಮತ್ತು ಇಲ್ಲಿ ದ್ವಾರಗಳು ತೆರೆದಿರುವುದನ್ನು ನೋಡುತ್ತಾನೆ.

ನನ್ನ ಮಕ್ಕಳಿಗೆ, ಜಗತ್ತಿನಲ್ಲಿ ಅವರೆಲ್ಲಿಯೇ ಇರಲಿ, ಕೊಟ್ಟ ಆಶೀರ್ವಾದ–ಗಳನ್ನು ನಿಮಗೆ ಕೊಡುತ್ತೇನೆ ಮತ್ತು "ನಿಮ್ಮನ್ನು ತಯಾರು ಮಾಡಿಕೊಳ್ಳಿರಿ, ನನ್ನ ಸಹಾಯ, ಯಾವಾಗಲೂ, ನಿಮ್ಮೊಂದಿಗಿದೆ" ಎಂದು ನಿಮಗೆ ಹೇಳುತ್ತೇನೆ.

**CWM, 13/111-12** **- ಶ್ರೀಮಾತೆ**

*

**ಮಾರ್ಗವನ್ನು ಹಿಡಿದು ಸಾಗಿ ಹೋಗಿರಿ**

ನನ್ನ ಮಕ್ಕಳಾದ ನೀವೆಲ್ಲರೂ– ಇದನ್ನು ನಾನು ನಿಮಗೆ ಹೇಳುತ್ತಿದ್ದೇನೆ, ಹಲವಾರು ಸಲ ಪುನರಾವರ್ತಿಸಿ ಹೇಳಿದ್ದೇನೆ ಮತ್ತೆ ಪುನರಾವರ್ತಿಸಿ ಹೇಳುತ್ತಿದ್ದೇನೆ– ಅಸಾಧಾರಣವಾದ ಮುಕ್ತಿಯಿಂದಿರಿ. ಬಾಹ್ಯದಲ್ಲಿ ಕೆಲವು ಸೀಮಿತತೆಗಳಿವೆ, ಏಕೆಂದರೆ ನಾವೆಲ್ಲ ಬಹಳ ಜನರಿದ್ದೇವೆ ಮತ್ತು ಇಡೀ ಪೃಥ್ವಿ ನಮ್ಮ ವಿನಿಯೋಗಕ್ಕಾಗಿ ಇಲ್ಲ, ನಾವು ಸ್ವಲ್ಪಮಟ್ಟಿಗೆ ಒಂದು ವಿಶಿಷ್ಟ ಶಿಸ್ತುಪಾಲನೆಗೆ ನಿರ್ಬಂಧಿತರಾಗಿದ್ದೇವೆ, ಅದರಿಂದಾಗಿ ದೊಡ್ಡ ಅವ್ಯವಸ್ಥೆ ಅಲ್ಲಿರದಂತಾಗುತ್ತದೆ, ಆದರೆ ಆಂತರಿಕವಾಗಿ ನೀವು ಅತ್ಯದ್ಭುತ ಮುಕ್ತಿಯಲ್ಲಿರುತ್ತೀರಿ, ಯಾವ ಸಾಮಾಜಿಕ ನಿರ್ಬಂಧವಿಲ್ಲ, ಯಾವ ಬೌದ್ಧಿಕ ನಿರ್ಬಂಧವಿಲ್ಲ, ಯಾವ ನಿಯಮವಿಲ್ಲ, ಏನೂ ಇಲ್ಲ, ಆದರೆ ಅಲ್ಲಿರುವ ಪ್ರಕಾಶವಿದೆ, ಅದರಿಂದ ನೀವು ಲಾಭ ಪಡೆಯಬೇಕೆಂದು ಬಯಸಿದರೆ ಅದನ್ನು ಪಡೆಯಬಹುದು, ಅದನ್ನು ಪಡೆಯುವುದು ನಿಮಗೆ ಬೇಡಾದರೆ ನೀವು ಹಾಗೆ ಮಾಡಲು ಮುಕ್ತರಾಗಿದ್ದೀರಿ.

ಆದರೆ ನೀವು ಆಯ್ಕೆ ಮಾಡಿಕೊಂಡ ದಿನ– ನೀವು ಅದನ್ನು ಎಲ್ಲ ನಿಷ್ಕಾಪಟ್ಯದಿಂದ ಕೈಕೊಂಡಾಗ ಮತ್ತು ನಿಮ್ಮೊಳಗೆ ಮೂಲಭೂತ ನಿರ್ಧಾರದ ಭಾವನೆ ತಂದುಕೊಂಡಾಗ– ಆ ವಿಷಯ ಭಿನ್ನವಾಗಿರುತ್ತದೆ. ಅಲ್ಲಿ ಪ್ರಕಾಶವಿರುತ್ತದೆ ಮತ್ತು ಅನುಸರಿಸಿಹೋಗಬೇಕಾದ ಮಾರ್ಗವಿರುತ್ತದೆ, ಆ ಮಾರ್ಗವನ್ನು ಬಿಟ್ಟು ಬೇರೆ ಕಡೆಗೆ ತಿರುಗಬಾರದು. ಅದು ಯಾರನ್ನೂ ಮರಳುಗೊಳಿಸುವುದಿಲ್ಲ, ಯೋಗ ಒಂದು ತಮಾಷೆಯಲ್ಲ. ಅದು ಬಹಳ ನೇರವಾಗಿರುತ್ತದೆ, ನೀವು ಏನನ್ನು ಕೈಕೊಳ್ಳುತ್ತಿದ್ದೀರಿ ಎಂಬುದನ್ನು ತಿಳಿದು–ಕೊಂಡಿರಬೇಕು. ಆದರೆ ನೀವು ಅದನ್ನು ಆಯ್ದುಕೊಂಡಾಗ, ಅದನ್ನು ಹಿಡಿದುಕೊಂಡು ಸಾಗಿ ಹೋಗಬೇಕು. ಇನ್ನು ಮುಂದೆ ಹೊಯ್ದಾಡುವುದಕ್ಕೆ ನಿಮಗೆ ಹಕ್ಕಿರುವುದಿಲ್ಲ. ನೀವು ನೇರವಾಗಿ ಮುಂದೆ ಸಾಗಿ ಹೋಗಬೇಕು.

ಸರಿಯಾಗಿ ಕೈಕೊಳ್ಳಲು ಒಂದು ಸಂಕಲ್ಪ, ಪ್ರಗತಿಗಾಗಿ ಒಂದು ಪ್ರಯತ್ನ, ಸಾಮಾನ್ಯ ಮಾನವ ಸತ್ತೆಗಳ ಜೀವನಕ್ಕಿಂತ ಸ್ವಲ್ಪ ಒಳ್ಳೆಯದಾದ ಜೀವನವನ್ನು ಜೀವಿಸುವುದಕ್ಕೆ ಇಚ್ಛೆ ಇವುಗಳನ್ನು ನಾನು ಕೇಳುತ್ತಿದ್ದೇನೆ. ನೀವು ಅಸಾಧಾರಣವಾದ ಪ್ರಕಾಶಮಯ, ಪ್ರಜ್ಞಾಪೂರ್ಣ, ಸಾಮರಸ್ಯ ಹಾಗೂ ಸದಿಚ್ಛೆಯಿಂದ ತುಂಬಿಕೊಂಡ ಸ್ಥಿತಿಗಳಿರುವಲ್ಲಿ ಬೆಳೆದುಕೊಂಡು ಬಂದಿದ್ದೀರಿ ಮತ್ತು ಈ ಸ್ಥಿತಿಗಳಿಗೆ ಪ್ರತ್ಯುತ್ತರ

ನೀಡುವುದರಲ್ಲಿ ನೀವು ಜಗತ್ತಿನಲ್ಲಿ ಈ ಪ್ರಕಾಶದ, ಈ ಸಾಮರಸ್ಯದ ಈ ಸದಿಚ್ಛೆಯ ಅಭಿವ್ಯಕ್ತಿಯಾಗಬೇಕು. ಇದು ಆಗಲೇ ಬಹಳ ಒಳ್ಳೆಯದಾಗುತ್ತದೆ.

ಅತ್ಯಂತ ಕಷ್ಟಸಾಧ್ಯವಾಗಿರುವ, ಪರಿವರ್ತನೆಯ ಈ ಯೋಗ– ಮನುಷ್ಯ ಅದಕ್ಕಾಗಿ ಇಲ್ಲಿ (ನಾನು ಹೇಳುತ್ತಿರುವುದು ಪೃಥ್ವಿಯ ಮೇಲೆ ಎಂಬರ್ಥದಲ್ಲಿ) ಬಂದಿದ್ದೇನೆ ಮತ್ತು ಅಸ್ತಿತ್ವಕ್ಕಾಗಿ ಅದೊಂದೇ ಕಾರಣವಾಗಿದೆ ಎಂಬ ಭಾವನೆ ತಂದುಕೊಂಡರೆ– ಅದಕ್ಕಾಗಿ ಅವನು ಬಹಳ ಕಷ್ಟಪಡಬೇಕು, ವೇದನೆಪಡಬೇಕು, ಹೋರಾಟ ನಡೆಸಬೇಕು ಎಂಬುದು ಅಷ್ಟೊಂದು ಮಹತ್ವದ್ದಲ್ಲ– "ನಾನಿದನ್ನು ಬಯಸುತ್ತೇನೆ, ಬೇರೆ ಏನನ್ನೂ ಅಲ್ಲ". ಆಗ ಅದು ಭಿನ್ನ ವಿಷಯವಾಗುತ್ತದೆ. ಹಾಗಿರದಿದ್ದರೆ ನಾನು ಹೇಳುತ್ತೇನೆ: "ಸಂತೋಷದಿಂದಿರಿ ಹಾಗೂ ಒಳ್ಳೆಯವರಾಗಿರಿ ಇದಿಷ್ಟನ್ನೇ ನಾನು ನಿಮ್ಮಿಂದ ಕೇಳುತ್ತೇನೆ, ಒಳ್ಳೆಯವರಾಗಿರಿ ಎಂಬುದರ ಅರ್ಥ ನೀವು ಜೀವಿಸಿದ ಸ್ಥಿತಿಗಳು ಅಸಾಧಾರಣವಾಗಿವೆ ಎಂಬುದನ್ನು ತಿಳಿದುಕೊಳ್ಳಿರಿ, ಸಾಮಾನ್ಯ ಜೀವನವನ್ನು ಜೀವಿಸುವುದಕ್ಕಿಂತ ಉಚ್ಚತರ, ಹೆಚ್ಚು ಉದಾತ್ತವಾಗಿರುವ, ಹೆಚ್ಚು ನಿಜವಾದ ಜೀವನವನ್ನು ಜೀವಿಸಿರಿ, ಅದರಿಂದಾಗಿ ಈ ಪ್ರಜ್ಞೆಯ, ಈ ಪ್ರಕಾಶದ ಹಾಗೂ ಅದರ ಒಳ್ಳೆಯತನದ ಅಲ್ಪ ಮಾತ್ರವನ್ನಷ್ಟಾದರೂ ಈ ಜಗತ್ತಿನಲ್ಲಿ ಅಭಿವ್ಯಕ್ತಗೊಳ್ಳಲು ಅನುವು ಮಾಡಿ ಕೊಡುವಂತಾಗುವುದು, ಅದು ಬಹಳ ಒಳ್ಳೆಯದಾಗುತ್ತದೆ".

ಆದರೆ ಒಮ್ಮೆ ನೀವು ಯೋಗದ ಮಾರ್ಗದ ಮೇಲೆ ಹೆಜ್ಜೆ ಇರಿಸಿದ ನಂತರ ನಿಮ್ಮಲ್ಲಿ ಉಕ್ಕಿನಂತಹ ನಿರ್ಧಾರವಿರಬೇಕು, ಎಷ್ಟೇ ಬೆಲೆ ತೆತ್ತಾದರೂ ಗುರಿಯತ್ತ ನೇರವಾಗಿ ಸಾಗಿ ಹೋಗಬೇಕು.

**CWM, 7/199-200** **- ಶ್ರೀಮಾತೆ**

*

**ಶ್ರೀಮಾತೆಯವರ ವಿಧಾನ**

ನಿಮ್ಮಲ್ಲಿ ಬಹಳಷ್ಟು ಜನರು ಇಲ್ಲಿಗೆ ಬಹಳ ಚಿಕ್ಕವರಾಗಿದ್ದಾಗ ಬಂದಿರುವಿರಿ. ಆ ವಯಸ್ಸಿನಲ್ಲಿ ಆಧ್ಯಾತ್ಮಿಕ ಜೀವನ ಹಾಗೂ ಆಧ್ಯಾತ್ಮಿಕ ಬೋಧನೆ ಇವುಗಳ ಪ್ರಶ್ನೆ ಇರುತ್ತಿರಲಿಲ್ಲ– ಅದು ಒಟ್ಟಿನಲ್ಲಿ ಅಕಾಲಿಕವಾಗುತ್ತಿತ್ತು. ನೀವು ನಿಜವಾಗಿ ಈ

ವಾತಾವರಣದಲ್ಲಿ ಜೀವಿಸಿದ್ದೀರಿ, ಅದರ ಬಗ್ಗೆ ನಿಮಗೆ ಅರಿವೂ ಕೂಡ ಇಲ್ಲ, ನೀವು ನನ್ನನ್ನು ನೋಡುವುದನ್ನು ನನ್ನ ಮಾತು ಕೇಳುವುದನ್ನು ರೂಢಿಸಿಕೊಂಡಿದ್ದೀರಿ. ಎಲ್ಲ ಚಿಕ್ಕಮಕ್ಕಳ ಬಳಿ ಮಾತನಾಡುವ ಹಾಗೆ ನಾನು ನಿಮ್ಮ ಬಳಿ ಮಾತನಾಡುತ್ತೇನೆ, ಮನುಷ್ಯ ಮಕ್ಕಳೊಂದಿಗೆ ಆಟವಾಡುವ ಹಾಗೆ ನಿಮ್ಮೊಂದಿಗೆ ನಾನು ಆಟವಾಡಿದ್ದೇನೆ. ನೀವು ಕೇವಲ ಇಲ್ಲಿಗೆ ಬಂದು ಕುಳಿತುಕೊಳ್ಳುವುದಿತ್ತು ಮತ್ತು ನಾನು ಹೇಳಿದ್ದನ್ನು ಕೇಳುವುದಿತ್ತು, ನೀವು ಕೇವಲ ನನಗೆ ಒಂದು ಪ್ರಶ್ನೆ ಕೇಳುವುದಿತ್ತು ಮತ್ತು ನಾನು ನಿಮಗೆ ಉತ್ತರ ನೀಡುವುದಿತ್ತು, ನಾನು ಯಾರಿಗೂ ಯಾವುದೇ ವಿಷಯ ಕುರಿತು ಹೇಳುವುದನ್ನು ನಿರಾಕರಿಸಿಲ್ಲ– ಅದು ಬಹಳ ಸುಲಭವಾದದ್ದು– ಬದುಕುವುದು ಸಾಕಾಗುತ್ತದೆ– ನಿದ್ರೆ ಮಾಡುವುದು, ಆಹಾರ ಸೇವಿಸುವುದು, ವ್ಯಾಯಾಮ ಮಾಡುವುದು ಶಾಲೆಯಲ್ಲಿ ಅಭ್ಯಾಸ ಮಾಡುವುದು. ನೀವು ಬೇರೆ ಯಾವುದೇ ಸ್ಥಳದಲ್ಲಿ ಜೀವಿಸಬಹುದಾದಂತೆ ಇಲ್ಲಿ ಜೀವಿಸುತ್ತಿದ್ದೀರಿ ಮತ್ತು ಹಾಗಾಗಿ ಅದಕ್ಕೆ ನೀವು ಒಗ್ಗಿಕೊಂಡಿದ್ದೀರಿ.

ನಾನು ಬಹಳ ಕಟ್ಟುನಿಟ್ಟಾದ ನಿಯಮಗಳನ್ನು ಮಾಡಿದ್ದರೆ ಮತ್ತು "ನಾನು ಹೇಳಿದ್ದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವವರೆಗೆ ನಿಮಗೆ ಏನನ್ನು ಹೇಳುವುದಿಲ್ಲ" ಎಂದು ಹೇಳಿದ್ದರೆ ಆಗ ನೀವು ಸ್ವಲ್ಪ ಪ್ರಯತ್ನ ಮಾಡಬಹುದಾಗಿತ್ತು. ಆದರೆ ಅದು ನನ್ನ ವಿಚಾರವನ್ನು ಕಾಪಾಡಿಕೊಂಡು ಬರುವಂತಹದಲ್ಲ. ನಾನು ಹೆಚ್ಚಾಗಿ ವಾತಾವರಣದ ಸಾಮರ್ಥ್ಯದಲ್ಲಿ ಹಾಗೂ ಉದಾಹರಣೆಯ ಮೇಲೆ ನಂಬಿಕೆಯನ್ನಿರಿಸಿದ್ದೇನೆ, ಕಟ್ಟುನಿಟ್ಟಿನ ಬೋಧನೆಯ ಮೇಲಲ್ಲ. ಸಂಸರ್ಗದ ಮೂಲಕ ಸತ್ತೆಯಲ್ಲಿ ಏನೋ ಒಂದು ಎಚ್ಚತ್ತುಕೊಳ್ಳುವುದನ್ನು ಹೆಚ್ಚಿನ ರೀತಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇನೆ, ಕ್ರಮಬದ್ಧ, ಶಿಸ್ತುಪಾಲನೆಗೆ ಒಳಪಡಿಸಿದ ಪ್ರಯತ್ನದ ಮೇಲಲ್ಲ.

ಬಹುಶಃ, ಒಟ್ಟಿನಲ್ಲಿ, ಏನೋ ಒಂದು ತಯಾರಾಗುತ್ತದೆ ಮತ್ತು ಒಂದು ದಿನ ಮೇಲ್ಮೈಗೆ ಪುಟಿದೆದ್ದು ಬರುತ್ತದೆ.

ನಾನು ಭರವಸೆ ತಾಳಿದ್ದು ಅದೇ ಆಗಿದೆ.

**CWM, 9/372-73** **- ಶ್ರೀಮಾತೆ**

*

## ತೋರಿಕೆಗಳ ಮೂಲಕ ತೀರ್ಮಾನಕ್ಕೆ ಬರುವುದು ಬೇಡ

ಸಹಜವಾಗಿ, ಅದರ ಬಗ್ಗೆ ಅರಿವನ್ನೂ ಕೂಡ ಹೊಂದಿರದೆ, ಜನರು ತಮ್ಮದೇ ಕಲ್ಪನೆಗಳಿಗೆ ಭಗವಂತ ಹೊಂದಿಕೊಳ್ಳಲಿ ಎಂದು ಬಯಸುತ್ತ ಪಟ್ಟು ಹಿಡಿಯುತ್ತಾರೆ. ಏಕೆಂದರೆ ಯೋಚಿಸದೆ, ಕೇವಲ ಸ್ವಯಂಪ್ರೇರಣೆಯಿಂದ, ಅವರು "ಓಹ್, ಇದು ಭಗವಂತ, ಇದು ಭಗವಂತನಲ್ಲ" ಎಂದು ಹೇಳುತ್ತಾರೆ. ಅವರಿಗೆ ಅದರ ಬಗ್ಗೆ ಏನು ತಿಳಿದಿರುತ್ತದೆ? ಆಧ್ಯಾತ್ಮಿಕ ಮಾರ್ಗದ ಮೇಲೆ ಇನ್ನೂ ಕಾಲಿರಿಸಿರದ ಜನರಿರುತ್ತಾರೆ, ಅವರು ಇಲ್ಲಿಗೆ ಬರುತ್ತಾರೆ ಮತ್ತು ಇಲ್ಲಿರುವ ಸಂಗತಿಗಳನ್ನು, ಜನರನ್ನು ನೋಡುತ್ತಾರೆ ಮತ್ತು ನಿಮಗೆ: "ಭಗವಂತನೊಂದಿಗೆ ಈ ಆಶ್ರಮ ಏನನ್ನೂ ಕೈಕೊಳ್ಳುವುದಿಲ್ಲ, ಅದು ದೈವಿಕವಾದದ್ದಲ್ಲವೇ ಅಲ್ಲ" ಎಂದು ಹೇಳುತ್ತಾರೆ. ಆದರೆ ನೀವು ಅವರಿಗೆ "ಭಗವಂತ ಎಂದರೇನು?" ಎಂದು ಕೇಳಿದರೆ ಅದಕ್ಕೆ ಅವರು ಉತ್ತರ ನೀಡುವುದರಲ್ಲಿ ತೊಂದರೆ ಕಂಡುಕೊಳ್ಳುತ್ತಾರೆ; ಅದರ ಬಗ್ಗೆ ಅವರಿಗೆ ಏನೂ ತಿಳಿದಿರುವುದಿಲ್ಲ. ಮನುಷ್ಯ ಅತಿ ಕಡಿಮೆ ತಿಳಿದುಕೊಂಡ ವಿಷಯ ಕುರಿತು ಹೆಚ್ಚಿನ ತೀರ್ಮಾನ ನೀಡುತ್ತಾನೆ, ಅದು ಪರಿಪೂರ್ಣವಾಗಿ ವಾಸ್ತವವಾಗಿರುವ ಸಂಗತಿ. ಮನುಷ್ಯ ತಿಳಿದುಕೊಂಡಿದ್ದು ಹೆಚ್ಚಿನ ಮಟ್ಟದ್ದಾದಾಗ ವಿಷಯಗಳನ್ನು ಕುರಿತು ಅವನು ತೀರ್ಮಾನಗಳನ್ನು ಅತಿ ಕಡಿಮೆ ರೀತಿಯಲ್ಲಿ ಉಚ್ಚರಿಸಬಲ್ಲನು.

ಒಂದು ಸಮಯ ಬರುತ್ತದೆ, ಆಗ ಮನುಷ್ಯ ಕೈಕೊಳ್ಳಬಲ್ಲದಾದುದೆಲ್ಲ ಅವಲೋಕನ ಮಾಡುವುದಾಗಿರುತ್ತದೆ, ಆದರೆ ತೀರ್ಮಾನ ನೀಡುವುದು ಅಸಾಧ್ಯವಾಗುತ್ತದೆ. ಮನುಷ್ಯ ವಸ್ತು–ವಿಷಯಗಳನ್ನು ನೋಡಬಲ್ಲನು, ಅವುಗಳ ಸಂಬಂಧಗಳಲ್ಲಿ ಹಾಗೂ ಅವಿರುವ ಸ್ಥಾನಗಳಲ್ಲಿ ಅವಿರುವ ಹಾಗೆ ನೋಡಬಲ್ಲನು. ಹಾಗೆ ನೋಡುವಾಗ ಸದ್ಯ ಅವಿರುವ ಸ್ಥಿತಿ ಹಾಗೂ ಅವು ವ್ಯಾಪಿಸಬೇಕಾದ ಸ್ಥಾನ ಇವುಗಳ ನಡುವಿರುವ ವ್ಯತ್ಯಾಸದ ಅರಿವು ಹೊಂದಿರಬೇಕು– ಏಕೆಂದರೆ ಇದು ಜಗತ್ತಿನಲ್ಲಿ ಕ್ರಮಬದ್ಧವಲ್ಲದ ಭವ್ಯ ವಿಷಯವಾಗಿದೆ.– ಆದರೆ ಮನುಷ್ಯ ಅದನ್ನೂ ಕುರಿತು ತೀರ್ಮಾನ ನೀಡುವುದಿಲ್ಲ. ಅವನು ಸರಳವಾಗಿ ಅವಲೋಕನ ಮಾಡುತ್ತಾನೆ.

ಮತ್ತು ಒಂದು ಕ್ಷಣ ಇದೆ, ಆಗ ಮನುಷ್ಯ "ಇದು ಭಗವಂತ ಮತ್ತು ಅದು ಭಗವಂತನಲ್ಲ" ಎಂದು ಹೇಳಲು ಶಕ್ತನಾಗದೆ ಹೋಗುತ್ತಾನೆ, ಏಕೆಂದರೆ ಒಂದು

ಸಮಯ ಬರುತ್ತದೆ, ಆಗ ಮನುಷ್ಯ ಇಡೀ ವಿಶ್ವವನ್ನು ಎಷ್ಟೊಂದು ಇಡಿಯಾಗಿ ಹಾಗೂ ಅರಿತುಕೊಳ್ಳಬಲ್ಲ ರೀತಿಯಲ್ಲಿ ನೋಡುತ್ತಾನೆ ಎಂದರೆ, ಸತ್ಯ ನುಡಿಯುವುದಾದರೆ, ಪ್ರತಿಯೊಂದನ್ನು ಕ್ಷೋಭೆಗೊಳಿಸದೆ ಅದರಿಂದ ಏನನ್ನಾದರೂ ತೆಗೆದು ಹಾಕುವುದು ಅಸಾಧ್ಯವಾಗುತ್ತದೆ.

ಮತ್ತು ಒಂದೆರಡು ಹೆಜ್ಜೆ ಇನ್ನೂ ಮುಂದೆ ಹೋದಾಗ ಮನುಷ್ಯ ನಮಗೆ ಯಾವುದು ಭಗವಂತನಿಗೆ ವಿರುದ್ಧವಾಗಿದೆ ಎಂದು ಆಘಾತ ನೀಡುವುದೋ ಅದು ಸರಳವಾಗಿ ತಾನಿರಬೇಕಾದ ಸ್ಥಾನದಲ್ಲಿ ಇರದೇ ಇರುವುದಾಗಿರುತ್ತದೆ ಎಂದು ನಿಶ್ಚಿತತೆಯಿಂದ ನೋಡುತ್ತಾನೆ. ಪ್ರತಿಯೊಂದು ವಸ್ತು ನಿಖರವಾಗಿ ಅದರ ಸ್ಥಾನದಲ್ಲಿರಬೇಕು, ಅಲ್ಲದೆ ಅದು ಸಾಕಷ್ಟು ಸೇವಾ ಪ್ರವೃತ್ತಿಯದು, ಸಾಕಷ್ಟು ನಮ್ಯವಾದದ್ದು ಆಗಿರಬೇಕು, ಅಲ್ಲದೆ ಸಾಮರಸ್ಯವಿರುವ, ಪ್ರಗತಿಪರವಾಗಿರುವ ಸಂಘಟನೆಯಲ್ಲಿ, ಪ್ರಕಟವಾದ ವಿಶ್ವದಲ್ಲಿ ಸತತ ಅಧಿಕವಾಗಿ ಸೇರಿಕೊಳ್ಳುತ್ತಿರುವ ಅಂಶಗಳನ್ನು ಒಳಸೇರಿಸಿಕೊಳ್ಳುವಂತಾಗಬೇಕು.

**CWM, 8/1-2** **- ಶ್ರೀಮಾತೆ**

*

**ಧರ್ಮಿಷ್ಠಮನ್ಯತೆ ಹಾಗೂ ಸಂಕುಚಿತ ಮನಸ್ಸಿರುವಿಕೆ**

ಒಂದು ಉದಾಹರಣೆ ತೆಗೆದುಕೊಳ್ಳೋಣ. ಒಬ್ಬ ವ್ಯಕ್ತಿಗೆ ಸ್ನೇಹಿತರಿದ್ದಾರೆ. ಅವಳ ಸ್ನೇಹಿತರಿಗೆ ಅವಳು ಬಹಳ ಪ್ರಿಯಳಾದವಳು, ಏಕೆಂದರೆ ಅವರು ಅವಳಲ್ಲಿ ವಿಶೇಷ ಕ್ಷಮತೆಗಳಿರುವುದನ್ನು ನೋಡುತ್ತಾರೆ, ಏಕೆಂದರೆ ಅವಳ ಸಹವಾಸದಲ್ಲಿರುವುದು ಬಹಳ ಹರ್ಷದಾಯಕವಾಗಿರುತ್ತದೆ, ಮನುಷ್ಯ ಯಾವಾಗಲೂ ಅವಳಿಂದ ಕಲಿತುಕೊಳ್ಳಬಹುದು. ನಂತರ ಹಠಾತ್ತನೆ ಪರಿಸ್ಥಿತಿಗಳ ಜತೆಗೂಡುವಿಕೆಯಿಂದ ಈ ವ್ಯಕ್ತಿ ಸಮಾಜದಿಂದ ದೂರವಿಡುವಿಕೆಗೆ ಒಳಗಾಗುತ್ತಾಳೆ. ಏಕೆಂದರೆ ಅಧಿಕೃತವಾಗಿ ಲಗ್ನ ಮಾಡಿಕೊಂಡಿರದೇ ಇರುವನೊಬ್ಬನೊಂದಿಗೆ ಜೀವಿಸುತ್ತಿದ್ದಾಳೆ. ಸ್ವಲ್ಪದರಲ್ಲಿ ಹೇಳುವುದಾದರೆ, ತಮ್ಮಲ್ಲೇ ಯಾವ ಮೌಲ್ಯವೂ ಇರದ ಈ ಎಲ್ಲ ಸಾಮಾಜಿಕ ವಿಷಯಗಳಿಂದ ಹೀಗಾಗಿದೆ. ಅವಳ ಎಲ್ಲ ಸ್ನೇಹಿತರು– ಅವಳನ್ನು ನಿಜವಾಗಿ ಪ್ರೀತಿಸಿದವರನ್ನು ಕುರಿತು ಹೇಳುತ್ತಿದ್ದೇನೆ.– ಅವಳಿಗೆ ಪರಿಚಿತವಿದ್ದ ಎಲ್ಲರೂ, ಅವಳನ್ನು ಕರುಣೆಯಿಂದ ಎದುರು

ನೋಡುತ್ತಿದ್ದ ಎಲ್ಲರೂ, ಅವಳನ್ನು ರಸ್ತೆಯ ಮೇಲೆ ಭೇಟಿ ಮಾಡಿದಾಗ ಸ್ವಾಗತಿಸಿ ಮುಗುಳ್ನಗೆಯೊಂದಿಗೆ ಕುಶಲ ಸಂಭಾಷಣೆ ನಡೆಸುತ್ತಿದ್ದವರು ತಮ್ಮ ಶಿರಗಳನ್ನು ಬೇರೆಡೆ ಹೊರಳಿಸುತ್ತಾರೆ, ರಸ್ತೆಯ ಮೇಲೆ ಅವಳತ್ತ ದೃಷ್ಟಿಬೀರದೆ ಅವಳ ಹತ್ತಿರದಿಂದ ಸಾಗಿ ಹೋಗುತ್ತಾರೆ. ಇಂತಹದು ಆಶ್ರಮದಲ್ಲಿ ಕೂಡ ಆಗಿದೆ! ನಾನು ಯಾವ ವಿವರವನ್ನೂ ಕೊಡಲು ಬಯಸುವುದಿಲ್ಲ. ಆದರೆ ಅದೇನೇ ಇರಲಿ ಹಲವಾರು ಸಲ ಏನೋ ಒಂದು ಸಂಭವಿಸಿದೆ, ಅದು ಒಪ್ಪಿಕೊಳ್ಳಲಾದ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿದೆ ಮತ್ತು ಎಷ್ಟೊಂದು ಸೌಹಾರ್ದ ಹಾಗೂ ಸಹಾನುಭೂತಿಯನ್ನು ತೋರಿಸುತ್ತಿದ್ದ ಜನರು– ಓಹ್, ಕೆಲವೊಮ್ಮೆ "ಈ ವ್ಯಕ್ತಿ ಕಳೆದು ಹೋಗಿದ್ದಾನೆ" ಎಂದು ಹೇಳುತ್ತಾರೆ.

ವಿಸ್ತಾರವಾದ ಜಗತ್ತಿನಲ್ಲಿ ಇಂತಹ ಸಂಗತಿಗಳು ಸಂಭವಿಸಿದಾಗ ಅದು ಬಹಳ ಸ್ವಾಭಾವಿಕ ಎಂದು ನಾನು ಕಂಡುಕೊಳ್ಳುತ್ತೇನೆ, ಆದರೆ ಅದು ಇಲ್ಲಿ ಸಂಭವಿಸಿದಾಗ ನನಗೆ ಯಾವಾಗಲೂ ಚಿಕ್ಕ ಆಘಾತವಾಗುತ್ತದೆ. "ಸರಿ, ಅವರು ಅದನ್ನಿನ್ನೂ ದಾಟಿ ಹೋಗಿಲ್ಲ" ಎಂದು ನನಗೇ ನಾನು ಹೇಳುತ್ತೇನೆ.

ವಿಶಾಲ ಮನಸ್ಸಿನವರು, ಎಲ್ಲ ಸಂಪ್ರದಾಯಗಳನ್ನು ಮೀರಿ ಹೋದವರು ಎಂದು ಪ್ರತಿಪಾದಿಸುವ ಜನರೂ ಕೂಡ ಅದೇ ಬಲೆಯಲ್ಲಿ ಬಿದ್ದು ಬಿಡುತ್ತಾರೆ. ತಮ್ಮ ಪ್ರಜ್ಞೆಯನ್ನು ರಕ್ಷಿಸಲು ಅವರು: "ಶ್ರೀಮಾತೆಯವರು ಅದಕ್ಕೆ ಅನುವು ಮಾಡಿಕೊಡುವುದಿಲ್ಲ, ಅವರು ಅದನ್ನು ಸಹಿಸಿಕೊಳ್ಳುವುದಿಲ್ಲ" ಎಂದು ಹೇಳುತ್ತಾರೆ– ಹೀಗೆ ಎಲ್ಲ ಹೆಡ್ಡತನಗಳಿಗೆ ಇನ್ನೊಂದನ್ನು ಅಧಿಕವಾಗಿ ಸೇರಿಸುತ್ತಾರೆ.

ಈ ಸ್ಥಿತಿಯಿಂದ ಹೊರಬರುವುದು ಕಠಿಣವಾದದ್ದು. ಇದು ನಿಜವಾಗಿ ಧರ್ಮಿಷ್ಠಮನ್ಯತೆ, ಇದು ಸಾಮಾಜಿಕ ಪ್ರತಿಷ್ಠೆ, ಆದರೆ ಅದು ಸಂಕುಚಿತ ಮನಸ್ಸಿನದು, ಏಕೆಂದರೆ ಅಲ್ಪ ಬುದ್ಧಿಮತ್ತೆಯಿರುವ ವ್ಯಕ್ತಿಯೂ ಕೂಡ ಅಂತಹದೇನೋ ಒಂದರಿಂದ ಹಿಡಿತಕ್ಕೊಳಗಾಗದೆ ಉಳಿದುಕೊಳ್ಳಲಾರನು. ಉದಾಹರಣೆಗೆ ಜಗತ್ತಿನಾದ್ಯಂತ ಪ್ರವಾಸ ಮಾಡಿ ಬಂದ ಜನರು, ಈ ಎಲ್ಲ ಸಾಮಾಜಿಕ ನಿಯಮಗಳು ಕೇವಲ ಇಡಿಯಾಗಿ ಹವಾಮಾನ, ಕುಲ, ರೂಢಿ ಇವುಗಳ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುತ್ತವೆ ಎಂಬುದನ್ನು ನೋಡಿದವರು ಅದೆಲ್ಲದರ ಮೇಲೆ ಮುಗುಳ್ನಗೆ ಬೀರಬಲ್ಲರು. ಆದರೆ ಸರಿಯಾದ ಮನಸ್ಸಿದ್ದ ಜನರಿಗೆ– ಅದು ಸಾಧ್ಯವಾಗುವುದಿಲ್ಲ.

ಅದು ಪ್ರಾಥಮಿಕ ಸ್ಥಿತಿ. ನೀವು ಈ ಹಂತದಿಂದ ಹೊರಬರುವವರೆಗೆ ಯೋಗಾಚರಣೆಗೆ ಯೋಗ್ಯರಾಗಿರುವುದಿಲ್ಲ. ಏಕೆಂದರೆ ನೀವು ಆ ಸ್ಥಿತಿಯಲ್ಲಿದ್ದಾಗ ನಿಮ್ಮನ್ನು ಯೋಗಾಚರಣೆಗೆ ತಯಾರು ಮಾಡಿಕೊಂಡಿರುವುದಿಲ್ಲ. ಅದು ಬೀಜರೂಪದ ಸ್ಥಿತಿ.

**CWM, 10/78-79** **- ಶ್ರೀಮಾತೆ**

*

**ಸಾಮಾನ್ಯ ರೀತಿಯಲ್ಲಿ ಜೀವಿಸುವುದು ಹಾಗೂ ಮುಕ್ತರಾಗಿರುವುದು**

**ಪ್ರಶ್ನೆ:** *ಸಾಮಾನ್ಯ ಪರಿಸ್ಥಿತಿಗಳಲ್ಲಿ ಮನುಷ್ಯ ತಾನೇನಾಗಬೇಕು ಎಂಬ ರೀತಿಯನ್ನು ಕಂಡುಕೊಳ್ಳುವುದು ಹೇಗೆ?*

**ಶ್ರೀಮಾತೆ:** ನನ್ನ ಮಗು, ಆ ಕಾರಣದಿಂದಾಗಿಯೇ ಆಶ್ರಮವನ್ನು ಸೃಷ್ಟಿಸಲಾಗಿದೆ. ವಿಚಾರ ಅದೇ ಆಗಿತ್ತು. ಏಕೆಂದರೆ ಫ್ರಾನ್ಸಿನಲ್ಲಿ ನಾನು ಯಾವಾಗಲೂ ನನಗೆ ಕೇಳುತ್ತಿದ್ದ ಪ್ರಶ್ನೆ ಮನುಷ್ಯ ತನ್ನನ್ನು ಕಂಡುಕೊಳ್ಳಲು ಸಮಯವನ್ನು ಕಂಡುಕೊಳ್ಳುವುದು ಹೇಗೆ? ಹಾಗೆಯೇ ಮನುಷ್ಯ ಮುಕ್ತನಾಗಿರುವುದನ್ನು ತಿಳಿದುಕೊಳ್ಳಲು ಸಮಯ ಕಂಡುಕೊಳ್ಳುವುದು ಹೇಗೆ? ಹಾಗಾಗಿ ನಾನು ಯೋಚಿಸಿದೆ: ಎಲ್ಲ ಭೌತಿಕ ಆವಶ್ಯಕತೆಗಳನ್ನು ಸಾಕಷ್ಟು ಸಮೃದ್ಧ ರೀತಿಯಲ್ಲಿ ಒದಗಿಸುವ ಸ್ಥಳವೊಂದಿದ್ದರೆ, ಅಲ್ಲಿ ಮನುಷ್ಯ, ನಿಜವಾಗಿ ಮುಕ್ತನಾಗಿರಬೇಕೆಂದು ಬಯಸಿದರೆ ಹಾಗೆ ಮಾಡಬಲ್ಲ. ಆಶ್ರಮವನ್ನು ಇದೇ ವಿಚಾರದಿಂದ ಸ್ಥಾಪಿಸಲಾಗಿದೆ, ಬೇರಾವ ವಿಚಾರದಿಂದಲ್ಲ– ಇದೊಂದು ಸ್ಥಳದಲ್ಲಿ ಜನರಿಗೆ ಜೀವಿಸುತ್ತ ಹೋಗಲು ಸಾಕಷ್ಟು ಅನುಕೂಲವಿರುವುದರಿಂದ ದೈವೀ ನಿಜವಾದ ವಿಷಯ ಕುರಿತು ಯೋಚಿಸಲು ಸಮಯವಿರುತ್ತದೆ.

(ಶ್ರೀಮಾತೆಯವರು ನಗುತ್ತಾರೆ). ಮಾನವ ಸ್ವಭಾವ ಹೇಗಿದೆಯೆಂದರೆ ಅಭೀಪ್ಸೆಯ ಸ್ಥಾನದಲ್ಲಿ ಆಲಸ್ಯವನ್ನಿರಿಸಿದೆ– ಅದು ಎಲ್ಲರಿಗೂ ಅಲ್ಲ, ಆದರೆ, ಏನೇ ಹೇಳಲಿ, ಬಹಳಷ್ಟು ಸಾರ್ವತ್ರಿಕ ರೀತಿಯಲ್ಲಿದೆ– ಮತ್ತು ಸ್ವಾತಂತ್ರ್ಯದ ಸ್ಥಾನದಲ್ಲಿ ಅನುಮತಿ ಹಾಗೂ ಇಚ್ಛಾ ಸ್ವಾತಂತ್ರ್ಯ ಬಂದಿವೆ, ಅವು ಸಿದ್ಧಪಡಿಸಿ ತೋರಿಸುವ ಪ್ರವೃತ್ತಿ ಏನೆಂದರೆ ಅದು ಚಟುವಟಿಕೆಗಾಗಿರುವ ಗುಲಾಮಗಿರಿಯಿಂದ ನಿಷ್ಕಪಟವಾಗಿ

ತನ್ನನ್ನು ದೂರ ಎಳೆದುಕೊಳ್ಳಲು ತಯಾರಾಗುವವರೆಗೆ ಒರಟಾಗಿ ಹಿಡಿದುಕೊಳ್ಳುವ ವರ್ತನೆಯಿರುವ ಅವಧಿಯಾದ್ಯಂತ ಸಾಗಿ ಹೋಗಬೇಕಾಗುತ್ತದೆ.

ನಿಜವಾಗಿ ಮೊದಲ ಚಲನೆ ಹೀಗಿದೆ: "ಓಹ್, ಏಕಾಗ್ರತೆ ಕೈಕೊಳ್ಳಲು, ತನ್ನನ್ನು ಕಂಡುಕೊಳ್ಳಲು, ಭೌತಿಕ ವಸ್ತು–ವಿಷಯಗಳೊಂದಿಗೆ, ನಿಜವಾಗಿ, ಪೂರ್ವಮಗ್ನನಾಗದೆ ಇರಲು ಸಾಧ್ಯವಾಗಬಹುದಾದ ಸ್ಥಾನವನ್ನು ಕಂಡುಕೊಳ್ಳ–ಬೇಕಾಗಿದೆ." ಪ್ರಾರಂಭದಲ್ಲಿ ಈ ಆಧಾರದ ಮೇಲೆಯೇ, ಹೇಗೆಯೇ ಆಗಿರಲಿ, ಅನುಯಾಯಿಗಳನ್ನು ಆಯ್ದುಕೊಳ್ಳಲಾಗುತ್ತಿತ್ತು– ಆದರೆ ಅದು ಉಳಿದುಕೊಳ್ಳಲಿಲ್ಲ! ವಿಷಯಗಳು ಸರಳವಾಗುತ್ತವೆ, ಹಾಗಾಗಿ ಮನುಷ್ಯ ತನ್ನನ್ನು ಸಾಗಿ ಹೋಗಲು ಬಿಟ್ಟುಕೊಡುತ್ತಾನೆ. ಅಲ್ಲಿ ನೈತಿಕ ಕಟ್ಟುನಿಟ್ಟುಗಳಿರುವುದಿಲ್ಲ, ಹಾಗಾಗಿ ಅವನು ಮೂರ್ಖತನದ ಕಾರ್ಯಗಳನ್ನು ಕೈಕೊಳ್ಳುತ್ತಾನೆ.

**CWM, 10/197-98** **- ಶ್ರೀಮಾತೆ**

*

**ಹೊಸದಾಗಿ ಆಶ್ರಮಕ್ಕೆ ಬರುವವರಿಗೆ ಉಪದೇಶ**

ಈಗಾಗಲೆ ಭವಿಷ್ಯತ್ತಿನ ಶಿಕ್ಷಕರು ಹಾಗೂ ಭವಿಷ್ಯತ್ತಿನ ವಿದ್ಯಾರ್ಥಿಗಳು ಇಲ್ಲಿಗೆ ಬರಲು ಪ್ರಾರಂಭಿಸಿದ್ದಾರೆ, ಕೆಲವರು ಹೊರದೇಶಗಳಿಂದ ಬರುತ್ತಿದ್ದಾರೆ, ಇಲ್ಲಿಯ ಹವಾಮಾನಕ್ಕೆ ಹಾಗೂ ಈ ದೇಶದ ರೂಢಿಗಳಿಗೆ ಹೊಸಬರಾಗಿದ್ದಾರೆ, ಅವರು ಆಶ್ರಮಕ್ಕೆ ಮೊಟ್ಟಮೊದಲ ಸಲ ಬರುತ್ತಿದ್ದಾರೆ, ಮೊಟ್ಟಮೊದಲ ಬಾರಿಗೆ ಬರುತ್ತಿದ್ದ ಅವರಿಗೆ ಆಶ್ರಮದ ಜೀವನದ ಬಗ್ಗೆ ಇಲ್ಲವೆ ರೂಢಿಗಳ ಬಗ್ಗೆ ಏನೂ ತಿಳಿದಿರುವುದಿಲ್ಲ. ಕೆಲವರು ಮಾನಸಿಕ ಅಭೀಪ್ಸೆಯಿಂದ ಸೇವೆ ಮಾಡಲು ಇಲ್ಲವೆ ಕಲಿತುಕೊಳ್ಳಲು ಬರುತ್ತಾರೆ, ಇತರರು ಯೋಗಾಚರಣೆ ಕೈಕೊಂಡು ಭಗವಂತನ ದರ್ಶನ ಪಡೆದು ಅವನೊಡನೆ ಏಕವಾಗಲು ಬರುತ್ತಾರೆ. ಕೊನೆಗೆ ಕೆಲವರಿದ್ದಾರೆ, ಅವರು ತಮ್ಮನ್ನು ಪೃಥ್ವಿಯ ಮೇಲಿನ ದೈವೀ ಕಾರ್ಯಕ್ಕಾಗಿ ತಮ್ಮನ್ನು ಇಡಿಯಾಗಿ ಅರ್ಪಿಸಿಕೊಳ್ಳಲು ಬಯಸುತ್ತಾರೆ. ಎಲ್ಲರೂ ಚೈತ್ಯ ಸತ್ತೆಯ ಪ್ರಚೋದನೆಗೊಳಗಾಗಿ ಬರುತ್ತಾರೆ, ಆ ಸತ್ತೆ ಅವರನ್ನು ಆತ್ಮಸಿದ್ಧಿಯತ್ತ ಕರೆದೊಯ್ಯಲು ಬಯಸುತ್ತದೆ. ಅವರು ತಮ್ಮ ಚೈತ್ಯಸತ್ತೆಯನ್ನು ಮುಂಭಾಗದಲ್ಲಿರಿಸಿಕೊಂಡು ಬರುತ್ತಾರೆ, ಅದು ಅವರ ಪ್ರಜ್ಞೆಯ ಮೇಲೆ ಆಳಿಕೆ ನಡೆಸಿರುತ್ತದೆ, ಜನರೊಂದಿಗೆ ಹಾಗೂ ವಸ್ತು–

ವಿಷಯಗಳೊಂದಿಗೆ ಅವರು ಚೈತ್ಯಾತ್ಮಿಕ ಸಂಪರ್ಕ ಹೊಂದಿರುತ್ತಾರೆ. ಅವರಿಗೆ ಪ್ರತಿಯೊಂದು ಸುಂದರವಾಗಿರುವಂತೆ, ಒಳ್ಳೆಯದಾಗಿರುವಂತೆ ತೋರಿಬರುತ್ತದೆ, ಅವರ ಆರೋಗ್ಯ ಸುಧಾರಿಸುತ್ತದೆ, ಅವರ ಪ್ರಜ್ಞೆ ಹೆಚ್ಚು ಪ್ರಕಾಶಮಾನವಾಗಿ ಬೆಳೆಯುತ್ತದೆ. ಅವರು ಸಂತೋಷದಿಂದಿರುವ, ಶಾಂತಿಯಿಂದಿರುವ ಹಾಗೂ ಸುರಕ್ಷಿತತೆಯಿಂದಿರುವ ಭಾವನೆ ತಂದುಕೊಳ್ಳುತ್ತಾರೆ. ಪ್ರಜ್ಞೆಯ ಕಟ್ಟಕಡೆಯ ಬೆಳವಣಿಗೆಯನ್ನು ತಲುಪಿದ್ದೇವೆ ಎಂದು ಯೋಚಿಸುತ್ತಾರೆ. ಚೈತ್ಯಸತ್ತೆಯ ಸಂಪರ್ಕದಿಂದ ಕೊಡಲಾದ ಈ ಶಾಂತಿ, ಪೂರ್ಣತೆ ಹಾಗೂ ಸಂತೋಷ ಇವುಗಳನ್ನು ಅವರು ಎಲ್ಲೆಡೆಯಲ್ಲಿ, ಪ್ರತಿಯೊಂದು ವಸ್ತು–ವಿಷಯದಲ್ಲಿ ಮತ್ತು ಪ್ರತಿಯೊಬ್ಬರಲ್ಲಿ, ಸ್ವಾಭಾವಿಕವಾಗಿ ಕಂಡುಕೊಳ್ಳುತ್ತಾರೆ. ಇಲ್ಲಿ ವ್ಯಾಪಿಸಿಕೊಂಡಿರುವ, ಹಾಗೂ ಪ್ರತಿಯೊಂದನ್ನು ಕಾರ್ಯಗತಗೊಳಿಸುವ ನಿಜವಾದ ಪ್ರಜ್ಞೆಯತ್ತ ಅದರ ತೆರೆದಿರಿಸಿಕೊಳ್ಳುವಿಕೆಯನ್ನು ಕೊಡುತ್ತದೆ. ಆ ತೆರೆದಿರಿಸಿಕೊಳ್ಳುವಿಕೆ ಇರುವವರೆಗೆ ಆ ಶಾಂತಿ, ಪೂರ್ಣತೆ ಹಾಗೂ ಸಂತೋಷ ಉಳಿದುಕೊಳ್ಳುತ್ತವೆ, ಅವುಗಳೊಂದಿಗೆ ಕೂಡಲೆ ಉಂಟಾಗುವ ಪರಿಣಾಮಗಳಿರುತ್ತವೆ: ಪ್ರಗತಿ, ಭೌತಿಕದಲ್ಲಿ ಆರೋಗ್ಯ ಹಾಗೂ ಯುಕ್ತತೆ, ಪ್ರಾಣಿಕದಲ್ಲಿ ಅಚಂಚಲತೆ ಹಾಗೂ ಸದ್ಭಾವನೆ, ಮಾನಸಿಕತೆ–ಯಲ್ಲಿ ಸ್ಪಷ್ಟ ತಿಳಿವಳಿಕೆ ಹಾಗೂ ವೈಶಾಲ್ಯ ಮತ್ತು ಸುರಕ್ಷಿತತೆ ಹಾಗೂ ತೃಪ್ತಿ ಇವುಗಳ ಸರ್ವಸಾಮಾನ್ಯ ಭಾವನೆ ಇವೆಲ್ಲ ಇರುತ್ತವೆ. ಆದರೆ ಚೈತ್ಯ ಸತ್ತೆಯೊಂದಿಗೆ ಸತತ ಸಂಪರ್ಕ ಹೊಂದಿರುವುದು ಮಾನವ ಸತ್ತೆಗೆ ಕಠಿಣವಾದದ್ದು. ಅವನು ನೆಲೆಸಿ ನಿಂತುಕೊಂಡಾಗ ಹಾಗೂ ಹೊಸ ಅನುಭಾವ ಮಸುಕಾಗತೊಡಗಿದಾಗ ಕೂಡಲೆ ಹಳೆಯ ವ್ಯಕ್ತಿ ಮೇಲ್ಮೈಗೆ ಹಿಂತಿರುಗಿ ಬರುತ್ತಾನೆ, ಅವನೊಂದಿಗೆ ಹಳೆಯದರ ಎಲ್ಲ ರೂಢಿಗಳು, ಆದ್ಯತೆಗಳು, ಚಿಕ್ಕ ಚಿತ್ತ ವಿಕಾರಗಳು, ಕುಂದು–ಕೊರತೆಗಳು, ತಪ್ಪು–ತಿಳಿವಳಿಕೆಗಳು ಬರುತ್ತವೆ; ಶಾಂತಿಯ ಸ್ಥಾನದಲ್ಲಿ ತಳಮಳವಿರುತ್ತದೆ, ಸಂತೋಷ ಮಾಯವಾಗುತ್ತದೆ, ತಿಳಿವಳಿಕೆ ಕುರುಡಾಗುತ್ತದೆ ಮತ್ತು ಆ ಸ್ಥಳ ಎಲ್ಲೆಡೆಯಲ್ಲಿರುವ ಹಾಗಿದೆ ಎಂಬ ಭಾವನೆ ಒಳಗೆ ನುಸುಳಿ ಬರುತ್ತದೆ, ಏಕೆಂದರೆ ಅವನು ಬೇರೆಡೆಯಲ್ಲಿರುವಂತೆ ಆಗಿಬಿಟ್ಟಿರುತ್ತಾನೆ. ಕೇವಲ ಏನನ್ನು ಸಿದ್ಧಿಸಿಕೊಳ್ಳಲಾಗಿದೆ ಎಂಬುದರತ್ತ ನೋಡುವುದರ ಬದಲಾಗಿ ಅವನು ಹೆಚ್ಚು ಹೆಚ್ಚಾಗಿ, ಬಹುಮಟ್ಟಿಗೆ ಪ್ರತ್ಯೇಕವಾಗಿ ಇನ್ನೂ ಏನನ್ನು ಕೈಕೊಳ್ಳುವುದಿದೆ ಎಂಬುದರ ಬಗ್ಗೆ ಹೆಚ್ಚು ಅರಿವು

ತಂದುಕೊಳ್ಳುತ್ತಾನೆ, ಅವನು ಸಪ್ಪೆ ಮುಖದವನು, ಅತೃಪ್ತನೂ ಆಗುತ್ತಾನೆ, ತನ್ನನ್ನೇ ದೂಷಿಸಿಕೊಳ್ಳುವುದರ ಬದಲಾಗಿ ಜನರನ್ನು ಹಾಗೂ ವಸ್ತು–ವಿಷಯಗಳನ್ನು ದೂಷಿಸುತ್ತಾನೆ. ಸುಖ–ಸೌಲಭ್ಯದ ಕೊರತೆ, ಸಹಿಸಲು ಕಷ್ಟಕರವಾದ ಹವಾಮಾನ, ಜೀರ್ಣಿಸುವಿಕೆಗೆ ನೋವನ್ನುಂಟು ಮಾಡುವ, ಹೊಂದಿಕೆ ಮಾಡಿಕೊಳ್ಳಲಾಗದ ಆಹಾರ ಇವೆಲ್ಲವನ್ನು ಕುರಿತು ದೂರುತ್ತಾನೆ. ಯೋಗಕ್ಕಾಗಿ ದೇಹ ಅತ್ಯಗತ್ಯದ್ದಾದ ಆಧಾರ, ಅದನ್ನು ಅಲಕ್ಷಿಸಬಾರದು, ತದ್ವಿರುದ್ಧವಾಗಿ ಅದನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳಬೇಕು ಎಂಬ ಶ್ರೀ ಅರವಿಂದರ ಬೋಧನೆಯ ಆಧಾರ ಪಡೆದು ಭೌತಿಕ ಪ್ರಜ್ಞೆ ದೇಹದ ಮೇಲೆ, ಬಹುಮಟ್ಟಿಗೆ ಪ್ರತ್ಯೇಕವಾಗಿ, ಏಕಾಗ್ರತೆ ವಹಿಸುತ್ತದೆ ಮತ್ತು ಅದಕ್ಕೆ ತೃಪ್ತಿ ನೀಡುವ ರೀತಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಇದು ವ್ಯಾವಹಾರಿಕವಾಗಿ ಅಸಾಧ್ಯವಾಗಿರುತ್ತದೆ, ಏಕೆಂದರೆ ದೇಹಕ್ಕೆ ಹೆಚ್ಚು ಹೆಚ್ಚಾಗಿ ಆಹಾರ ಕೊಟ್ಟಂತೆ, ಕೆಲವೊಂದು ಅಪವಾದಗಳ ಹೊರತಾಗಿ, ಅದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಹಾರವನ್ನು ಒತ್ತಾಯದಿಂದ ಬೇಡುತ್ತದೆ. ಅಲ್ಲದೆ, ಭೌತಿಕ ಸತ್ತೆ ಅಜ್ಞಾನಿಯಾಗಿ–ರುತ್ತದೆ, ಕುರುಡಾಗಿರುತ್ತದೆ, ಅದು ಮಿಥ್ಯೆಯ ಯೋಚನೆಗಳಿಂದ ಪೂರ್ವಕಲ್ಪಿತ ವಿಚಾರಗಳಿಂದ, ಪೂರ್ವಗ್ರಹ (prejudice)ಗಳಿಂದ, ಆದ್ಯತೆಗಳಿಂದ ತುಂಬಿ–ಕೊಂಡಿರುತ್ತದೆ. ನಿಜವಾಗಿ ಅದು ದೇಹದೊಂದಿಗೆ ಪರಿಣಾಮಕಾರಿ ರೀತಿಯಲ್ಲಿ ವ್ಯವಹರಿಸಲಾರದು. ಕೇವಲ ಚೈತ್ಯಸತ್ತೆಗೆ ಸರಿಯಾದುದನ್ನು ಸರಿಯಾದ ರೀತಿಯಲ್ಲಿ ಕೈಕೊಳ್ಳುವ ಜ್ಞಾನವಿದೆ ಹಾಗೂ ಅಂತರ್ದೃಷ್ಟಿಯಿದೆ.

ಸಂಗತಿಗಳ ಈ ಸ್ಥಿತಿಗೆ ಉಪಾಯವೇನಿದೆ? ಎಂದು ನೀವು ಸರಿಯಾಗಿಯೇ ಪ್ರಶ್ನೆ ಕೇಳಬಹುದು. ಏಕೆಂದರೆ ನಾವು ಇಲ್ಲಿ ದುರಾಚಾರದ ವೃತ್ತದಲ್ಲಿ ಸುತ್ತು ಹೊಡೆಯುತ್ತಿದ್ದೇವೆ, ಏಕೆಂದರೆ ಎಲ್ಲ ತೊಂದರೆ ಚೈತ್ಯಸತ್ತೆಯಿಂದ ದೂರ ಹೋಗುವುದರಿಂದ ಬರುತ್ತದೆ ಮತ್ತು ಕೇವಲ ಚೈತ್ಯಸತ್ತೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಲ್ಲದು. ಪರಿಣಾಮವಾಗಿ ಅಲ್ಲಿ ಒಂದೇ ಒಂದು ಉಪಾಯವಿದೆ: ನಿಮ್ಮ ಮೇಲೆ ಕಾವಲಿರಿಸಿಕೊಳ್ಳಿರಿ, ನಿಮ್ಮ ಚೈತ್ಯಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಿರಿ, ಚೈತ್ಯಸತ್ತೆ ಹಾಗೂ ನಿಮ್ಮ ನಡುವೆ ಪ್ರಜ್ಞೆಯಲ್ಲಿ ಏನೋ ಒಂದು ಜಾರಿಕೊಂಡು ಬರುವುದಕ್ಕೆ ಅನುವು ಮಾಡಿಕೊಡುವುದು ಬೇಡ. ಬೇರೆ ಎಲ್ಲ ಸೂಚನೆಗಳಿಗೆ

ನಿಮ್ಮ ಕಿವಿಗಳನ್ನು ಹಾಗೂ ತಿಳಿವಳಿಕೆಯನ್ನು ಮುಚ್ಚಿಹಾಕಿರಿ, ಕೇವಲ ಚೈತ್ಯಸತ್ತೆಯಲ್ಲಿ ನೆಚ್ಚಿಕೆಯನ್ನಿರಿಸಿರಿ.

**CWM, 12/45-46** **- ಶ್ರೀಮಾತೆ**

*

**ಗತಕಾಲವನ್ನು ಪುನರಾವರ್ತಿಸುವುದು ಇಲ್ಲವೆ ಭವಿಷ್ಯತ್ತಿನ ನಿರ್ಮಾಣ ಮಾಡುವುದು**

ಎಲ್ಲೆಡೆಯಲ್ಲಿ ಅದೇ ಬಗೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದರೆ, ನಾವು ಅವುಗಳನ್ನು ಪುನರಾವರ್ತಿಸುವ ಆವಶ್ಯಕತೆ ಇಲ್ಲ, ನಾವು ಅವುಗಳನ್ನು ಇತರರಿಗಿಂತ ಹೆಚ್ಚು ಒಳ್ಳೆಯ ರೀತಿಯಲ್ಲಿ ಮಾಡುವುದಿಲ್ಲ.

ಮತ್ತು ಈ ವಾದವನ್ನು ಅವರು ನನ್ನ ರೀತಿಯದರ ಮೇಲಿರಿಸಿದಾಗ ಅವರು ನನಗೆ ಅತ್ಯಂತ ಹೆಡ್ಡತನದ್ದೆಂದು ತೋರಿಬರುವ ಏನನ್ನಾದರೂ ಹೇಳಲಾಗಲಿಲ್ಲ. ಅದನ್ನು ಎಲ್ಲೆಡೆಯಲ್ಲೂ ಕೈಕೊಳ್ಳಲಾಗುತ್ತದೆ; ಅದೇ ಅದನ್ನು ಕೈಕೊಳ್ಳದಿರುವುದಕ್ಕೆ ನ್ಯಾಯಯುತ ಕಾರಣ, ಏಕೆಂದರೆ ಇತರರು ಕೈಕೊಳ್ಳುತ್ತಿರುವುದನ್ನು ನಾವು ಕೈಕೊಂಡರೆ ಅದು ಏನನ್ನಾದರೂ ಕೈಕೊಳ್ಳುವ ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿರುವುದಿಲ್ಲ. ನಾವು ನಿಖರವಾಗಿ ಜಗತ್ತಿನಲ್ಲಿ ಇಲ್ಲದೆ ಇರುವುದನ್ನು ಒಳಸೇರಿಸಲು, ಬಯಸುತ್ತೇವೆ, ಅದರೆ ನಾವು ಜಗತ್ತಿನ ಎಲ್ಲ ರೂಢಿಗಳನ್ನು, ಎಲ್ಲ ಆದ್ಯತೆಗಳನ್ನು, ಎಲ್ಲ ರಚನೆಗಳನ್ನು ಕಾಪಾಡಿಕೊಂಡು ಬಂದರೆ ಹೊಸದೇನ–ನ್ನಾದರೂ ಕೈಕೊಳ್ಳುವುದಕ್ಕೆ ಈ ಹಳೆಯ ಪದ್ಧತಿಯಿಂದ ನಾವು ಹೇಗೆ ಹೊರಗೆ ಬರಬಲ್ಲೆವು ಎಂಬುದು ನನಗೆ ಕಂಡುಬರುತ್ತಿಲ್ಲ.

ನನ್ನ ಮಕ್ಕಳೆ, ನಾನು ನಿಮಗೆ ಹೇಳಿದ್ದೇನೆ, ಪ್ರತಿಯೊಂದು ಧ್ವನಿಯಲ್ಲಿ ಪುನರುಚ್ಚರಿಸಿ ಹೇಳಿದ್ದೇನೆ, ಎಲ್ಲ ರೀತಿಗಳಲ್ಲಿ ಹೇಳಿದ್ದೇನೆ, ಇಲ್ಲಿ ನೀವು ವಾಸಮಾಡುತ್ತಿರುವುದರಿಂದ ನಿಜವಾಗಿ ಲಾಭ ಪಡೆಯಬೇಕಾದರೆ, ವಿಷಯಗಳತ್ತ ನೋಡುವುದನ್ನು, ತಿಳಿದುಕೊಳ್ಳುವುದನ್ನು ಹೊಸ ದೃಷ್ಟಿಯಿಂದ ಮಾಡಲು ಪ್ರಯತ್ನಿಸಿರಿ, ನಿಮ್ಮ ತಿಳಿವಳಿಕೆ ಉಚ್ಚತರವಾದ ಏನೋ ಒಂದರ ಆಧಾರ ಹೊಂದಿರಲಿ, ಆಳಾತಿಆಳದ್ದಾಗಿರಲಿ, ವಿಶಾಲವಾಗಿರಲಿ, ಹೆಚ್ಚು ಸತ್ಯವಾದ

ಏನೋ ಒಂದಾಗಿರಲಿ, ಅದಿನ್ನೂ ಇಲ್ಲ, ಆದರೆ ಅದಿರುವ ಒಂದು ದಿನ ಬರುತ್ತದೆ ಮತ್ತು ಅದು ಏಕೆಂದರೆ ನಾವು ಈ ಭವಿಷ್ಯತ್ತನ್ನು ನಿರ್ಮಾಣ ಮಾಡಬೇಕೆಂದು ಬಯಸುತ್ತೇವೆ, ಹಾಗಾಗಿ ನಾವು ಈ ವಿಶಿಷ್ಟ ನಿಲುವನ್ನು ತಾಳಿದ್ದೇವೆ.

**CWM, 8/239-40** **- ಶ್ರೀಮಾತೆ**

*

**ದರ್ಶನ ದಿನಗಳು– ಆಗ ಮತ್ತು ಈಗ**

ಶ್ರೀ ಅರವಿಂದರು ದರ್ಶನ ಕೊಡುತ್ತಿದ್ದ ದಿನಗಳಲ್ಲಿ ಅವರು ಅದನ್ನು ಕೊಡುವ ಮೊದಲು ಅಲ್ಲಿ ಯಾವಾಗಲೂ ಕೆಲವು ಶಕ್ತಿಗಳ ಇಲ್ಲವೆ ವಿಶಿಷ್ಟ ಸಿದ್ಧಿಗಳ ಕೇಂದ್ರೀಕರಣವಿರುತ್ತಿತ್ತು. ಅವುಗಳನ್ನು ಅವರು ಜನರಿಗೆ ಕೊಡಲು ಬಯಸುತ್ತಿದ್ದರು. ಹಾಗಾಗಿ ಪ್ರತಿಯೊಂದು ದರ್ಶನ ಒಂದು ಹಂತದಷ್ಟು ಮುಂದೆ ಹೋಗುವುದನ್ನು ಗುರುತಿಸುತ್ತಿತ್ತು, ಪ್ರತಿಸಲ ಏನನ್ನಾದರೂ ಅಧಿಕವಾಗಿ ಸೇರಿಸಲಾಗುತ್ತಿತ್ತು. ಆದರೆ ಅದು ದರ್ಶನಕ್ಕಾಗಿ ಬರುವವರ ಸಂಖ್ಯೆ ಸೀಮಿತವಾಗಿದ್ದಾಗಿನ ಕಾಲವಾಗಿತ್ತು. ಅದನ್ನು ಇನ್ನೊಂದು ರೀತಿಯಲ್ಲಿ ವ್ಯವಸ್ಥೆಗೊಳಪಡಿಸಲಾಗುತ್ತಿತ್ತು ಮತ್ತು ಅದು ತಯಾರು ಮಾಡಿಕೊಳ್ಳಬೇಕಾ–ದುದರ ಅವಶ್ಯವಾದ ಭಾಗವಾಗಿತ್ತು.

ಆದರೆ ಈ ವಿಶಿಷ್ಟ ಕೇಂದ್ರೀಕರಣ ಈಗ ಬೇರೆ ಸಮಯಗಳಲ್ಲಿ ಸಂಭವಿಸುತ್ತದೆ, ವಿಶೇಷವಾಗಿ ದರ್ಶನ ದಿನಗಳಂದೇ ಅಲ್ಲ. ಅದು ಹೆಚ್ಚಿನ ರೀತಿಯಲ್ಲಿ ಸಂಭವಿಸುತ್ತದೆ, ಸಂದರ್ಭಗಳು ಬೇರೆಯಾಗಿರುತ್ತವೆ, ಪರಿಸ್ಥಿತಿಗಳು ಬೇರೆಯಾಗಿರುತ್ತವೆ. ಆ ಚಲನೆ ಹೆಚ್ಚಿನ ವೇಗೋತ್ಕರ್ಷ ಹೊಂದಿದೆ, ಮುನ್ನಡೆಗೆ ಹೆಜ್ಜೆ ಇರಿಸಲಾಗುತ್ತದೆ, ಹಂತಗಳು ಒಂದರ ನಂತರ ಒಂದರಂತೆ ಬಹಳ ಶೀಘ್ರಗತಿಯಿಂದ ಬರುತ್ತವೆ, ಬಹುಶಃ ಅದನ್ನು ಅನುಸರಿಸುವುದು ಬಹಳ ಕಠಿಣವಾಗುತ್ತದೆ. ಇಲ್ಲವೆ ಸಂದರ್ಭ ಏನೇ ಇರಲಿ, ಸಮನಾಗಿ ಹೆಜ್ಜೆ ಇರಿಸಲು ಮನುಷ್ಯ ಕಾಳಜಿ ವಹಿಸದಿದ್ದರೆ ಅವನನ್ನು ಬಹಳ ತೀವ್ರ ಗತಿಯಿಂದ ಮೊದಲಿನದಕ್ಕಿಂತ ಹೆಚ್ಚು ತೀವ್ರಗತಿಯಲ್ಲಿ ಹಿಂದೆ ಉಳಿಸಲಾಗುತ್ತದೆ; ಮನುಷ್ಯ ತಡಮಾಡಿದುದರ ಇಲ್ಲವೆ ತನ್ನನ್ನು ಬಿಟ್ಟುಕೊಟ್ಟಿರುವ ಭಾವನೆ ತಂದುಕೊಳ್ಳುತ್ತಾನೆ. ವಿಷಯಗಳು ತೀವ್ರಗತಿಯಿಂದ ಬದಲಾಗುತ್ತವೆ.

ಈ ದರ್ಶನ ದಿನಗಳಲ್ಲಿ ಜನರ ಈ ಎಲ್ಲ ನುಗ್ಗಾಟದೊಂದಿಗೆ ಶಕ್ತಿಯ ಹರಡುವಿಕೆ ಬಾಹ್ಯದಲ್ಲಾಗುವಷ್ಟು ಆಶ್ರಮವಾಸಿಗಳ ಆಂತರಿಕ ಪ್ರಗತಿಗೆ ಸಹಾಯಕವಾಗುವುದಿಲ್ಲ ಎಂಬುದನ್ನು ನಾನು ಹೇಳಲೇಬೇಕು. ಈ ದಿನಗಳನ್ನು ನಾವು ಉಪಯೋಗಿಸುವ ರೀತಿ ಭಿನ್ನವಾಗಿದೆ; ಎಲ್ಲಕ್ಕಿಂತಲೂ ಹೆಚ್ಚಾಗಿ ದೂರ ಸಾಗುವುದಾಗಿದೆ, ಹೆಚ್ಚು ವಿಶಾಲವಾದ ಕ್ಷೇತ್ರವನ್ನು ಹೊಂದುವುದಾಗಿದೆ, ಹೆಚ್ಚು ದೂರದಲ್ಲಿರುವ ಬಿಂದುಗಳನ್ನು ತಲುಪಬೇಕಾಗಿದೆ. ಆದರೆ ಕೇಂದ್ರೀಕರಣ ಬಹಳ ಕಡಿಮೆಯಾಗಿದೆ, ಇಲ್ಲಿ ಈ ಭವ್ಯ ಗುಂಪಿನ ಅನಾನುಕೂಲತೆ ಇದೆ, ಅದು ಯಾವಾಗಲೂ ಅಲ್ಲಿರುತ್ತಿತ್ತು, ಆದರೆ ಅದು ಕಳೆದ ಕೆಲವು ವರ್ಷಗಳಿಂದ, ಮೊದಲಿನಕ್ಕಿಂತ ಬಹಳ ಹೆಚ್ಚಾಗಿದೆ. ಪ್ರಾರಂಭದಲ್ಲಿ ಅಲ್ಲಿ ಇಷ್ಟೊಂದು ದೊಡ್ಡ ಗುಂಪಿರಲಿಲ್ಲ. ಬಹುಶಃ ಆ ಗುಂಪಿನ ಗುಣಲಕ್ಷಣ ಕೂಡ ಸ್ವಲ್ಪ ಭಿನ್ನವಾಗಿತ್ತು.

**CWM, 8/262-63** **- ಶ್ರೀಮಾತೆ**

*

**ಆಶ್ರಮದಲ್ಲಿ ಧ್ಯಾನದ ಕಾರ್ಯಕ್ರಮ**

ಮೊದಲಿನ ದಿನಗಳಲ್ಲಿ (ಆಶ್ರಮದಲ್ಲಿ) ನಾವು ನಡೆಸಿಕೊಡುತ್ತಿದ್ದ ಧ್ಯಾನದ ಕಾರ್ಯಕ್ರಮದಲ್ಲಿ ಬೆಳಗಿನ ಕಾಲ ಹಾಗೂ ಸಾಯಂಕಾಲ ಧ್ಯಾನ ಮಾಡುವುದಿತ್ತು. ನನ್ನ ಕಾರ್ಯ ಪ್ರತಿಯೊಬ್ಬರ ಪ್ರಜ್ಞೆಯನ್ನು ಏಕತ್ರಗೊಳಿಸುವುದು ಮತ್ತು ಅದನ್ನು ಭಗವಂತನತ್ತ ಸಾಧ್ಯವಿದ್ದಷ್ಟು ಮೇಲಕ್ಕೆತ್ತುವುದು ಆಗಿತ್ತು. ಆ ಚಲನೆಯ ಭಾವನೆ ತಂದುಕೊಂಡವರು ಅದನ್ನು ಅನುಸರಿಸುತ್ತಿದ್ದರು. ಇದು ಸಾಮಾನ್ಯ ರೀತಿಯ ಧ್ಯಾನವಾಗಿತ್ತು, ಅದರೊಂದಿಗೆ ಭಗವಂತನತ್ತ ಆರೋಹಣ ಮಾಡಲು ಅಭೀಪ್ಸೆಯಿರುತ್ತಿತ್ತು. ಕ್ರೀಡಾಂಗಣದಲ್ಲಿ ಆ ಕಾರ್ಯ ಇಲ್ಲಿರುವ ಎಲ್ಲರನ್ನೂ ಒಟ್ಟಿಗೆ ತರುವುದಿತ್ತು, ಅವರು ತೆರೆದುಕೊಳ್ಳುವಂತೆ ಮಾಡುವುದಿತ್ತು ಮತ್ತು ಅವರಲ್ಲಿ ದೈವೀಶಕ್ತಿಯನ್ನು ಒಳಗಿಳಿಸಿ ತರುವುದಿತ್ತು. ಇದು ವಿರುದ್ಧ ರೀತಿಯ ಚಲನೆ ಮತ್ತು ಆ ಕಾರಣದಿಂದಾಗಿ ಈ ಚಿತ್ತೈಕಾಗ್ರತೆ ಆ ಇನ್ನೊಂದರ ಸ್ಥಾನದಲ್ಲಿ ಬರಲಾರದು, ಹಾಗೆಯೇ ಆ ಇನ್ನೊಂದು ಇದರ ಸ್ಥಾನದಲ್ಲಿ ಬರಲಾರದು. ಇಲ್ಲಿ ಸಂಭವಿಸುತ್ತಿರುವುದು ಅಸಾಧಾರಣವಾಗಿದೆ– ಆಶ್ರಮದಲ್ಲಿ ನಡೆಯುತ್ತಿದ್ದ ಧ್ಯಾನದ ಕಾರ್ಯಕ್ರಮದಲ್ಲಿ ಅಲ್ಲಿ ಉಪಸ್ಥಿತರಿದ್ದ ಎಲ್ಲರ ಪ್ರಜ್ಞೆಗಳನ್ನು ಒಟ್ಟುಗೂಡಿಸುತ್ತಿದ್ದೆ,

ಅಭೀಪ್ಸೆಯ ಸಾಮರ್ಥ್ಯದಿಂದ ಅವುಗಳನ್ನು ಭಗವಂತನತ್ತ ಮೇಲಕ್ಕೆತ್ತುತ್ತಿದ್ದೆ, ಎಂದರೆ ನಿಮ್ಮಲ್ಲಿ ಪ್ರತಿಯೊಬ್ಬರೂ ಸ್ವಲ್ಪ ಪ್ರಗತಿ ಸಾಧಿಸುವಂತೆ ಮಾಡುತ್ತಿದ್ದೆ. ಇನ್ನೊಂದೆಡೆಗೆ ಇಲ್ಲಿ ನೀವು ಹೇಗಿದ್ದೀರೋ ಹಾಗೆ ನಿಮ್ಮನ್ನು ತೆಗೆದುಕೊಳ್ಳುತ್ತೇನೆ. ಪ್ರತಿಯೊಬ್ಬರೂ "ಇಲ್ಲಿ ನಾವು ಇಡೀ ದಿವಸದ ಕಾರ್ಯಕ್ರಮದೊಂದಿಗೆ ಬಂದಿದ್ದೇವೆ, ನಾವು ನಮ್ಮ ದೇಹದೊಂದಿಗೆ ಕಾರ್ಯನಿರತರಾಗಿದ್ದೇವೆ, ಇಲ್ಲಿ ಅದಿದೆ, ನಾವು ನಮ್ಮ ಎಲ್ಲ ಚಲನೆಗಳನ್ನು ಅವಿದ್ದ ಹಾಗೆ, ಹಾಗೂ ನಮ್ಮನ್ನು ನಾವಿದ್ದ ಹಾಗೆ ನಿಮಗೆ ಅರ್ಪಿಸುತ್ತೇವೆ" ಎಂದು ಹೇಳುತ್ತ ಬರುತ್ತಾರೆ. ಮತ್ತು ನನ್ನ ಕಾರ್ಯ ಅದೆಲ್ಲವನ್ನು ಏಕತ್ರಗೊಳಿಸುವುದು ಮತ್ತು ಅದನ್ನು ಸಮರಸವಿರುವ ಮೊತ್ತವನ್ನಾಗಿ ಮಾಡುವುದಿರುತ್ತದೆ ಮತ್ತು ಈ ಅರ್ಪಣೆಗೆ (ಅದನ್ನು ಪ್ರತಿಯೊಬ್ಬನೂ ತನ್ನದೇ ರೀತಿಯಲ್ಲಿ ಮಾಡಬಹುದು) ಉತ್ತರ ಕೊಡುತ್ತ ಪ್ರತಿಯೊಂದು ಪ್ರಜ್ಞೆಯನ್ನು ತೆರೆದಿರಿಸುವುದು, ಗ್ರಹಣಶಕ್ತಿಯನ್ನು ವಿಸ್ತರಿಸುವುದು, ಈ ಗ್ರಹಣಶಕ್ತಿಯ ಏಕತೆಯನ್ನುಂಟು ಮಾಡುವುದು ಮತ್ತು ದೈವೀಶಕ್ತಿಯನ್ನು ಕೆಳಗಿಳಿಸಿ ತರುವುದಾಗಿರುತ್ತದೆ. ಆ ಕ್ಷಣದಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬರೂ ಬಹಳ ಅಚಂಚಲರು ಹಾಗೂ ಲಕ್ಷ್ಯಗೊಡುವವರು ಆಗಿದ್ದರೆ ನೀವು ನಿಶ್ಚಿತವಾಗಿ ಏನನ್ನೋ ದೊರಕಿಸುತ್ತೀರಿ. ನೀವು ಯಾವಾಗಲೂ ಅದರ ಬಗ್ಗೆ ಅರಿವುಳ್ಳವರಾಗಿರುವುದಿಲ್ಲ, ಆದರೆ ನೀವು ಏನನ್ನೋ ದೊರಕಿಸುತ್ತೀರಿ.

(ಮಾರ್ಚ 1964ರಲ್ಲಿ ಕೆಳಗೆ ಕೊಡಲಾದ ಪ್ರಶ್ನೆಯನ್ನು ಶ್ರೀಮಾತೆಯವರ ಮುಂದಿರಿಸಲಾಗಿತ್ತು.)


*

**ಪ್ರಶ್ನೆ:** *ಈಗ ಇನ್ನು ಮುಂದೆ ನೀವು ಭೌತಿಕವಾಗಿ ಕ್ರೀಡಾಂಗಣದ ಕೇಂದ್ರೀಕರಣದಲ್ಲಿ ಉಪಸ್ಥಿತರಾಗಿ ಇರದೆ ಇರುವುದರಿಂದ ಏನು ಸಂಭವಿಸುವುದು?*

**ಶ್ರೀಮಾತೆ:** ಜನರು ಸ್ವಲ್ಪ ಪ್ರಗತಿ ಸಾಧಿಸಿದ್ದಾರೆ ಎಂಬ ಭರವಸೆ ನನಗಿದೆ ಮತ್ತು ದೈವೀ ಸಹಾಯಕ್ಕಾಗಿ ಹಾಗೂ ದೈವೀ ಸಾಮರ್ಥ್ಯಕ್ಕಾಗಿ ಭೌತಿಕ ಸಾನ್ನಿಧ್ಯದ ಆವಶ್ಯಕತೆ ಇಲ್ಲ.

**CWM, 4/106** **- ಶ್ರೀಮಾತೆ**

*



**ದೂರದಿಂದ ಸಹಾಯವನ್ನು ಸ್ವೀಕರಿಸುವುದು**

ಅವನಿಗೆ ದೂರದಿಂದ ಸಹಾಯವನ್ನು ಸ್ವೀಕರಿಸಲು ಸಾಧ್ಯವಾಗದೆ ಹೋದರೆ ಇಲ್ಲಿ ಆ ಯೋಗವನ್ನು ಮುಂದುವರಿಸಿಕೊಂಡು ಹೋಗುವುದನ್ನು ಹೇಗೆ ನಿರೀಕ್ಷಿಸಬಲ್ಲನು? ಈ ಯೋಗ ಶಬ್ದಗಳ ಮೂಲಕ ಬೋಧನೆಗಳನ್ನು ನೀಡುವುದರ ಮೇಲೆ ಇಲ್ಲವೆ ಯಾವುದೇ ಬಾಹ್ಯ ರೀತಿಯ ಮೇಲೆ ಅವಲಂಬಿಸಿಲ್ಲ. ಆದರೆ ಆ ಸಹಾಯ ಜನರು ತಮ್ಮನ್ನು ತೆರೆದಿರಿಸಿಕೊಳ್ಳುವುದರ ಸಾಮರ್ಥ್ಯದ ಮೇಲೆ ಹಾಗೂ ಶಕ್ತಿಯನ್ನು, ಪ್ರಭಾವವನ್ನು ಸಂಪೂರ್ಣ ನಿಶ್ಚಲ ನೀರವತೆಯಲ್ಲಿ ಸ್ವೀಕರಿಸುವುದರ ಮೇಲೆ ಅವಲಂಬಿಸಿದೆ. ದೂರದಿಂದ ಸಹಾಯವನ್ನು ಸ್ವೀಕರಿಸಲು ಶಕ್ತರಾಗದವರು ಇಲ್ಲಿಯೂ ಕೂಡ ಸ್ವೀಕರಿಸಲಾರರು. ಹಾಗೆಯೇ ಮನುಷ್ಯ ತನ್ನಲ್ಲಿ ಸ್ಥಿರತೆ, ನಿಷ್ಕಾಪಟ್ಯ, ಶಾಂತಿ, ತಾಳ್ಮೆ ಹಾಗೂ ಪಟ್ಟುಹಿಡಿಯುವಿಕೆ ಇವುಗಳನ್ನು ಸ್ಥಾಪಿಸಿಕೊಳ್ಳದೆಯೇ ಈ ಯೋಗವನ್ನು ಆಚರಿಸುವುದು ಸಾಧ್ಯವಿಲ್ಲ, ಏಕೆಂದರೆ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಮತ್ತು ಅವುಗಳ ಮೇಲೆ ನಿಶ್ಚಿತವಾಗಿ ಹಾಗೂ ಒಟ್ಟಿನಲ್ಲಿ ಜಯ ಸಾಧಿಸಲು ಹಲವಾರು ವರ್ಷಗಳು ಬೇಕಾಗುತ್ತವೆ.

**CWSA, 35/597** **- ಶ್ರೀ ಅರವಿಂದರು**

*

# ದೈವೀ ಅಪ್ಪುಗೆಯ ವೃತ್ತವನ್ನು ವಿಸ್ತರಿಸುವುದು

## ಆಧ್ಯಾತ್ಮಿಕ ರಹಸ್ಯ ಜ್ಞಾನವುಳ್ಳ ಸಮುದಾಯದ ರೂಪತಾಳುವಿಕೆ

ಬಹಳ ದೀರ್ಘಕಾಲದವರೆಗೆ ಆಶ್ರಮ ಕೇವಲ ಒಟ್ಟಿಗೆ ಜೀವಿಸುತ್ತಿದ್ದುದರ ಸ್ಥಾನವಾಗಿತ್ತು. ಪ್ರತಿಯೊಬ್ಬನು ಏನನ್ನೊ ಪ್ರತಿನಿಧಿಸುತ್ತಿದ್ದನು, ಆದರೆ ಅದು ವ್ಯಕ್ತಿಯೆಂದಾಗಿ ಇರುತ್ತಿತ್ತು, ಯಾವುದೇ ಸಾಮೂಹಿಕ ಸಂಘಟನೆಯ ಸದಸ್ಯನ ರೀತಿಯಲ್ಲಲ್ಲ. ಅವರು ಚದುರಂಗದ ಮಣೆ (chess board)ಯ ಮೇಲಿರುವ ಪ್ರತ್ಯೇಕ ಪ್ಯಾದೆ (pawn)ಗಳ ಹಾಗಿರುತ್ತಿದ್ದರು– ಕೇವಲ ತೋರಿಕೆಗೆ ಏಕತ್ರರಾದವರು– ಅದಕ್ಕೂ ಹೆಚ್ಚಾಗಿ ಮೇಲ್ಮೈಯಲ್ಲಿ ಕಂಡುಬರುತ್ತಿದ್ದ ವಾಸ್ತವತೆ ಎಂದರೆ ಅವರು ಒಂದೇ ಸ್ಥಳದಲ್ಲಿ ಒಟ್ಟಿಗೆ ಜೀವಿಸುತ್ತಿದ್ದರು ಹಾಗೂ ಕೆಲವು ಸಾಮಾನ್ಯ ರೂಢಿಗಳನ್ನಿರಿಸಿಕೊಂಡಿದ್ದರು– ಆ ರೂಢಿಗಳು ಕೂಡ ಬಹಳಷ್ಟಿರಲಿಲ್ಲ, ಸ್ವಲ್ಪ ಮಾತ್ರ ಇದ್ದವು. ಪ್ರತಿಯೊಬ್ಬನೂ ಪ್ರಗತಿ ಸಾಧಿಸುತ್ತಿದ್ದ– ಇಲ್ಲವೆ ಸಾಧಿಸುತ್ತಿರಲಿಲ್ಲ– ಅದು ಅವನದೇ ಕ್ಷಮತೆಗನುಗುಣವಾಗಿ ಇರುತ್ತಿತ್ತು ಮತ್ತು ಇತರರೊಡನೆ ಸಂಬಂಧ ಕನಿಷ್ಠ ಮಟ್ಟದಲ್ಲಿರುತ್ತಿತ್ತು, ಆದರೆ ಸಾಮೂಹಿಕ ನೈಜತೆ ಇಲ್ಲದೆ ಬಹಳ ಮಸುಕಾಗಿತ್ತು, ಇದು ಬಹಳ ಕಾಲ ಹೀಗೆ ಉಳಿದುಕೊಂಡಿತ್ತು. ಇತ್ತೀಚೆಗೆ ಮಾತ್ರ ಸಾಮೂಹಿಕ ನೈಜತೆಯ ಆವಶ್ಯಕತೆ ತೋರಿಬರಲು ಪ್ರಾರಂಭಿಸಿದೆ– ಅದು ಅವಶ್ಯವಾಗಿ ಆಶ್ರಮಕ್ಕೆ ಸೀಮಿತವಾಗಿಲ್ಲ, ಆದರೆ ತಾವು ಶ್ರೀ ಅರವಿಂದರ ಅನುಯಾಯಿಗಳು ಹಾಗೂ ಅವರ ಬೋಧನೆಯ ಪ್ರಕಾರ ಜೀವಿಸಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ಸಾರಿ ಹೇಳಿದವರನ್ನು ಭೌತಿಕವಾಗಿ ಅಲ್ಲ ಆದರೆ ತನ್ನ ಪ್ರಜ್ಞೆಯಲ್ಲಿ ಇಂತಹರನ್ನೂ ಅಪ್ಪಿಕೊಳ್ಳುತ್ತದೆ. ಅವರೆಲ್ಲರ ಮಧ್ಯೆ ಮತ್ತು ಅತಿಮಾನಸ ಪ್ರಜ್ಞೆ ಹಾಗೂ ಶಕ್ತಿ ಇವುಗಳ ಪ್ರಕಟಣೆಯ ನಂತರ ಅಲ್ಲಿ ನಿಜವಾದ, ಇನ್ನೂ ಹೆಚ್ಚು ದೃಢವಾದ ರೀತಿಯಲ್ಲಿ ಸಾಮೂಹಿಕ ಜೀವನದ ಆವಶ್ಯಕತೆ ಎಚ್ಚತ್ತುಕೊಂಡಿದೆ. ಅದು ಕೇವಲ ಭೌತಿಕ ಪರಿಸ್ಥಿತಿಗಳ ಆಧಾರ ಹೊಂದಿರುವುದಿಲ್ಲ, ಆದರೆ ಆಳಾತಿಆಳದ ಸತ್ಯವನ್ನು ಪ್ರತಿನಿಧಿಸುತ್ತದೆ ಮತ್ತು ಶ್ರೀ ಅರವಿಂದರು ಅತಿಮಾನಸ ಇಲ್ಲವೆ ಆಧ್ಯಾತ್ಮಿಕ ರಹಸ್ಯ ಜ್ಞಾನವುಳ್ಳ (gnostic) ಸಮುದಾಯ ಎಂದು ಕರೆಯುತ್ತಿದ್ದುದರ ಪ್ರಾರಂಭವಾಗುತ್ತದೆ. ಇದಕ್ಕಾಗಿ ಆ ಸಮುದಾಯದ ರಚನೆಯಲ್ಲಿರುವ ವ್ಯಕ್ತಿಗಳೇ ಸ್ವತಃ ಈ ಅತಿಮಾನಸ ಪ್ರಜ್ಞೆಯನ್ನು ಹೊಂದಿರಬೇಕು ಎಂದು ಸಹಜವಾಗಿ, ಹೇಳಿದ್ದರು. ಆದರೆ ವೈಯಕ್ತಿಕ ಪರಿಪೂರ್ಣತೆಯನ್ನು ಹೊಂದಿರದೇ ಇದ್ದಾಗಲೂ ಕೂಡ– ಅದರಿಂದ ಬಹಳ

ದೂರವಿದ್ದಾಗಲೂ– ಅಲ್ಲಿ ಅದೇ ವೇಳೆಗೆ ಈ "ಸಾಮುದಾಯಿಕ ವೈಯಕ್ತಿಕತೆ" ಎಂದು ಹೇಳಬಹುದಾದುದನ್ನು ಸೃಷ್ಟಿಸುವ ಆಂತರಿಕ ಪ್ರಯತ್ನವಿದ್ದಿತು. ನಿಜವಾದ ಏಕತೆಯ ಆವಶ್ಯಕತೆ ಹಾಗೂ ಆಳಾತಿ ಆಳದ ಬಂಧನದ ಆವಶ್ಯಕತೆ ಇವುಗಳ ಭಾವನೆಯನ್ನು ತಂದುಕೊಳ್ಳಲಾಗಿದೆ ಮತ್ತು ಅದನ್ನು ಸಿದ್ಧಿಸಿಕೊಳ್ಳುವತ್ತ ಪ್ರಯತ್ನವನ್ನು ನಿರ್ದೇಶಿಸಲಾಗಿದೆ.

ಇದು ಸ್ವಲ್ಪ ಮಟ್ಟಿಗಿನ ಕ್ಷೋಭೆಗೆ ಕಾರಣವಾಗಿದೆ, ಏಕೆಂದರೆ ಮುಂಚಿನ ಕಾಲದಲ್ಲಿ ಪ್ರವೃತ್ತಿ ಎಷ್ಟೊಂದು ವೈಯಕ್ತೀಕರಣಗೊಂಡಿತ್ತೆಂದರೆ ಕೆಲವೊಂದು ರೂಢಿಗಳು ತಿರುಗು–ಮುರುಗಾಗಿವೆ, ನಾನು ಭೌತಿಕ ಅರ್ಥದಲ್ಲಿ ಹೇಳುತ್ತಿಲ್ಲ, ಏಕೆಂದರೆ ವಸ್ತು–ವಿಷಯಗಳು ಮೊದಲಿದ್ದುದಕ್ಕಿಂತ ಬಹಳ ಭಿನ್ನವಾಗಿಲ್ಲ, ಆದರೆ ಒಂದಾನೊಂದು ರೀತಿಯ ಆಳಾತಿಆಳದ ಪ್ರಜ್ಞೆಯಲ್ಲಿ ಅದಾಗಿದೆ ಮತ್ತು ಎಲ್ಲದಕ್ಕಿಂತಲ್ಲೂ ಹೆಚ್ಚಾಗಿ– ನಾನು ಆ ಅಂಶದ ಮೇಲೆ ಒತ್ತುಕೊಟ್ಟು ಹೇಳಲು ಬಯಸುತ್ತೇನೆ– ಇದು ಒಂದು ಬಗೆಯ ಆಂತರಿಕ ಪರಸ್ಪರಾವಲಂಬನೆಯನ್ನು ಸೃಷ್ಟಿಸಿದೆ, ಅದು ಸ್ವಾಭಾವಿಕವಾಗಿ ವೈಯಕ್ತಿಕ ಹಂತವನ್ನು ಕೆಳಮಟ್ಟಕ್ಕೆ ತಂದಿದೆ– ಅದು ಸ್ವಲ್ಪ ಮಾತ್ರ– ಇದು ಕೆಲವು ಜನರನ್ನು ಹೊರತುಪಡಿಸಿ ಆಗಿದೆ, ಅವರು ಈಗಾಗಲೆ ಆಂತರಿಕ ಸಿದ್ಧಿಯನ್ನು ಪಡೆದಿದ್ದರು, ನಾನು "ಸಮತಲ–ಗೊಳಿಸುವುದು" ಎಂದು ಕರೆಯಬಹುದಾದ ಈ ಚಲನೆಯನ್ನು ತಡೆಗಟ್ಟಲು ಸಾಕಷ್ಟು ಬಲವುಳ್ಳವರಾಗಿದ್ದರು. ಇದೇ ಸರ್ವಸಾಧಾರಣ ಮಟ್ಟ ಕೆಳಗಿಳಿದು ಹೋಗಿದೆ ಎಂಬ ಅಭಿಪ್ರಾಯವನ್ನು ತರುತ್ತದೆ, ಅದು ಸರಿಯಾದ ಅನಿಸಿಕೆಯಲ್ಲ. ಸರ್ವಸಾಧಾರಣ ಮಟ್ಟ ಮೊದಲಿದ್ದುದಕ್ಕಿಂತ ಉಚ್ಚತರ ಸ್ತರದ ಮೇಲಿದೆ, ಆದರೆ ಬಹಳಷ್ಟು ಸಂದರ್ಭಗಳಲ್ಲಿ ಕೆಳಗಿಳಿದು ಹೋಗಿದೆ ಮತ್ತು ಒಂದು ಸಿದ್ಧಿಯ ನಂತರ ಇನ್ನೊಂದು ಸಿದ್ಧಿಯನ್ನು ಪಡೆಯಲು ಸಮರ್ಥರಾದವರಿಗೆ ಆ ಭಾವನೆ ಬಂದಿದೆ, ಮೊದಲು ಹೊತ್ತುಕೊಂಡು ಹೋಗಬೇಕಾಗಿರದ ಭಾರದಿಂದ ಬಗ್ಗುವಂತೆ ಏಕೆ ಆಗಿದೆ ಎಂಬುದನ್ನು ಅವರು ತಿಳಿದುಕೊಂಡಿಲ್ಲ. ಅದು ಪರಸ್ಪರಾವಲಂಬನೆಯ ಪರಿಣಾಮ. ಅದು ಕೇವಲ ತಾತ್ಕಾಲಿಕ ಪರಿಣಾಮ, ಇನ್ನೊಂದೆಡೆಗೆ ಅದು ಸುಧಾರಣೆಯತ್ತ ಕರೆದೊಯ್ಯುತ್ತದೆ, ಆ ಸುಧಾರಣೆ ವಾಸ್ತವ, ಸರ್ವಸಾಧಾರಣ ಪ್ರಗತಿಯದಾಗಿರುತ್ತದೆ.

**CWM, 9/173-74** **- ಶ್ರೀಮಾತೆ**

*

## ಜಗತ್ತಿನಲ್ಲಿ ಯೋಗಾಚರಣೆ ಹೆಚ್ಚು ಕಠಿಣವಾದದ್ದು, ಆದರೆ ಹೆಚ್ಚು ಸಂಪೂರ್ಣವಾದದ್ದು

ಎರಡು ನೌಕೆಗಳು ತಮ್ಮದೇ ವೇಗದಿಂದ ತಮಗೆ ನಿರ್ದೇಶನಗೊಳಿಸಿದ ದಿಶೆಯಲ್ಲಿ ಸಾಗುತ್ತಿರುವಾಗ ಮನುಷ್ಯ ತನ್ನ ಒಂದು ಕಾಲನ್ನು ಒಂದು ನೌಕೆಯಲ್ಲಿ, ಇನ್ನೊಂದು ಕಾಲನ್ನು ಇನ್ನೊಂದು ನೌಕೆಯಲ್ಲಿ ಇರಿಸುವುದನ್ನು, ಪ್ರತಿಯೊಂದು ನೌಕೆ ತನ್ನದೇ ದಾರಿಯಲ್ಲಿ ಸಾಗುತ್ತಿರುವಾಗ ಅವೆರಡರ ನಡುವೆ ನಿಲ್ಲುವುದನ್ನು ಕುರಿತು ಹುಷಾರಾಗಿರಬೇಕು. ಇದನ್ನೇ ಶ್ರೀ ಅರವಿಂದರು ಹೇಳಿದ್ದರು. ಮನುಷ್ಯ ಎರಡು ಬಗೆಯ ಜೀವನ ನಡೆಸಬಾರದು. ಅವುಗಳಲ್ಲಿ ಅವನು ಒಂದನ್ನು ಬಿಟ್ಟುಕೊಡಬೇಕು, ಅವನು ಎರಡನ್ನೂ ಅನುಸರಿಸುವುದು ಸಾಧ್ಯವಿಲ್ಲ.

ಹಾಗಿದ್ದರೂ ಅದರರ್ಥ ಮನುಷ್ಯ ತನ್ನ ಜೀವನದ ಪರಿಸ್ಥಿತಿಗಳಿಂದ ಹೊರಗೆ ಹೊರಟು ಬರಬೇಕಾದ ನಿರ್ಬಂಧಕ್ಕೊಳಗಾಗುತ್ತಾನೆ ಎಂದಲ್ಲ. ಆಂತರಿಕ ಮನೋಭಾವವನ್ನು ಇಡಿಯಾಗಿ ಬದಲು ಮಾಡಬೇಕು. ಮನುಷ್ಯ ತಾನು ಕಾರ್ಯಕೈಕೊಳ್ಳುತ್ತಿರುವ ರೂಢಿಯಲ್ಲಿ ಕಾರ್ಯಕೈಕೊಳ್ಳಬಹುದು; ಆದರೆ ಅದನ್ನು ಬಹಳ ಭಿನ್ನ ಮನೋಭಾವದಿಂದ ಕೈಕೊಳ್ಳಬೇಕು. ಜೀವನದಲ್ಲಿರುವ ಎಲ್ಲವನ್ನು ಬಿಟ್ಟುಕೊಟ್ಟು ಯೋಗಾಚರಣೆ ಮಾಡಲು ಏಕಾಂತದಲ್ಲಿರುವುದಕ್ಕೆ ಆಶ್ರಮವೊಂದಕ್ಕೆ ಹೋಗುವುದು ಅವಶ್ಯವಾಗಿದೆ ಎಂದು ನಾನು ಹೇಳುವುದಿಲ್ಲ. ಮನುಷ್ಯ ಜಗತ್ತಿನಲ್ಲಿ ಹಾಗೂ ಜಗತ್ತಿನ ಪರಿಸ್ಥಿತಿಗಳಲ್ಲಿ ಯೋಗವನ್ನು ಆಚರಿಸಲು ಬಯಸುವುದು ಕಠಿಣವಾದದ್ದು, ಆದರೆ ಅದು ಹೆಚ್ಚು ಸಂಪೂರ್ಣವಾದದ್ದು. ಏಕೆಂದರೆ ಎಲ್ಲವನ್ನೂ ಬಿಟ್ಟುಕೊಟ್ಟು ಏಕಾಂತದಲ್ಲಿ ಇರಲು ಹೋದವನು ಎದುರಿಸಬೇಕಾದ ಸಮಸ್ಯೆಗಳು ಕನಿಷ್ಠ ಮಟ್ಟದಲ್ಲಿರುತ್ತವೆ, ಜಗತ್ತಿನಲ್ಲಿದ್ದು ಯೋಗಾಚರಣೆ ಮಾಡುವವನು ಪ್ರತಿನಿಮಿಷ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಜೀವನದಲ್ಲಿ ಎಲ್ಲ ಬಗೆಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ, ಅಂತಹ ತೊಂದರೆ ನಿಮ್ಮ ಸುತ್ತಲಿರುವ ಹಾಗೂ ನಿಮ್ಮೊಡನೆ ವ್ಯವಹರಿಸಲಿರುವ ಜನರಿಂದ ಪ್ರಾರಂಭವಾಗುತ್ತದೆ, ಅವರನ್ನು ಅರಿವಿಗೆ ತಂದುಕೊಳ್ಳುವುದು ಕಷ್ಟವಾಗುತ್ತದೆ. ಮನುಷ್ಯ ಅದಕ್ಕಾಗಿ ತಯಾರಾಗಿರಬೇಕು, ತಾಳ್ಮೆಯೊಂದಿಗೆ ಶಸ್ತ್ರಸಜ್ಜಿತನಾಗಿರಬೇಕು ಹಾಗೂ ಭವ್ಯರೀತಿಯಲ್ಲಿ ಉದಾಸೀನನಾಗಿರಬೇಕು. ಆದರೆ ಯೋಗಾಚರಣೆಯಲ್ಲಿ ಜನರು ಯಾವ ಯೋಚನೆ ಮಾಡುತ್ತಾರೆ, ಏನನ್ನು ಹೇಳುತ್ತಾರೆ ಎಂಬುದನ್ನು ಕುರಿತು ಇನ್ನು ಮುಂದೆ ಕಾಳಜಿ ಮಾಡಬಾರದು; ಅದು ಸಂಪೂರ್ಣವಾಗಿ ಅತ್ಯಗತ್ಯದ್ದಾದ ಪ್ರಾರಂಭ ಬಿಂದು. ನಿಮ್ಮನ್ನು ಕುರಿತು ಜಗತ್ತು ಏನನ್ನು

ಹೇಳಬಹುದು, ಯೋಚಿಸಬಹುದು ಹಾಗೂ ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದನ್ನು ಕುರಿತು ನೀವು ಸಂಪೂರ್ಣವಾಗಿ ಪ್ರತಿರಕ್ಷಿತ (immune) ರಾಗಿರಬೇಕು. ಜನರ ಅರ್ಥಮಾಡಿಕೊಳ್ಳುವಿಕೆ ನಿಮಗೆ ಮಹತ್ವವಿಲ್ಲದ ಏನೋ ಒಂದು ಎಂಬಂತಾಗಬೇಕು, ಅದು ನಿಮ್ಮನ್ನು ಕೊಂಚ ಮಾತ್ರಕ್ಕೂ ಸ್ಪರ್ಶಿಸ–ಬಾರದು. ಆ ಕಾರಣದಿಂದಾಗಿ ಮನುಷ್ಯ ತನ್ನ ಸಾಮಾನ್ಯ ಪರಿಸರ–ದಲ್ಲಿದ್ದುಕೊಂಡು ಯೋಗಾಚರಣೆ ಮಾಡುವುದು ಎಲ್ಲವನ್ನೂ ಬಿಟ್ಟುಕೊಟ್ಟು ಏಕಾಂತದಲ್ಲಿ ಇರುವುದಕ್ಕೆ ಹೋಗುವವನ ಯೋಗಾಚರಣೆಗಿಂತ ಹೆಚ್ಚು ಕಷ್ಟದ್ದಾಗಿರುತ್ತದೆ. ಆದರೆ ನಾವು ಇಲ್ಲಿ ಸುಲಭವಾದ ಕಾರ್ಯಗಳನ್ನು ಕೈಕೊಳ್ಳುವುದಕ್ಕಾಗಿ ಇಲ್ಲ. ಅಂತಹ ಕಾರ್ಯಗಳನ್ನು ಪರಿವರ್ತನೆ ಕುರಿತು ಯೋಚಿಸದ ಜನರಿಗೆ ಬಿಟ್ಟುಕೊಡುತ್ತೇವೆ.

**CWM, 4/377-78** **- ಶ್ರೀಮಾತೆ**

*

**ಆಧ್ಯಾತ್ಮಿಕ ಜೀವನಕ್ಕಾಗಿ ತಯಾರು ಮಾಡಿಕೊಳ್ಳುವ ಅತ್ಯಂತ ಒಳ್ಳೆಯ ರೀತಿ**

ಮನುಷ್ಯ ವೃತ್ತಿಜೀವನದ ಸಾಧಾರಣ ಕಾರ್ಯಗಳು ಹಾಗೂ ಪರಿಸರ ಇವುಗಳೊಂದಿಗೆ ಜೀವಿಸಬೇಕಾದಾಗ ಆಧ್ಯಾತ್ಮಿಕ ಜೀವನಕ್ಕಾಗಿ ತಯಾರು ಮಾಡಿಕೊಳ್ಳುವ ಅತ್ಯಂತ ಒಳ್ಳೆಯ ರೀತಿ ಎಂದರೆ ಗೀತೆ ಹೇಳುವಂತೆ ಇಡಿಯಾದ ಸಮತೆ ಹಾಗೂ ನಿರ್ಲಿಪ್ತತೆಗಳನ್ನು ಅಭಿವೃದ್ಧಿಪಡಿಸುವುದಾಗಿದೆ, ಅದರೊಂದಿಗೆ ಹೊಂದಿರಬೇಕಾದ ನಂಬಿಕೆ ಎಂದರೆ ಅಲ್ಲಿ ಭಗವಂತನಿದ್ದಾನೆ, ಅವನ ಸಂಕಲ್ಪ, ಸದ್ಯ ಅವಿದ್ಯೆಯ ಜಗತ್ತಿನ ಪರಿಸ್ಥಿತಿಗಳಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ ಕಾರ್ಯನಿರತವಾಗಿದೆ ಎಂಬುದು. ಇದರಾಚೆಗೆ ದೈವೀ ಪ್ರಕಾಶ ಹಾಗೂ ದೈವೀ ಆನಂದಗಳಿವೆ, ಅವುಗಳತ್ತ ಜೀವನ ಕಾರ್ಯಕೈಕೊಳ್ಳುತ್ತಿದೆ, ಆದರೆ ವ್ಯಕ್ತಿಗತ ಸತ್ತೆ ಹಾಗೂ ಸ್ವಭಾವಗಳಲ್ಲಿ ಅವುಗಳ ಆಗಮನ ಹಾಗೂ ಸ್ಥಾಪಿತಗೊಳ್ಳುವಿಕೆ ಇವುಗಳಿಗಾಗಿ ಅತ್ಯಂತ ಒಳ್ಳೆಯ ರೀತಿ ಎಂದರೆ ಈ ಆಧ್ಯಾತ್ಮಿಕ ಸಮತೆಯಲ್ಲಿ ಬೆಳೆಯುವುದಾಗಿದೆ. ಅದು ಸಂತೋಷ ನೀಡದ ಹಾಗೂ ಒಪ್ಪಿಕೊಳ್ಳಲಾಗದ ವಿಷಯಗಳನ್ನು ಕುರಿತು ಕೂಡ ಪರಿಹಾರ ಒದಗಿಸುತ್ತದೆ. ಸಂತೋಷದಾಯಕವಲ್ಲದ ಎಲ್ಲವನ್ನೂ ಸಮತೆಯ ಮನೋಭಾವದಿಂದ ಎದುರಿಸಬೇಕು.

*

ಮನುಷ್ಯ ಜಗತ್ತಿನಲ್ಲಿ ಜೀವಿಸುತ್ತಿರುವಾಗ, ಆಶ್ರಮದಲ್ಲಿ ಕೈಕೊಳ್ಳುವ ರೀತಿಯಲ್ಲಿ ಮಾಡಲಾಗದು– ಅವನು ಇತರರೊಡನೆ ಬೆರೆಯಬೇಕು ಮತ್ತು ಬಾಹ್ಯದಲ್ಲಿ ಸರ್ವಸಾಧಾರಣ ಸಂಬಂಧಗಳನ್ನು ಕನಿಷ್ಠಮಟ್ಟದಲ್ಲಾದರೂ ಕಾಪಾಡಿಕೊಂಡು ಬರಬೇಕು. ಆಂತರಿಕ ಪ್ರಜ್ಞೆಯಲ್ಲಿ ಭಗವಂತನಿಗೆ ತೆರೆದಿರಿಸಿಕೊಳ್ಳುವಿಕೆಯನ್ನು ಕಾಪಾಡಿಕೊಂಡು ಬರುತ್ತ ಅದರಲ್ಲಿ ಬೆಳೆಯಬೇಕು. ಸಾಧನೆಯ ಆಂತರಿಕ ಗಾಢತೆಗನುಗುಣವಾಗಿ ಅವನು ಅದನ್ನು ಹೆಚ್ಚು ಕಡಿಮೆ ತೀವ್ರಗತಿಯಿಂದ ಕೈಕೊಳ್ಳುತ್ತಿದ್ದಂತೆ ಇತರರ ಬಗ್ಗೆ ಅವನ ಮನೋಭಾವ ಬದಲಾಗುತ್ತದೆ. ಎಲ್ಲವನ್ನೂ ಹೆಚ್ಚು ಹೆಚ್ಚಾಗಿ ಭಗವಂತನಲ್ಲಿ ನೋಡಲಾಗುತ್ತದೆ ಮತ್ತು ಭಾವನೆ, ಕ್ರಿಯೆ ಇತ್ಯಾದಿಗಳನ್ನು ನಿಮ್ಮಲ್ಲಿ ಬೆಳೆಯುತ್ತಿರುವ ಪ್ರಜ್ಞೆಯ ಮೂಲಕ ನೋಡಲಾಗುತ್ತದೆ, ಹಳೆಯ ಬಾಹ್ಯ ಪ್ರತಿಕ್ರಿಯೆಗಳ ಮೂಲಕವಲ್ಲ.

*

ಸಾಂಸಾರಿಕ ಜೀವನ, ಅದರ ಸ್ವಭಾವದಲ್ಲಿ, ತಳಮಳವಿರುವ ಕ್ಷೇತ್ರವಾಗಿದೆ– ಅದರಾದ್ಯಂತ ಸರಿಯಾದ ದಾರಿಯಲ್ಲಿ ಸಾಗಿ ಹೋಗುವುದಕ್ಕಾಗಿ ಮನುಷ್ಯ ತನ್ನ ಜೀವನವನ್ನು ಹಾಗೂ ಕ್ರಿಯೆಗಳನ್ನು ಭಗವಂತನಿಗೆ ಅರ್ಪಿಸಬೇಕು ಮತ್ತು ಆಂತರಿಕ ಭಗವಂತನ ಶಾಂತಿಗಾಗಿ ಪ್ರಾರ್ಥನೆ ಮಾಡಬೇಕು. ಮನಸ್ಸು ಅಚಂಚಲವಾದಾಗ ಮನುಷ್ಯ ಜೀವನಕ್ಕೆ ಶ್ರೀಮಾತೆಯವರು ಆಧಾರ ನೀಡುತ್ತಿರುವುದನ್ನು ನೋಡುತ್ತಾನೆ ಮತ್ತು ಪ್ರತಿಯೊಂದನ್ನು ಅವರ ಕೈಗಳಲ್ಲಿರಿ–ಸುತ್ತಾನೆ.

**CWSA, 31/344-45** **- ಶ್ರೀ ಅರವಿಂದರು**

*

**ಶ್ರೀ ಅರವಿಂದರ ದೈವೀ ಶಕ್ತಿ ಆಶ್ರಮಕ್ಕೆ ಸೀಮಿತವಾಗಿರುವುದಿಲ್ಲ**

ನಿಶ್ಚಿತವಾಗಿ ನನ್ನ ಶಕ್ತಿ ಆಶ್ರಮಕ್ಕೆ ಹಾಗೂ ಅದರ ಸ್ಥಿತಿಗಳಿಗೆ ಸೀಮಿತವಾಗಿಲ್ಲ. ನಿಮಗೆ ತಿಳಿದ ಹಾಗೆ ಯುದ್ಧ ಸರಿಯಾದ ರೀತಿಯಲ್ಲಿ ನಡೆದು ಹೋಗುವುದಕ್ಕಾಗಿ ಹಾಗೂ ಮಾನವ ಜಗತ್ತಿನಲ್ಲಿ ಬದಲಾವಣೆ ತರುವುದಕ್ಕಾಗಿ ಅದನ್ನು ಭವ್ಯ ರೀತಿಯಲ್ಲಿ ಉಪಯೋಗಿಸಲಾಗುತ್ತಿದೆ. ಆಶ್ರಮದ ವ್ಯಾಪ್ತಿಯ ಹೊರಗಿರುವ ವೈಯಕ್ತಿಕ ಉದ್ದೇಶಗಳಿಗಾಗಿ ಹಾಗೂ ಯೋಗಾಚರಣೆಗಾಗಿ ಉಪಯೋಗ ಮಾಡಲಾಗುತ್ತದೆ, ಆದರೆ ಅದನ್ನು, ಸಹಜವಾಗಿ, ಮೌನದಿಂದ

ಮತ್ತು ಮುಖ್ಯವಾಗಿ ಆಧ್ಯಾತ್ಮಿಕ ಕ್ರಿಯೆಯಿಂದ ಕೈಕೊಳ್ಳಲಾಗುತ್ತದೆ. ಹಾಗಿದ್ದರೂ ಆಶ್ರಮ ಸಹಜವಾಗಿ, ಕಾರ್ಯದ ಕೇಂದ್ರವಾಗಿ ಉಳಿದುಕೊಳ್ಳುತ್ತದೆ ಮತ್ತು ಯೋಗಾಚಾರಣೆಯ ಹೊರತಾಗಿ ಕಾರ್ಯ ಅಸ್ತಿತ್ವದಲ್ಲಿರುವುದಿಲ್ಲ, ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ, ಇಲ್ಲವೆ ಫಲಪ್ರದತೆ ಇರುವುದಿಲ್ಲ. ಆದರೆ ಯೋಗದಲ್ಲಿಯೇ ಸ್ವತಃ ಭಿನ್ನ ಸ್ವಭಾವಗಳಿಗಾಗಿ ಮುಂದುವರಿದುಕೊಂಡು ಹೋಗುವ ಭಿನ್ನ ರೀತಿಗಳಿರುತ್ತವೆ, ಆದಾಗ್ಯೂ ಸರ್ವಸಾಧಾರಣ ಮಾರ್ಗ ಅದೇ ಆಗಿರುತ್ತದೆ: ಭಗವಂತನಿಗೆ ಶರಣಾಗುವುದು ಮತ್ತು ಸ್ವಭಾವದಲ್ಲಿ ಬದಲಾವಣೆ ಮಾಡಿಕೊಳ್ಳುವುದು. ಆದರೆ ಭಗವಂತನಿಗೆ ಶರಣಾಗತಿಯನ್ನು, ಅದರ ಅತ್ಯಂತ ಸಂಪೂರ್ಣ ಅರ್ಥದಲ್ಲಿ, ಹಾಗೆಯೇ ಸ್ವಭಾವದಲ್ಲಿ ಬದಲಾವಣೆಯನ್ನು ಅಲ್ಪ ಸಮಯದಲ್ಲಿ ಸಿದ್ಧಿಸಿಕೊಳ್ಳಲಾಗುವುದಿಲ್ಲ. ಒಟ್ಟಿನಲ್ಲಿ ಮನುಷ್ಯ ತನಗೆ ಸಾಧ್ಯವಿರುವಷ್ಟು ತೀವ್ರ ಗತಿಯಿಂದ ಸಾಗಬೇಕು ಮತ್ತು ಅವಶ್ಯವಾದಷ್ಟು ನಿಧಾನ ಗತಿಯಿಂದ ಸಾಗಬೇಕು– ಇಲ್ಲಿ ವೈರುಧ್ಯವಿರುವಂತೆ ತೋರಿಬರುತ್ತದೆ, ಆದರೆ ಅದಿಲ್ಲ.

**CWSA, 35/496** **- ಶ್ರೀ ಅರವಿಂದರು**

*

ಮನಸ್ಸನ್ನು ತಯಾರು ಮಾಡಲು ಓದುವುದು, ಅಭ್ಯಾಸ ಮಾಡುವುದು ಉಪಯುಕ್ತವಾಗಿವೆಯಾದರೂ, ಅವುಗಳೇ ಸ್ವತಃ ಯೋಗದಲ್ಲಿ ಪ್ರವೇಶ ಪಡೆಯುವುದಕ್ಕೆ ಅತ್ಯಂತ ಒಳ್ಳೆಯ ಸಾಧನಗಳಲ್ಲ ಎಂದು ನೀನು ಅವನಿಗೆ ಹೇಳಬಹುದು. ಮನುಷ್ಯ ತನ್ನ ಅಂತರಂಗದಲ್ಲಿಯೇ ಭಗವಂತನಿಗೆ ಸ್ವ–ಮುಡಿಪಾಗಿರಿಸಿಕೊಳ್ಳುವಿಕೆ ಒಂದು ಸಾಧನವಾಗಿರುತ್ತದೆ. ಆಶ್ರಮದ ವಾತಾವರಣದಲ್ಲಿ ಪ್ರವೇಶ ಪಡೆಯುವುದರ ಆವಶ್ಯಕತೆಯೂ ಇರುವುದಿಲ್ಲ, ಏಕೆಂದರೆ ಆ ವಾತಾವರಣದಲ್ಲಿ ಹಲವಾರು ವಿಷಯಗಳಿವೆ, ಅವೆಲ್ಲವೂ ಬಯಸಲು ಯೋಗ್ಯವಾಗಿರುವುದಿಲ್ಲ. ಅವನು ಶ್ರೀಮಾತೆಯವರ ಪ್ರಜ್ಞೆಯೊಂದಿಗೆ ಏಕತೆ ಪಡೆಯಬೇಕು, ಮತ್ತು ಅಲ್ಲಿಯೂ ಕೂಡ ಮನಸ್ಸು, ಹೃದಯ ಹಾಗೂ ಸಂಕಲ್ಪಗಳಲ್ಲಿ ನಿಷ್ಕಪಟ ಸ್ವ–ಮುಡಿಪಾಗಿರಿಸಿಕೊಳ್ಳುವಿಕೆ ಇರಬೇಕು, ಅಲ್ಲಿ ಅದು ಸಾಧನವಾಗುತ್ತದೆ. ಶ್ರೀಮಾತೆಯವರು ವಹಿಸಿಕೊಟ್ಟ ಕಾರ್ಯ, ಯಾವಾಗಲೂ, ಸ್ವ–ಮುಡಿಪಾಗಿರಿಸಿಕೊಳ್ಳುವ ಅರ್ಥದಲ್ಲಿ ಒಂದು ಕ್ಷೇತ್ರವಾಗಿರುತ್ತದೆ, ಅದನ್ನು ಅವರಿಗೆ ಅರ್ಪಣೆ ಮಾಡುವ ರೀತಿಯಲ್ಲಿ ಕೈಕೊಳ್ಳಬೇಕು, ಅದರಿಂದಾಗಿ

ಕಾರ್ಯ ಕೈಕೊಳ್ಳುತ್ತಿರುವ ಅವರ ದೈವೀ ಶಕ್ತಿಯನ್ನು ಹಾಗೂ ಅವರ ಸಾನ್ನಿಧ್ಯವನ್ನು ಸ್ವ–ಅರ್ಪಣೆಯ ಮೂಲಕ ಭಾವನೆಗೆ ತಂದುಕೊಳ್ಳಬಹುದು.

**CWSA, 35/547-48** **- ಶ್ರೀ ಅರವಿಂದರು**

*

**ಭೌತಿಕವಾಗಿ ಹಾಗೂ ಆಂತರಿಕವಾಗಿ ಹತ್ತಿರ ಇರುವಿಕೆ**

**ಪ್ರಶ್ನೆ:** *ಮುಂಬಯಿ, ಕೋಲ್ಕತ್ತಾಗಳಂತಹ ದೂರದ ಸ್ಥಳಗಳಲ್ಲಿದ್ದು ಶ್ರೀಮಾತೆ–ಯವರ ಸಹಾಯ ಸ್ವೀಕರಿಸಲು ಸಾಧ್ಯವಿದೆಯೆ? ಅದು ಬಹುಮಟ್ಟಿಗೆ ಆಶ್ರಮದಲ್ಲಿ ಆಗುವ ಹಾಗೆ ಆಗುವುದೆ?*

**ಶ್ರೀ ಅ:** ಮನುಷ್ಯ ಎಲ್ಲೆಡೆಯಲ್ಲಿ ಸಹಾಯ ಸ್ವೀಕರಿಸಬಹುದು ಮತ್ತು ಅಲ್ಲಿ ಬಲವುಳ್ಳ ಆಧ್ಯಾತ್ಮಿಕ ಪ್ರಜ್ಞೆ ಇದ್ದರೆ ಅವನು ಭವ್ಯ ರೀತಿಯಲ್ಲಿ ಪ್ರಗತಿ ಸಾಧಿಸಬಹುದು. ಅದು ಯಾವ ಭಿನ್ನತೆಯನ್ನೂ ಉಂಟುಮಾಡುವುದಿಲ್ಲ, ಬಹುಮಟ್ಟಿಗೆ ಅದೇ ಆಗಿರುತ್ತದೆ ಎಂಬ ವಿಚಾರಕ್ಕೆ ಅನುಭವ ಆಧಾರ ನೀಡುವುದಿಲ್ಲ.

*

**ಪ್ರಶ್ನೆ:** *ನಾನು ಶ್ರೀಮಾತೆಯವರ ಹತ್ತಿರ ಇರಲು ಬಯಸುತ್ತೇನೆ. ನಾನು ಅವರ ಹತ್ತಿರದಲ್ಲಿದ್ದರೆ ವಿರೋಧೀ ಶಕ್ತಿಗಳು ನನ್ನ ಮೇಲೆ ಆಕ್ರಮಣ ಮಾಡುವುದಿಲ್ಲ.*

**ಶ್ರೀ ಅ:** ನೀನು ಬಹಳ ತಪ್ಪು ತಿಳಿವಳಿಕೆ ಮಾಡಿಕೊಂಡಿರುವಿ. ಶ್ರೀಮಾತೆಯವರಿಗೆ ಭೌತಿಕವಾಗಿ ಅತಿ ಹತ್ತಿರ ಇದ್ದವರಲ್ಲಿ ಕೆಲವರಿದ್ದಾರೆ, ಅವರ ಮೇಲೆ ಅತ್ಯಂತ ಕೆಟ್ಟ ಆಕ್ರಮಣಗಳಾಗಿದ್ದವು, ನಿನ್ನ ಮೇಲೆ ಅಂತಹ ಆಕ್ರಮಣಗಳು ಎಂದಿಗೂ ಆಗಿಲ್ಲ. ಆಂತರಿಕವಾಗಿ ಹತ್ತಿರವಿರುವಿಕೆ ರಕ್ಷಣೆ ನೀಡುತ್ತದೆ, ಭೌತಿಕವಾಗಿ ಹತ್ತಿರ ಇರುವಿಕೆಯಿಂದ ಅದಾಗುವುದಿಲ್ಲ.

*

ಆಂತರಿಕವಾಗಿ ಹತ್ತಿರ ಇರುವುದು ಮಹತ್ವದ್ದು ಮನಸ್ಸಿನ ಆ ವಿಚಾರ– ಸಹಜವಾಗಿ ಅದು ಬಹಳ ಸ್ವಾಭಾವಿಕವಾದದ್ದು– ಬಾಹ್ಯದಲ್ಲಿ ಹತ್ತಿರವಿರುವಿಕೆ ಸಂಬಂಧ ಹೊಂದಿರುವುದರ ಕುರುಹು ಇಲ್ಲವೆ ವಿಶಿಷ್ಟ ಅನುಗ್ರಹ ಇಲ್ಲವೆ ತೀವ್ರಗತಿಯಿಂದ ಪ್ರಗತಿ ಸಾಧಿಸುವುದಕ್ಕೆ ಒಂದು ಸಾಧನ ಎಂಬುದನ್ನು ಅನುಭವ

ತೋರಿಸಿಕೊಟ್ಟಿಲ್ಲ. ಕೆಲವರಿದ್ದಾರೆ, ಅವರು ಶ್ರೀಮಾತೆಯವರನ್ನು ದಿನಾಲು ನೋಡುತ್ತಾರೆ, ಹಲವಾರು ವರ್ಷಗಳ ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಅವರು ಸಾಧಿಸಿಲ್ಲ– ಇನ್ನೂ ಕೆಲವರ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ ಅವರ ಹತ್ತಿರವಿರುವಿಕೆ ಅವರಲ್ಲಿ ಪ್ರಾಣಿಕದ ಒತ್ತಾಯದ ಬೇಡಿಕೆಗಳನ್ನು ಪೋಷಿಸಿತು. ಇನ್ನೊಂದೆಡೆಗೆ ಶ್ರೀಮಾತೆವರಿಗೆ ಬಹಳ ಹತ್ತಿರವಾದವರಿದ್ದಾರೆ, ಆಧ್ಯಾತ್ಮಿಕ ಮಾರ್ಗದಲ್ಲಿ ಬಹಳ ಮುಂದುವರಿದಿದ್ದಾರೆ, ಅವರನ್ನು ಶ್ರೀಮಾತೆಯವರು ಪ್ರೀತಿಯಿಂದ ಕಾಣುತ್ತಾರೆ, ಅವರ ಬಳಿಗೆ ಅವರನ್ನು ನೋಡಲು ಆಗೊಮ್ಮೆ ಈಗೊಮ್ಮೆ ಬರುತ್ತಾರೆ– ನಾನೊಂದು ಉದಾಹರಣೆಯನ್ನು ಕೊಡಬಹುದು: ಒಬ್ಬರು ವರ್ಷದಲ್ಲಿ ಒಂದು ಸಲ ಸಂದರ್ಶನಕ್ಕಾಗಿ ಬರುತ್ತಾರೆ, ಅವರಷ್ಟು ತೀವ್ರಗತಿಯಲ್ಲಿ ಪ್ರಗತಿ ಸಾಧಿಸಿದವರು ಇಲ್ಲವೆ ತಮ್ಮಲ್ಲಿ ಪ್ರೀತಿಯ ಸಂಬಂಧದ ಗಾಢತೆಯನ್ನು ಹಾಗೂ ಭಾವದ ತೀವ್ರತೆಯನ್ನು ಬೆಳೆಸಿಕೊಂಡವರು ಬೇರೆ ಯಾರೂ ಇಲ್ಲ, ಈ ಎಲ್ಲ ವಿಷಯಗಳನ್ನು ಕುರಿತು ಶ್ರೀಮಾತೆಯವರಲ್ಲಿ ಹಾಗೂ ಅವರಿಗೆ ಮಾರ್ಗದರ್ಶನ ಮಾಡುವ ಪ್ರಕಾಶದಲ್ಲಿ ಗಾಢ ನಂಬಿಕೆಯನ್ನು ಇರಿಸುವುದು ಅತ್ಯಂತ ಒಳ್ಳೆಯದು.

**CWSA, 32/494** **- ಶ್ರೀ ಅರವಿಂದರು**

*

ಮನುಷ್ಯ ಹತ್ತಿರವಿರುವ ಆಂತರಿಕ ಸಂಬಂಧವನ್ನು ಹೊಂದಿದ್ದರೆ ಅವನು ಯಾವಾಗಲೂ ಶ್ರೀಮಾತೆಯವರು ಹತ್ತಿರ ಇರುವ, ಅಂತರಂಗದಲ್ಲಿರುವ ಹಾಗೂ ಸುತ್ತುಮುತ್ತಲೂ ಇರುವ ಭಾವನೆ ತಂದುಕೊಳ್ಳುತ್ತಾನೆ, ಭೌತಿಕವಾಗಿ ಹತ್ತಿರವಿರುವುದರ ಸಲುವಾಗಿ ಅವನು ಒತ್ತಾಯಪಟ್ಟುಕೊಳ್ಳುವುದಿಲ್ಲ. ಇಂತಹದಿಲ್ಲದೇ ಇರುವವರು ಅದಕ್ಕಾಗಿ ಅಭೀಪ್ಸೆಪಡಬೇಕು ಮತ್ತು ಇನ್ನೊಂದಕ್ಕಾಗಿ ಹಾತೊರೆಯಬಾರದು. ಬಾಹ್ಯದಲ್ಲಿ ಹತ್ತಿರವಿರುವಿಕೆಯನ್ನು ದೊರಕಿಸಿದವರಲ್ಲಿ ಆಂತರಿಕ ಏಕತೆ ಹಾಗೂ ಹತ್ತಿರವಿರುವಿಕೆ ಇಲ್ಲದಿದ್ದರೆ ಬಾಹ್ಯ ಹತ್ತಿರವಿರುವಿಕೆಗೆ ಯಾವ ಅರ್ಥವೂ ಇರುವುದಿಲ್ಲ ಎಂಬುದನ್ನು ಕಂಡುಕೊಳ್ಳುವರು. ಭೌತಿಕವಾಗಿ ಮನುಷ್ಯ ಶ್ರೀಮಾತೆಯವರ ಹತ್ತಿರ ಇರಬಹುದು, ಆದಾಗ್ಯೂ ಆಂತರಿಕವಾಗಿ ಸಹರಾ ಮರುಭೂಮಿಯಷ್ಟು ದೂರ ಇರಬಹುದು.

**CWSA, 32/495** **- ಶ್ರೀ ಅರವಿಂದರು**

*

ಅತ್ಯಂತ ಮಹತ್ವದ್ದಾದ ಒಂದು ವಿಷಯವೆಂದರೆ ಆಂತರಿಕ ಮನೋಭಾವವನ್ನು ಕಾಪಾಡಿಕೊಂಡು ಬರುವುದು ಮತ್ತು ಶ್ರೀಮಾತೆಯವರೊಂದಿಗೆ ಆಂತರಿಕ ಸಂಬಂಧವನ್ನು ಸ್ಥಾಪಿಸುವುದಾಗಿದೆ. ಅದು ಎಲ್ಲ ಬಾಹ್ಯ ಪರಿಸ್ಥಿತಿಗಳಿಂದ ಮುಕ್ತವಾಗಿರಬೇಕು; ಅದೇ ಅವಶ್ಯವಾದ ಎಲ್ಲವನ್ನೂ ತಂದುಕೊಡುತ್ತದೆ. ಶ್ರೀಮಾತೆಯವರನ್ನು ಭೌತಿಕವಾಗಿ ಹೆಚ್ಚಿನ ಮಟ್ಟದಲ್ಲಿ ನೋಡಿದವರು ಯೋಗದ ಆಳಕ್ಕಿಳಿದು ಹೋದವರಾಗಿರುವುದಿಲ್ಲ. ಶ್ರೀಮಾತೆಯವರಿಗೆ ಸತತ ಹತ್ತಿರವಿರುವ ಇಲ್ಲವೆ ಅವರೊಡನೆ ಏಕತೆ ಪಡೆದ ಕೆಲವರಿದ್ದಾರೆ, ಅವರು ಪ್ರಣಾಮ ಹಾಗೂ ಸಾಯಂಕಾಲದ ಧ್ಯಾನ ಈ ಕಾರ್ಯಕ್ರಮಗಳನ್ನು ಹೊರತುಪಡಿಸಿ ಅವರ ಬಳಿ ಅವರನ್ನು ಕಾಣಲು ವರ್ಷಕ್ಕೊಮ್ಮೆ ಬರುತ್ತಾರೆ.

**CWSA, 32/496** **- ಶ್ರೀ ಅರವಿಂದರು**

*

**ಆಂತರಿಕ ಸಂಪರ್ಕವನ್ನು ದೊರಕಿಸುವುದನ್ನು ಕಲಿತುಕೊಳ್ಳಬೇಕು**

**ಪ್ರಶ್ನೆ:** *ಶ್ರೀಮಾತೆಯವರ ನಿವೃತ್ತಿ ನಮಗೆ ಬಹಳ ಮಹತ್ವದ್ದಾದ ಪ್ರಶ್ನೆಯೊಂದನ್ನು ಒಡ್ಡಿ ದಿಕ್ಕು ತೋಚದಂತೆ ಮಾಡಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಅವರ ಹಾಗೂ ಆಶ್ರಮವಾಸಿಗಳ ನಡುವಿರುವ ದೂರವನ್ನು ಅದು ವಿಸ್ತರಿಸಲಿರುವುದೆ? ಅವರ ಸತತ ಮಾರ್ಗದರ್ಶನವಿಲ್ಲದೆ ಆಶ್ರಮದ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲಾಗುವುದೆ? ಅವರ ನಿವೃತ್ತಿಯ ಅವಧಿಯಲ್ಲಿ ಸಾಧಕರ ನಿಜವಾದ ಹಿತಾರ್ಥಗಳಿಗೆ ತೊಂದರೆ ಉಂಟಾಗುವುದಿಲ್ಲವೆ? ಮೊದಲು ಅವರು ತೆಗೆದುಕೊಳ್ಳುತ್ತಿದ್ದ ನಮ್ಮ ಕಾಳಜಿಯನ್ನು ತೆಗೆದುಕೊಳ್ಳಲಿರುವರೆ?*

**ಶ್ರೀಮಾತೆ:** ಜೀವನದಲ್ಲಿ ಪ್ರತಿಯೊಬ್ಬನೂ ತಾನೇನಾಗಿರುವನೋ ಅದರ ನಿಖರವಾದ ಅಭಿವ್ಯಕ್ತಿಯನ್ನು ಭೇಟಿ ಮಾಡುತ್ತಾನೆ ಎಂಬುದನ್ನು ನೀವು ಮರೆಯಬಾರದು: ದೈವೀಕೃಪೆ ಹಾಗೂ ಆಶೀರ್ವಾದಗಳು ಸದಾ ನಿಮ್ಮ ಜೊತೆಗಿವೆ. ನನ್ನ ಶಕ್ತಿಯ ಮೇಲೆ ಅವಲಂಬಿಸಿದವರ ಯಥಾಪ್ರಕಾರದ ಕಾಳಜಿಯನ್ನು ತೆಗೆದುಕೊಳ್ಳುವುದನ್ನು ಒಂದು ದಿನ ಕೂಡ ತಪ್ಪಿಸಿಲ್ಲ.

*

ಕಾರ್ಯವನ್ನು ಕೈಕೊಳ್ಳಿರಿ– ನನ್ನ ಸ್ಫೂರ್ತಿ ಹಾಗೂ ಮಾರ್ಗದರ್ಶನ ಯಾವಾಗಲೂ ನಿಮ್ಮ ಜೊತೆಗಿರುತ್ತವೆ ಮತ್ತು ಅವಶ್ಯವಾದಾಗ ನಾನು ನಿಮ್ಮನ್ನು

ಭೌತಿಕವಾಗಿ ನೋಡುತ್ತೇನೆ. ಆದರೆ ಈ ಆವಶ್ಯಕತೆ ಕಡಿಮೆಯಾಗುತ್ತ ಹೋಗಲು ನಾನು ಕಾರ್ಯ ಕೈಕೊಳ್ಳುತ್ತಿದ್ದೇನೆ, ಏಕೆಂದರೆ ಕಾರ್ಯದ ಪರಿಪೂರ್ಣತೆಗಾಗಿ ಆಂತರಿಕ ಮಾರ್ಗದರ್ಶನವನ್ನು ಸ್ವೀಕರಿಸಲು ಶಕ್ತರಾಗುವುದು ಅತ್ಯಗತ್ಯದ್ದಾಗಿದೆ.

*

ಈಗ ನೀವಿಲ್ಲಿರುವುದರಿಂದ ಕೈಕೊಳ್ಳಬೇಕಾದ ಒಂದೇ ಕಾರ್ಯವೆಂದರೆ ಗತಕಾಲವನ್ನು ಮರೆತು ಬಿಡುವುದಾಗಿದೆ ಮತ್ತು ಇಲ್ಲಿರುವ ನಿಮ್ಮ ಕಾರ್ಯದ ಮೇಲೆ ಏಕಾಗ್ರತೆ ವಹಿಸುವುದಾಗಿದೆ. ಸದ್ಯದ ಸಮಯದಲ್ಲಿ ನಾನು ನಿಮ್ಮನ್ನು ಕ್ರಮಬದ್ಧವಾಗಿ ನೋಡಲಾರೆ, ಆದರೆ ನೀವು ಆಂತರಿಕ ಸಂಪರ್ಕ ದೊರಕಿಸುವುದನ್ನು ಕಲಿತುಕೊಳ್ಳಬೇಕು (ಅದು ನನ್ನ ನಿವೃತ್ತಿಯ ಮುಖ್ಯ ಕಾರಣ) ಮತ್ತು ನಂತರ ನಿಮಗೆ ಮಾರ್ಗದರ್ಶನ ಮಾಡಲು, ಸಹಾಯ ಮಾಡಲು ನಾನು ಯಾವಾಗಲೂ ನಿಮ್ಮ ಜೊತೆಗೆ ಇರುವೆ ಎಂಬುದನ್ನು ಮತ್ತು ನಿಮ್ಮ ಸಾಧನೆಯನ್ನು ಸರಿಯಾದ ರೀತಿಯಲ್ಲಿ ಕೈಕೊಳ್ಳಲು ಇಲ್ಲಿರುವ ಪರಿಸ್ಥಿತಿಗಳಿಗಿಂತ ಹೆಚ್ಚು ಒಳ್ಳೆಯವಾದವುಗಳು ಬೇರೆಡೆ ಇರುವುದಿಲ್ಲ ಎಂಬುದನ್ನು ತಿಳಿದುಕೊಳ್ಳುವಿರಿ.

*

ಕೆಲವೊಂದು ಯೋಚನೆಗಳು, ಭಾವನೆಗಳು ಹಾಗೂ ಕ್ರಿಯೆಗಳು ಜನರನ್ನು ನನ್ನಿಂದ ದೂರ ಕರೆದೊಯ್ಯುತ್ತವೆ ಇಲ್ಲವೆ ಎಲ್ಲ ಭೌತಿಕ ಹತ್ತಿರವಿರುವಿಕೆ ಇದ್ದಾಗಲೂ ಯಾರೋ ಒಬ್ಬರು ಹಾಗೂ ನನ್ನ ನಡುವೆ ಪ್ರತ್ಯೇಕತೆಯನ್ನು ಸೃಷ್ಟಿಸುತ್ತವೆ ಎಂದು ಹೇಳುವುದು ಹೆಚ್ಚು ಸರಿಯಾದದ್ದಾಗಿರುತ್ತದೆ.

*

**ಪ್ರಶ್ನೆ:** *ನಿಮ್ಮೊಡನೆ ಭೌತಿಕ ಸಂಪರ್ಕ ಅತ್ಯಗತ್ಯದ್ದಾಗಿದೆಯೆ?*

**ಶ್ರೀಮಾತೆ:** ಇಲ್ಲ, ಈ ಭೌತಿಕ ಸಂಪರ್ಕ ಅತ್ಯಗತ್ಯದ್ದಾಗಿಲ್ಲ. ನಿಜವಾದ ಮನೋಭಾವ ಹೊಂದಿದವರಿಗೆ, ನಿಜವಾಗಿ, ಭೌತಿಕ ಸಂಪರ್ಕ ಅವರ ದೇಹ ಪರಿವರ್ತನೆಯ ಚಲನೆಯನ್ನು ಅನುಸರಿಸಿ ಹೋಗಲು ಸಹಾಯ ಮಾಡುತ್ತದೆ, ಆದರೆ ದೇಹ ಅಪರೂಪಕ್ಕೆ ಲಾಭ ಪಡೆಯುವ ಸ್ಥಿತಿಯಲ್ಲಿರುತ್ತದೆ. ಸರ್ವಸಾಧಾರಣವಾಗಿ ಜನ್ಮದಿನಗಳಂದು ಅದು ಹೆಚ್ಚು ಗ್ರಹಣಶೀಲವಾಗಿರುತ್ತದೆ.

*

ನಾನು ಇನ್ನು ಮುಂದೆ ಕ್ರಿಯಾಶೀಲ ಜೀವನವನ್ನು ನಡೆಸುತ್ತಿರುವುದಿಲ್ಲ; ನೀವು ತೆರೆದಿರಿಸಿಕೊಂಡಿದ್ದರೆ ನಿಮಗೆ ಸಹಾಯ ಬಂದೇ ಬರುತ್ತದೆ.

**CWM, 13/78-80** **- ಶ್ರೀಮಾತೆ**

*

ನಿಮ್ಮೆಲ್ಲರಲ್ಲಿ ದ್ವಾರವನ್ನು ತೆರೆದಿರಿಸಲು ನಾನು ಅತ್ಯಂತ ಶ್ರೇಷ್ಠ ಕಾಳಜಿ ವಹಿಸುತ್ತೇನೆ, ಅದರಿಂದಾಗಿ ನಿಮ್ಮಂತರಂಗದಲ್ಲಿ ಏಕಾಗ್ರತೆಯ ಚಿಕ್ಕ ಚಲನೆ ಇದ್ದರೂ ನೀವು ಮುಚ್ಚಿದ ಹಾಗೂ ಚಲಿಸದ ದ್ವಾರದ ಮುಂದೆ ಬಹಳ ದೀರ್ಘ ಅವಧಿಗಳ ಕಾಲ ಕಾದುಕೊಂಡು ಇರಬೇಕಾಗುವುದಿಲ್ಲ, ಆ ದ್ವಾರವನ್ನು ತೆರೆಯಲು ನಿಮ್ಮಲ್ಲಿ ಬೀಗದ ಕೈ ಇರುವುದಿಲ್ಲ ಮತ್ತು ನೀವು ಅದನ್ನು ಹೇಗೆ ತೆರೆದಿಡಬೇಕೆಂಬುದು ನಿಮಗೆ ತಿಳಿದಿರುವುದಿಲ್ಲ.

ದ್ವಾರ ತೆರೆದುಕೊಂಡಿದೆ, ಕೇವಲ ನೀವು ಆ ದಿಶೆಯಲ್ಲಿ ನೋಡಬೇಕು. ಅದಕ್ಕೆ ನೀವು ನಿಮ್ಮ ಬೆನ್ನನ್ನು ತಿರುಗಿಸಬಾರದು.

*

ಯಾರದೇ ಗುರುವಾಗಲು ನಾನು ಕಾತರಳಾಗಿಲ್ಲ. ಎಲ್ಲರ ಮಾತೆಯಾಗಿರುವ ಭಾವನೆ ತಂದುಕೊಳ್ಳುವುದು ಮತ್ತು ಪ್ರೇಮದ ಸಾಮರ್ಥ್ಯದಿಂದ ಅವರನ್ನು ಮೌನದಿಂದ ಮುಂದೆ ಕೊಂಡೊಯ್ಯುವುದು ನನಗೆ ಸ್ವಯಂಪ್ರೇರಣೆಯಿಂದ ಹೆಚ್ಚು ಸ್ವಾಭಾವಿಕವಾದದ್ದೆನಿಸುತ್ತದೆ.

**CWM, 13/82** **- ಶ್ರೀಮಾತೆ**

*

## ಚೈತ್ಯ ಸಂಪರ್ಕ ದೂರದಿಂದಲೂ ಕೂಡ ಇರುವ ಸಾಧ್ಯತೆ ಇದೆ

ಚೈತ್ಯ ಸಂಪರ್ಕವನ್ನು ದೂರದಿಂದಲೂ ಕೂಡ ಪಡೆಯುವ ಸಾಧ್ಯತೆಯಿದೆ, ಭಗವಂತ ಸ್ಥಳಕ್ಕೆ ಸೀಮಿತಗೊಂಡಿರುವುದಿಲ್ಲ, ಆದರೆ ಎಲ್ಲೆಡೆಯಲ್ಲಿಯೂ ಇದ್ದಾನೆ ಎಂಬುದು ನಿಶ್ಚಿತವಾಗಿ ಬಹಳ ಸತ್ಯವಾದ ಸಂಗತಿ. ಆಧ್ಯಾತ್ಮಿಕ ಜೀವನ ನಡೆಸಲು ಇಲ್ಲವೆ ಈ ಯೋಗವನ್ನು ವಿಶೇಷವಾಗಿ ಅದರ ಮೊದಲ ಹಂತದಲ್ಲಿ ಆಚರಿಸಲು ಪ್ರತಿಯೊಬ್ಬನೂ ಇಲ್ಲಿ ಪಾಂಡಿಚೇರಿಗೆ ಬರಬೇಕು ಇಲ್ಲವೆ ಭೌತಿಕವಾಗಿ ಶ್ರೀಮಾತೆಯವರ ಬಳಿ ಇರಬೇಕು ಎಂಬುದು ಅವಶ್ಯವಾಗಿರುವುದಿಲ್ಲ, ಆದರೆ

ಇದು ಸತ್ಯದ ಒಂದು ಬದಿ ಮಾತ್ರ, ಇನ್ನೊಂದು ಬದಿ ಇದೆ. ಹಾಗಿರದಿದ್ದರೆ ಶ್ರೀಮಾತೆಯವರು ಇಲ್ಲಿರುವ ಆವಶ್ಯಕತೆ ಇರುತ್ತಿರಲಿಲ್ಲ, ಆಶ್ರಮ ಅಸ್ತಿತ್ವದಲ್ಲಿರುವುದಕ್ಕೆ ಕಾರಣವಿರುತ್ತಿರಲಿಲ್ಲ, ಇಲ್ಲವೆ ಯಾರಾದರೂ ಇಲ್ಲಿಗೆ ಬರುವಂತಾಗುತ್ತಿರಲಿಲ್ಲ ಎಂಬ ತರ್ಕಬದ್ಧ ತೀರ್ಮಾನಕ್ಕೆ ಬರಬೇಕಾಗುವುದು.

ಚೈತ್ಯಸತ್ತೆ ಎಲ್ಲರಲ್ಲಿಯೂ ಇದೆ, ಆದರೆ ಅತಿ ಕಡಿಮೆ ಜನರಲ್ಲಿ ಅದು ಸರಿಯಾಗಿ ಅಭಿವೃದ್ಧಿ ಹೊಂದಿರುತ್ತದೆ, ಪ್ರಜ್ಞೆಯಲ್ಲಿ ಸರಿಯಾಗಿ ನಿರ್ಮಾಣ–ವಾಗಿರುತ್ತದೆ, ಇಲ್ಲವೆ ಮುಂದಿನ ಭಾಗದಲ್ಲಿ ಗಮನ ಸೆಳೆಯುವಂತಿರುತ್ತದೆ. ಬಹಳಷ್ಟು ಜನರಲ್ಲಿ ಅದು ಪರದೆಯ ಹಿಂದಿರುತ್ತದೆ, ಬಹಳಷ್ಟು ಸಲ ಪರಿಣಾಮಕಾರಿಯಾಗಿರುವುದಿಲ್ಲ, ಸಾಕಷ್ಟು ಪ್ರಜ್ಞಾಪೂರ್ಣವಾಗಿರುವುದಿಲ್ಲ ಇಲ್ಲವೆ ಆಧ್ಯಾತ್ಮಿಕ ಜೀವನಕ್ಕೆ ಆಧಾರ ನೀಡಲು ಸಾಕಷ್ಟು ಬಲವುಳ್ಳದ್ದಾಗಿರುವುದಿಲ್ಲ. ಈ ಕಾರಣದಿಂದಾಗಿ ಈ ದೈವೀ ಸತ್ಯದತ್ತ ಎಳೆತಕ್ಕೊಳಗಾದವರು ಇಲ್ಲಿಗೆ ಬರುವುದು ಅವಶ್ಯವಾಗಿರುತ್ತದೆ, ಅದರಿಂದಾಗಿ ಅವರು ಸ್ಪರ್ಶ ಪಡೆಯುವಂತಾಗುವುದು, ಆ ಸ್ಪರ್ಶ ಚೈತ್ಯಸತ್ತೆ ಎಚ್ಚತ್ತುಕೊಳ್ಳುವಂತೆ ಮಾಡುವುದು ಇಲ್ಲವೆ ಚೈತ್ಯಸತ್ತೆ ಎಚ್ಚತ್ತುಕೊಳ್ಳಲು ತಯಾರು ಮಾಡುವುದು– ಅದು ಅವರಿಗೆ ಪರಿಣಾಮಕಾರಿ ಚೈತ್ಯ ಸಂಪರ್ಕದ ಪ್ರಾರಂಭ. ಈ ಕಾರಣದಿಂದಾಗಿಯೇ ಬಹಳಷ್ಟು ಜನರಿಗೆ ಇಲ್ಲಿ ಸ್ವಲ್ಪ ಕಾಲ ಉಳಿದುಕೊಳ್ಳುವುದರ ಆವಶ್ಯಕತೆ ಇರುತ್ತದೆ,– ಅದರಿಂದಾಗಿ ನೇರವಾದ ಪ್ರಭಾವ ಹಾಗೂ ಹತ್ತಿರ ಇರುವಿಕೆ ಇವುಗಳಿಂದಾಗಿ ಪ್ರಜ್ಞೆಯಲ್ಲಿ ಚೈತ್ಯಸತ್ತೆಯ ಅಭಿವೃದ್ಧಿ ಇಲ್ಲವೆ ನಿರ್ಮಾಣಗೊಳ್ಳುವಿಕೆಯನ್ನು ಅವರು ಹೊಂದಬಹುದು ಇಲ್ಲವೆ ಚೈತ್ಯಸತ್ತೆ ಮುಂಭಾಗಕ್ಕೆ ಬರಬಹುದು. ಸಾಧಕನಲ್ಲಿ ಕ್ಷಮತೆ ಇದ್ದ ಮಟ್ಟಿಗೆ ಅವನಿಗೆ ಸ್ಪರ್ಶ ಕೊಟ್ಟಾಗ ಇಲ್ಲವೆ ಅಭಿವೃದ್ಧಿ ಪರಿಣಾಮಕಾರಿಯಾದಾಗ ಅವನು ಬಾಹ್ಯ ಜಗತ್ತಿಗೆ ಮರಳಿ ಹೋಗುತ್ತಾನೆ ಮತ್ತು ರಕ್ಷಣೆ ಹಾಗೂ ಮಾರ್ಗದರ್ಶನ ಇವುಗಳಡಿಯಲ್ಲಿ, ದೂರದಲ್ಲಿದ್ದಾಗಲೂ ಕೂಡ ಸಂಪರ್ಕವನ್ನು ಅವನು ಕಾಪಾಡಿಕೊಂಡು ಬರಬಲ್ಲನು ಮತ್ತು ಆಧ್ಯಾತ್ಮಿಕ ಜೀವನದೊಂದಿಗೆ ಸಾಗಿ ಹೋಗಬಲ್ಲನು. ಆದರೆ ಬಾಹ್ಯ ಜಗತ್ತಿನ ಪ್ರಭಾವಗಳು ಚೈತ್ಯ ಸಂಪರ್ಕಕ್ಕೆ ಹಾಗೂ ಚೈತ್ಯದ ಅಭಿವೃದ್ಧಿಗೆ ಅನುಕೂಲಕರವಾಗಿರುವುದಿಲ್ಲ ಮತ್ತು ಸಾಧಕ ಸಾಕಷ್ಟು ಕಾಳಜಿ ವಹಿಸದಿದ್ದರೆ, ಏಕಾಗ್ರತೆಯಲ್ಲಿರದಿದ್ದರೆ, ಕೆಲಕಾಲದ ನಂತರ ಚೈತ್ಯ ಸಂಪರ್ಕವನ್ನು ಸುಲಭವಾಗಿ ಕಳೆದುಕೊಳ್ಳಬಹುದು, ಅದರ ಮೇಲೆ ಆವರಣ ಬಂದುಬಿಡಬಹುದು ಹಾಗೂ ಅಭಿವೃದ್ಧಿ

ಕುಂಠಿತವಾಗಬಹುದು, ಸ್ಥಿರಗೊಳ್ಳಬಹುದು ಇಲ್ಲವೆ ವಿರೋಧೀ ಪ್ರಭಾವಗಳಿಂದ ಇಲ್ಲವೆ ಚಲನೆಗಳಿಂದ ಕುಗ್ಗಿ ಹೋಗಬಹುದು. ಹಾಗಾಗಿ ಆ ಆವಶ್ಯಕತೆ ಅಸ್ತಿತ್ವದಲ್ಲಿರುತ್ತದೆ, ಬಹಳಷ್ಟು ಸಲ ಕೇಂದ್ರ ಪ್ರಭಾವವಿರುವ ಸ್ಥಾನಕ್ಕೆ ಮರಳಿ ಹೋಗಬೇಕೆಂಬ ಭಾವನೆ ಬರುತ್ತದೆ, ಅದರಿಂದಾಗಿ ಸಂಪರ್ಕವನ್ನು ಪುನರ್ವಶ–ಪಡಿಸಿಕೊಳ್ಳುವಂತಾಗುವುದು ಇಲ್ಲವೆ ಮರಳಿ ಪಡೆಯುವಂತಾಗುವುದು ಇಲ್ಲವೆ ಅಭಿವೃದ್ಧಿಗಾಗಿ ಮುಂದೆ ಸಾಗುವಂತೆ ಮಾಡುವ ತಾಜಾ ಪ್ರಚೋದನೆಯನ್ನು ಕೊಡುವಂತಾಗುವುದು. ಕಾಲಕಾಲಕ್ಕೆ ಉಂಟಾಗುವ ಇಂತಹ ಹತ್ತಿರವಿರುವಿಕೆಗಾಗಿ ಅಭೀಪ್ಸೆ ಪ್ರಾಣಿಕ ಆಸೆಯಲ್ಲ; ಅಹಂಮನ್ಯತೆಯಿಂದ ಒತ್ತಾಯಕ್ಕೊಳಗಾದಾಗ ಇಲ್ಲವೆ ಪ್ರಾಣಿಕ ಉದ್ದೇಶದೊಡನೆ ಮಿಶ್ರಣಗೊಂಡಾಗ ಅದು ಪ್ರಾಣಿಕ ಆಸೆಯಾಗಿರುತ್ತದೆ.– ಸ್ಥಿರವಾದ, ಆಳವಾದ, ಗದ್ದಲವಿಲ್ಲದೆ ಇಲ್ಲವೆ ಕದಡುವ ಒತ್ತಾಯವಿಲ್ಲದೆ ಇರುವ ಚೈತ್ಯಸತ್ತೆಯ ಒಂದು ಅಭೀಪ್ಸೆ ಪ್ರಾಣಿಕ ಆಸೆಯಾಗಿರುವುದಿಲ್ಲ.

ಇದು ಆಶ್ರಮದಲ್ಲಿರುವ ಕೇಂದ್ರ ದೈವೀಶಕ್ತಿ ಹಾಗೂ ದೈವೀ ಸಾನ್ನಿಧ್ಯ ಇವುಗಳ ನೇರವಾದ ಒತ್ತಡದಡಿಯಲ್ಲಿ ವಾಸಿಸಲು ಕರೆ ಕೊಡದಿರುವವರಿಗಾಗಿ ಹಾಗೂ ಇನ್ನೂ ಕರೆ ನೀಡದೆ ಇರುವವರಿಗಾಗಿ ಇದೆ. ಹಾಗೆ ಇರಲೇಬೇಕಾದವರಿಗೆ ಮೊದಲೇ ಕರೆ ಕೊಡಲಾಗಿದೆ, ಇಲ್ಲವೆ ತಯಾರಾದವರಿಗೆ ಇಲ್ಲವೆ ಒಂದಿಲ್ಲೊಂದು ಕಾರಣಕ್ಕಾಗಿ ಯೋಗಕ್ಕಾಗಿ ತಯಾರು ಮಾಡುತ್ತಿರುವ ಕಾರ್ಯದ ಇಲ್ಲವೆ ರಚನೆಯ ಕಾರ್ಯದ ಭಾಗವೆಂದಾಗಿ ಬಂದವರಿಗೆ ಇಲ್ಲಿರಲು ಅವಕಾಶವನ್ನು ಕೊಡಲಾಗಿದೆ. ಅವರಿಗೆ ಇಲ್ಲಿಯ ವಾತಾವರಣದಲ್ಲಿ ಹಾಗೂ ಹತ್ತಿರ ಇರುವಿಕೆಯಲ್ಲಿ ಉಳಿದುಕೊಳ್ಳುವುದು ಅತ್ಯಗತ್ಯದ್ದಾಗಿದೆ, ಇಲ್ಲಿಂದ ಹೊರಟು ಹೋಗುವುದು ಅವರಿಗೆ ಕೊಟ್ಟ ಅವಕಾಶದ ತ್ಯಾಗ, ಆಧ್ಯಾತ್ಮಿಕ ಅದೃಷ್ಟದತ್ತ ಬೆನ್ನು ಹೊರಳಿಸುವುದಾಗಿದೆ. ಬಹಳಷ್ಟು ಸಲ ಅವರ ತೊಂದರೆಗಳು ತೋರಿಕೆಗೆ ಬಾಹ್ಯದಲ್ಲಿದ್ದವರ ತೊಂದರೆಗಳಿಗಿಂತ ಹೆಚ್ಚಾಗಿರುವಂತೆ ಕಂಡುಬರುತ್ತವೆ; ಹಾಗೆಯೇ ಅವರ ಅವಕಾಶ ಶ್ರೇಷ್ಠತರವಾದದ್ದು ಮತ್ತು ಅಭಿವೃದ್ಧಿಗಾಗಿ ಸಾಮರ್ಥ್ಯವನ್ನು ಹಾಗೂ ಪ್ರಭಾವವನ್ನು ಅವರ ಮೇಲೆ ಸುರಿಯಲಾಗಿರುತ್ತದೆ, ಅವರು ಆಯ್ಕೆಗೆ ಹಾಗೂ ಕರೆಗೆ ನಿಷ್ಠಾವಂತರಾಗಿದ್ದರೆ ಅವರು ಆಧ್ಯಾತ್ಮಿಕವಾಗಿ ಆಗಬಹುದಾದುದನ್ನು ಕೂಡ ಅವರಿಗೆ ಕೊಡಲಾಗಿರುತ್ತದೆ.

**CWSA, 35/574-76** **- ಶ್ರೀ ಅರವಿಂದರು**

*

**ವಿಶಿಷ್ಟವಾದ ಒಂದು ವೈಯಕ್ತಿಕ ಸಂಬಂಧ**

ಇದು ಬಹಳ ಹಿಂದೆ ನಡೆದದ್ದು. ಶ್ರೀ ಅರವಿಂದರು ಆಶ್ರಮದ ಎಲ್ಲೆಡೆಗಳಲ್ಲಿ ನೆನಪಿಗೆ ತಂದುಕೊಡುವ ಈ ವಾಕ್ಯವನ್ನು: "ಶ್ರೀಮಾತೆಯವರು ನಿಮ್ಮನ್ನು ನೋಡುತ್ತಿರುವ ಹಾಗೆ ಯಾವಾಗಲೂ ನಡೆದುಕೊಳ್ಳಬೇಕು, ಏಕೆಂದರೆ, ನಿಜವಾಗಿ, ಅವರ ಸಾನ್ನಿಧ್ಯ ಯಾವಾಗಲೂ ಉಪಸ್ಥಿತ (present)ವಿರುತ್ತದೆ" ಎಲ್ಲರ ಕಣ್ಣಿಗೆ ಬೀಳುವಂತೆ ಬರೆಸಿ ಇರಿಸಿದ್ದರು.

ಇದು ಕೇವಲ ಒಂದು ಪದಗುಚ್ಛವಲ್ಲ, ಕೇವಲ ಕೆಲ ಶಬ್ದಗಳಲ್ಲಿಲ್ಲ, ಅದು ವಾಸ್ತವ ಸಂಗತಿ. ನಾನು ನಿಮ್ಮೊಡನೆ ಬಹಳ ಮೂರ್ತರೂಪದಲ್ಲಿರುತ್ತೇನೆ, ಸೂಕ್ಷ್ಮದೃಷ್ಟಿಯುಳ್ಳವರು ನನ್ನನ್ನು ನೋಡಬಲ್ಲರು.

ನಿಮ್ಮ ಸತ್ತೆಯ ಮನೋವೈಜ್ಞಾನಿಕ ಅಂಶಗಳ ಸ್ಥಾನಗಳನ್ನು ಬದಲಿಸುತ್ತ ಅವುಗಳನ್ನು ಹೊಸ ಸಂಬಂಧಗಳಲ್ಲಿರಿಸುತ್ತ, ನಿಮಗೇ ನಿಮ್ಮ ಸ್ವಭಾವದ ಭಿನ್ನ ಮುಖಗಳನ್ನು ಕುರಿತು ವ್ಯಾಖ್ಯೆ ನೀಡುತ್ತ ನಾನು ಸರ್ವಸಾಧಾರಣ ರೀತಿಯಲ್ಲಿ ಅಲ್ಲಿ ಕಾರ್ಯನಿರತಳಾಗಿರುತ್ತೇನೆ, ಅದರಿಂದಾಗಿ ನೀವು ಏನನ್ನು ಬದಲು ಮಾಡಬೇಕು, ಅಭಿವೃದ್ಧಿಪಡಿಸಬೇಕು, ಮತ್ತು ಏನನ್ನು ತಿರಸ್ಕರಿಸಬೇಕು ಎಂಬುದನ್ನು ನೋಡುವಂತಾಗುತ್ತದೆ.

ಅದನ್ನು ಹೊರತುಪಡಿಸಿ ನನ್ನ ಹಾಗೂ ನಿಮ್ಮ ನಡುವೆ ಹಾಗೂ ಶ್ರೀ ಅರವಿಂದರ ಮತ್ತು ನನ್ನ ಬೋಧನೆಗಳತ್ತ ಹೊರಳಿಕೊಂಡವರ ನಡುವೆ ವಿಶಿಷ್ಟ ವೈಯಕ್ತಿಕ ಸಂಬಂಧವಿದೆ, ಮತ್ತು ಅದನ್ನು ಸರಿಯಾಗಿ ತಿಳಿದುಕೊಳ್ಳಲಾಗಿದೆ, ಇಲ್ಲಿ ದೂರ ಲೆಕ್ಕಕ್ಕೆ ಬರುವುದಿಲ್ಲ. ನೀವು ಫ್ರಾನ್ಸನಲ್ಲಿರಬಹುದು, ಜಗತ್ತಿನ ಇನ್ನೊಂದು ತುದಿಯಲ್ಲಿರಬಹುದು ಇಲ್ಲವೆ ಪಾಂಡಿಚೇರಿಯಲ್ಲಿಯೇ ಇರಬಹುದು, ಈ ಸಂಬಂಧ ಯಾವಾಗಲೂ ಸತ್ಯವಾದದ್ದು ಹಾಗೂ ಜೀವಂತವಿರುವಂತಹದು. ನನಗೆ ಕರೆ ಬಂದ ಪ್ರತಿಯೊಂದು ಸಲ, ನಾನದನ್ನು ಪ್ರತಿಯೊಂದು ಸಲ ತಿಳಿದುಕೊಳ್ಳುವ ಆವಶ್ಯಕತೆ ಇರುತ್ತದೆ, ಅದರಿಂದಾಗಿ ನಾನೊಂದು ಶಕ್ತಿಯನ್ನು, ಒಂದು ಸ್ಫೂರ್ತಿಯನ್ನು, ಒಂದು ರಕ್ಷಣೆಯನ್ನು ಇಲ್ಲವೆ ಬೇರೆ ಏನನ್ನಾದರೂ ಹೊರಗೆ ಕಳಿಸಿಕೊಡುವಂತಾಗುತ್ತದೆ; ಹಠಾತ್ತನೆ ನನಗೊಂದು ಸಂದೇಶ ಬರುತ್ತದೆ ಮತ್ತು ನಾನು ಅವಶ್ಯವಾದದ್ದನ್ನು ಕೈಕೊಳ್ಳುತ್ತೇನೆ...

ನಿಮ್ಮ ಹಾಗೂ ನನ್ನ ನಡುವಿರುವ ಈ ಸಂಬಂಧ ಎಂದಿಗೂ ಕಡಿದು ಹೋಗುವುದಿಲ್ಲ. ಬಂಡಾಯದ ಸ್ಥಿತಿಯಲ್ಲಿ ಆಶ್ರಮವನ್ನು ತೊರೆದು ಹೋದ ಕೆಲವರಿದ್ದಾರೆ, ಆದಾಗ್ಯೂ ನಾನು ಅವರ ಬಗ್ಗೆ ತಿಳಿದುಕೊಳ್ಳುವುದನ್ನು ಕಾಪಾಡಿಕೊಂಡು ಬರುತ್ತೇನೆ. ನಾನು ಅವರನ್ನು ಗಮನಿಸುತ್ತೇನೆ. ನಿಮ್ಮನ್ನು ಎಂದಿಗೂ ಬಿಟ್ಟುಕೊಡಲಾಗುವುದಿಲ್ಲ.

ಸತ್ಯ ಹೇಳುವುದಾದರೆ ನಾನು ಪ್ರತಿಯೊಬ್ಬರ ಹೊಣೆ ಹೊತ್ತುಕೊಂಡಿರುತ್ತೇನೆ, ನನ್ನ ಜೀವನದಲ್ಲಿ ನಾನು ಕ್ಷಣಮಾತ್ರಕ್ಕೂ ಭೇಟಿ ಮಾಡಿದವರ ಜವಾಬ್ದಾರಿಯನ್ನು ವಹಿಸುತ್ತೇನೆ.

**CWM, 13/73-74** **- ಶ್ರೀಮಾತೆ**

*

ಇಲ್ಲ, ಆಶ್ರಮದಲ್ಲಿರುವುದಷ್ಟೇ ಸಾಕಾಗದು,– ಮನುಷ್ಯ ಶ್ರೀಮಾತೆಯವರಿಗೆ ತನ್ನನ್ನು ತೆರೆದಿರಿಸಿಕೊಂಡಿರಬೇಕು, ಹಾಗೂ ಜಗತ್ತಿನಲ್ಲಿ ಅವನು ಆಟದಲ್ಲಿ ತೊಡಗಿಕೊಂಡಿದ್ದ ಮಣ್ಣನ್ನು ದೂರದಲ್ಲಿರಿಸಬೇಕು.

**CWSA, 32/156** **- ಶ್ರೀ ಅರವಿಂದರು**

*

**ಶ್ರೀ ಅರೋಬಿಂದೋ ಆಶ್ರಮ ಕುರಿತು ನೋಲಿನಿ ದಾ***

ಪೃಥ್ವಿ ಜಗತ್ತಿನ ಪ್ರತಿನಿಧಿಯಾಗಿರುವಂತೆ ಭಾರತ ಪೃಥ್ವಿಯ ಪ್ರತಿನಿಧಿ–ಯಾಗಿದೆ. ಪೃಥ್ವಿಯ ಉತ್ಕ್ರಾಂತಿಗಾಗಿ ಭಾರತವನ್ನು ಒಂದು ವಾಹಿನಿಯೆಂದಾಗಿ ಹಾಗೂ ಒಂದು ಹಾಗೂ ಪ್ರಯೋಗಶಾಲೆಯೆಂದು ಆಯ್ದುಕೊಳ್ಳಲಾಗಿದೆ; ಮನುಕುಲವನ್ನು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳು ಇಲ್ಲಿ ಒಟ್ಟಿಗೆ ಸೇರಿದ ಹಾಗಿವೆ. ಇಲ್ಲಿ ಪರಿಹಾರ ಕಂಡುಕೊಂಡದ್ದೆಲ್ಲ ಬಹುಮಟ್ಟಿಗೆ ಸ್ವಯಂಚಾಲಿತವಾಗಿ ಜಗತ್ತಿನಲ್ಲಿ ಪರಿಹಾರ ಕಂಡುಕೊಳ್ಳುತ್ತದೆ ಮತ್ತು ಅದನ್ನು ಹೇಗೆ ಮಾಡಲಾಯಿತು ಎಂಬುದನ್ನು ತೋರಿಸಿಕೊಡಲಾಗುವುದು. ಎಲ್ಲ ತೊಂದರೆಗಳು ಇಲ್ಲಿ ಕೇಂದ್ರೀಕರಣಗೊಂಡಿವೆ, ಏಕೆಂದರೆ ಅವುಗಳಿಗೆ ಪರಿಹಾರ ನೀಡುವ ಏಕೈಕ ಜೀವಂತ ಪ್ರಜ್ಞೆ ಇಲ್ಲಿದೆ.

---

* ಶ್ರೀ ಅರವಿಂದರ ಮಾನಸಪುತ್ರರೆಂದು ಕರೆಯಲಾದ ನೋಲಿನಿಕಾಂತ ಗುಪ್ತಾ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದ ಕಾಲದಿಂದ ಆಶ್ರಮದ ಜೀವನದಲ್ಲಿ ಶ್ರೀ ಅರವಿಂದರ ಜೊತೆಗಿದ್ದರು. ಅವರು ಆಶ್ರಮದ ಪ್ರತಿಷ್ಠಾನದ ಸ್ತಂಭವಾಗಿದ್ದಾರೆ.

ಅದೇ ರೀತಿಯಲ್ಲಿ ಇಲ್ಲಿ ನಮ್ಮ ಆಶ್ರಮ, ಬಹುಮಟ್ಟಿಗೆ ಎಲ್ಲ ತೊಂದರೆಗಳ ಸಂಕೇತವಾಗಿದೆ, ಈ ತೊಂದರೆಗಳು ಮನೋವೈಜ್ಞಾನಿಕ, ಪ್ರಾಪಂಚಿಕ, ರಾಷ್ಟ್ರೀಯ ಹಾಗೂ ಸಾಮಾಜಿಕವಾದವುಗಳಾಗಿವೆ. ವಿರೋಧೋಕ್ತಿಗಳ, ವೈರುಧ್ಯಗಳ, ಅಡೆತಡೆಗಳ ಹಾಗೂ ಪ್ರತಿಬಂಧಕಗಳ, ಅಜ್ಞಾನಗಳ ಹಾಗೂ ಪೂರ್ವಗ್ರಹ–ಗಳಿರುವ ವೈವಿಧ್ಯ ಇಲ್ಲಿದೆ, ಅದು ವಿವಾದಾತ್ಮಕ ವಿಷಯವನ್ನು ಗೊಂದಲಕ್ಕೀಡು ಮಾಡುತ್ತದೆ, ಪ್ರಗತಿಯತ್ತ ಹಾಗೂ ಹೊಸ ಸೃಷ್ಟಿಯತ್ತ ಪ್ರಯಾಣವನ್ನು ಸಾಧ್ಯವಿದ್ದಷ್ಟು ನಿಧಾನಗೊಳಿಸಲು ಅರಸುತ್ತದೆ. ಇದು ಹೀಗೇಕೆ ಇದೆಯೆಂದರೆ ಅಲ್ಲಿ ಮೇಲ್ಮೈಯ ಮೇಲಿನ ನಕಾರಾತ್ಮಕ ಚಲನೆಗಳ ಹಿಂದೆ ಒಂದು ಅಭೀಪ್ಸೆ ಹಾಗೂ ಆಧಾರ ನೀಡುವ ಪ್ರಜ್ಞೆಗಳಿವೆ ಇವು ಸಾಮರ್ಥ್ಯದಲ್ಲಿ ಹಾಗೂ ಪರಿಣಾಮಕಾರಿತ್ವದಲ್ಲಿ ಪರಮೋಚ್ಚವಾಗಿವೆ ಇಲ್ಲಿರುವ ವ್ಯಕ್ತಿಗಳು ಎಲ್ಲ ಬಗೆಯ ತೊಂದರೆಗಳನ್ನು ಭೇಟಿ ಮಾಡಬೇಕಾಗುತ್ತದೆ ಅದರಿಂದಾಗಿ ಅವುಗಳಿಂದ ಹೊರಗೆ ಮಾರ್ಗವನ್ನು ಶೋಧಮಾಡಲಾಗುವುದು, ಆ ಮಾರ್ಗ ವ್ಯಕ್ತಿಯ ಸ್ವಭಾವದಲ್ಲಿ ಹಾಗೂ ಸಾಮೂಹಿಕ ಸಿದ್ಧಿಯಲ್ಲಿರುವುದು.

**CWNKG 1, 4/269-70** **- ನೊಲಿನಿಕಾಂತ ಗುಪ್ತ**

*

ಶ್ರೀಮಾತೆಯವರು ಕೂಡ ಹೇಳಿದ್ದಾರೆ: ಭಾರತ ಜಗತ್ತಿನ ಒಂದು ಪ್ರತಿನಿಧಿ ಇಲ್ಲವೆ ಸೂಕ್ಷ್ಮರೂಪ (epitome)– ಸರಿಯಾಗಿ ಅದೇ ರೀತಿಯಲ್ಲಿ ಆಶ್ರಮ ಭಾರತದ ಸೂಕ್ಷ್ಮರೂಪ ಇದ್ದ ಹಾಗೆ, ಪ್ರತಿಯೊಬ್ಬ ವ್ಯಕ್ತಿ ತನ್ನ ವತಿಯಿಂದ ಆಶ್ರಮದ ಸೂಕ್ಷ್ಮರೂಪವಾಗಿದ್ದಾನೆ– ಜಗತ್ತಿನ ಸಮಸ್ಯೆಗಳನ್ನು ಭಾರತದಲ್ಲಿ ಪರಿಹರಿಸಬೇಕಾಗುವುದು. ಏಕೆಂದರೆ ಭಾರತಕ್ಕೆ ಕ್ಷಮತೆಯಿದೆ ಮತ್ತು ಅದನ್ನು ಕೈಕೊಳ್ಳುವ ಅದೃಷ್ಟವಿದೆ. ಭಾರತ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಂಡಾಗ, ಜಗತ್ತು ಕೂಡ ತನ್ನ ಸಮಸ್ಯೆಗಳು ವ್ಯಾವಹಾರಿಕವಾಗಿ ಪರಿಹಾರ ಕಂಡುಕೊಂಡದ್ದನ್ನು ನೋಡುತ್ತದೆ. ಭಾರತದ ಸಮಸ್ಯೆಗಳಿಗೆ ಆಶ್ರಮ ಕೂಡ ಪರಿಹಾರ ಕಂಡುಕೊಂಡದ್ದನ್ನು ನೋಡುತ್ತದೆ. ಭಾರತದ ಸಮಸ್ಯೆಗಳಿಗೆ ಆಶ್ರಮ ಕೂಡ ಪರಿಹಾರ ಕಂಡುಕೊಳ್ಳುವುದನ್ನು ನಿರೀಕ್ಷಿಸಲಾಗಿದೆ. ಆಶ್ರಮ ತನ್ನ ಪಾತ್ರವನ್ನು ವಹಿಸಲು ಮೇಲೆದ್ದು ಬರುವುದೇ? ಕನಿಷ್ಠಪಕ್ಷ ಅದು ಶ್ರೀಮಾತೆಯವರ ಉದ್ದೇಶವಾಗಿತ್ತು. ಅದೆಲ್ಲವೂ ಆಶ್ರಮದ ವ್ಯಕ್ತಿಗತ ಸದಸ್ಯರ ಮೇಲೆ ಅವಲಂಬಿಸಿದೆ.

ಸಹಜವಾಗಿ ಶ್ರೀಮಾತೆಯವರ ಸಹಾಯ ಯಾವಾಗಲೂ ಅಲ್ಲಿದೆ ಎಂಬುದನ್ನು ನಾವು ನೆನಪಿಗೆ ತಂದುಕೊಳ್ಳಬೇಕು.

*

ಹೊಸ ಸೃಷ್ಟಿ ಈಗಾಗಲೆ ಅಲ್ಲಿದೆ– ತನ್ನನ್ನು ರೂಪಿಸಿಕೊಳ್ಳುತ್ತಿದೆ– ಸದ್ಯ ಆಶ್ರಮದಲ್ಲಿ ಹಾಗೂ ಬಾಹ್ಯದಲ್ಲಿ ಸಂಭವಿಸುತ್ತಿರುವುದು ಸಂಭವಿಸುತ್ತಿದೆ, ಅದರಿಂದಾಗಿ ಅದು ಆದಷ್ಟು ಬೇಗ ಮುಂದೆ ಬರುವಂತಾಗಲಿ. ಶ್ರೀಮಾತೆ–ಯವರು ಬಾಹ್ಯದಲ್ಲಿರುವ ಕಾಲಾವಧಿಯ ಸಾಮಗ್ರಿಯನ್ನು (scaffolding) ಮುರಿದು ಹಾಕುತ್ತಿದ್ದಾರೆ, ಅದರೊಳಗೆ ಹೊಸ ನೈಜತೆಯನ್ನು ಸ್ಥಾಪಿಸಲಾಗಿದೆ. ಇಲ್ಲವೆ ನೀವು ಅದನ್ನು ಮೃತ–ಚಿಪ್ಪು ಎಂದು ಕರೆಯಬಹುದು. ಅದನ್ನು ಮುರಿದು ಹಾಕಲಾಗುತ್ತಿದೆ, ಅದರಿಂದಾಗಿ ಹೊಸ ನೈಜತೆ ಹೊರಗೆ ಬರುವಂತಾಗುತ್ತದೆ. ಅವರು ತಮ್ಮ ಛಿನ್ನಮಸ್ತ[1] ರೂಪವನ್ನು ಧಾರಣ ಮಾಡಿದ್ದಾರೆ. ಅವರು ನಾಶ ಮಾಡುತ್ತಿರುವ ಎಲ್ಲ ವಸ್ತುಗಳು ಸ್ವತಃ ಅವರವೇ ಆಗಿವೆ– ಅವರು ತಮ್ಮದೇ ದೇಹದ ಹಳೆಯ, ಉಪಯೋಗಕ್ಕೆ ಬಾರದ ಅಂಗಾಂಗಗಳನ್ನು ನಿರ್ಮೂಲ ಮಾಡುತ್ತಿರುವಂತಿದೆ. ಶ್ರೀ ಅರವಿಂದರು ಬರೆದ ಸಾಲುಗಳನ್ನು ನಾವು ನೆನಪಿಗೆ ತಂದುಕೊಳ್ಳಬಹುದು. "...ಗಳಿಗೆ ಬಹಳಷ್ಟು ಸಲ ಭಯಾನಕವಾಗಿರುತ್ತದೆ, ಅಗ್ನಿಯಿರುತ್ತದೆ, ಸುಂಟರಗಾಳಿ ಹಾಗೂ ಚಂಡಮಾರುತ ಗಳಿರುತ್ತವೆ, ಭಗವಂತನ ಕಡುಕೋಪದ ಮದ್ಯಗಾಣದಿಂದ ನಜ್ಜುಗುಜ್ಜು ಮಾಡುವಿಕೆಯಿರುತ್ತದೆ, ಅದರಲ್ಲಿ ಯಾರು ಎದ್ದು ನಿಲ್ಲಲು ಶಕ್ತರಾಗಿರುವನೋ ಅವನು ಪತನಗೊಂಡರೂ ಮತ್ತೆ ಮೇಲಕ್ಕೇಳುತ್ತಾನೆ, ಗಾಳಿಯ ರೆಕ್ಕೆಗಳ ಮೇಲೆ ಸಾಗಿ ಹೋದಂತೆ ಕಂಡುಬಂದರೂ ಅವನು ಮರಳಿ ಬರುತ್ತಾನೆ. ಜಗತ್ತಿನ ವ್ಯವಹಾರ ಪರಿಜ್ಞಾನ ನಿಮ್ಮ ಕಿವಿಗಳಲ್ಲಿ ಅತಿ ಹತ್ತಿರದಿಂದ ಪಿಸುಗುಟ್ಟುವುದಕ್ಕೆ ಅನುವು ಮಾಡಿಕೊಡುವುದು ಬೇಡ, ಏಕೆಂದರೆ ಆ ಗಳಿಗೆ ಅನಿರೀಕ್ಷಿತವಾದದ್ದು."[2]

**CWNKG, Vol.6:258** **- ನೊಲಿನಿಕಾಂತ ಗುಪ್ತ**

*

---

[1] ದೈವೀ ಮಾತೆಯ ಕಡುಕೋಪದ ಅತಿ ಭಯಂಕರ ರೂಪ, ಅದರಲ್ಲಿ ಅವಳು ತನ್ನದೇ ಶಿರವನ್ನು ಕಡಿದು ಹಾಕುತ್ತಾಳೆ.

[2] CWSA, 12/146



*Immortality, unity*
*and freedom are in ourselves*
*and await there our discovery...*

- Sri Aurobindo

**RNI No. 22511/1971**
No. of Pages **72 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.